''ಜಿಲ್ಲಾ ಪರಿಷತ್ತು ಸದಸ್ಯರುಗಳು ಸಾರ್ವಜನಿಕರ ಕೆಲಸದ ನಿಮಿತ್ತ ವಿಧಾನಸೌಧದಲ್ಲಿ ಅಧಿಕಾರಿಗಳೊಡನೆ ಅಥವಾ ಸಚಿವರುಗಳೊಡನೆ ಚರ್ಚಿಸುವ ಸಲುವಾಗಿ ವಿಧಾನಸೌಧಕ್ಕೆ ಬರುವುದಾದಲ್ಲಿ ಅವರು ವಿಧಾನಸೌಧದ ಸ್ವಾಗತಕಾರರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ವಿಧಾನ ಸೌಧದ ಒಳಗಡೆ ಪ್ರವೇಶಿಸಬಹುದಾಗಿದೆ. ಈ ಬಗ್ಗೆ ಸಂಬಂಧ ಪಟ್ಟವರಿಗೆ ಸೂಕ್ತ ಆದೇಶವನ್ನು ನೀಡಿದ್ದೇನೆ.

ವಿಧಾನ ಮಂಡಲದ ಕಲಾಪಗಳು ನಡೆಯುವ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಗೆ ಹೋಗಲು ಅವಕಾಶ ಕಲ್ಪಿಸಿಕೊಡುವ ವಿಷಯವು ಮಾನ್ಯ ವಿಧಾನ ಸಭಾಧ್ಯಕ್ಷರ ಮತ್ತು ವಿಧಾನ ಪರಿಷತ್ತಿನ ಸಭಾಪತಿಯವರಿಗೆ ಸಂಬಂಧಿಸಿದ್ದು. ಈ ವಿಷಯವನ್ನು ಅವರು ಪರಿಶೀಲಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ ಇನ್ನು ೧೯ ಮಂದಿ ಸದಸ್ಯರು ಮಾತನಾಡುವವರಿದ್ದಾರೆ. ಈಗ ಎರಡು ಗಂಟೆ ಇಪ್ಪತ್ತು ನಿಮಿಷಗಳಾಗಿದೆ. ಒಬ್ಬೊಬ್ಬರಿಗೂ ಹತ್ತು ನಿಮಿಷಗಳನ್ನು ಕೊಟ್ಟು ಚಾಲು ಮಾಡಿದರೂ ಕೊನೇಪಕ್ಷ ಐದೂವರೆ ಗಂಟೆಯಾಗುತ್ತದೆ. ೧೯ ಜನ ಸದಸ್ಯರುಗಳಲ್ಲಿ ಯಾರಾದರೂ ಇಲ್ಲದಿದ್ದರೆ ಅವರ ವೇಳೆಯನ್ನೂ ಸಹ ಸದುಪಯೋಗ ಪಡಿಸಿಕೊಳ್ಳಬಹುದು.

ಶ್ರೀ ಬಿ.ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ತಾವು ಮೊನ್ನೆ ದಿವಸ ಹೇಳಿದ್ದೀರಿ. ರಾಜ್ಯ ಪಾಲರ ಭಾಷಣದಮೇಲೆ ಮಾತನಾಡುವಾಗ ೧೫ ನಿಮಿಷ ಹೆಚ್ಚಾಗಿ ಕೊಡುತ್ತೇನೆಂದು. ದಯವಿಟ್ಟು ಅವಕಾಶವನ್ನು ಕೊಡಿ.

ಅಧ್ಯಕ್ಷರು.—೧೯ ಜನ ಮಾನ್ಯ ಸದಸ್ಯರು ಇದ್ದಾರೆ. ೯ ಜನ ಮಾನ್ಯ ಸದಸ್ಯರು ಮೊಟಕು ಮಾಡಿಕೊಟ್ಟರೂ ಇನ್ನೂ ಹತ್ತು ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ಶ್ರೀ ಡಿ.ಟಿ. ಜಯಕುಮಾರ್‌ರವರೇ ತಾವು ಹತ್ತು ನಿಮಿಷ ಮಾತನಾಡಿ ತಮ್ಮ ಭಾಷಣವನ್ನು ಮುಗಿಸಿ.

† ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮೂರು ದಿವಸಗಳಿಂದ ಸಾಕಷ್ಟು ಚರ್ಚೆ ಈ ಸಭೆಯಲ್ಲಿ ನಡೆದಿದೆ. ಈ ಸದನದ ಮೂಲ ಉದ್ದೇಶ ಶ್ರೀಸಾಮಾನ್ಯನ ಬದುಕು ಒಳ್ಳೆಯದಾಗಬೇಕು, ಆತನಿಗೆ ಮೂಲಭೂತವಾಗಿ ಬೇಕಾದಂಥ ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ, ಉಳಿದುಕೊಳ್ಳುವುದಕ್ಕೆ ಸೂರು, ಜೊತೆಗೆ ಈ ರಾಷ್ಟ್ರದಲ್ಲಿ ನೆಮ್ಮದಿ, ಶಾಂತಿಯಿಂದ ಬದುಕಬೇಕು ಎನ್ನುವುದೇ ಮೂಲ ಭೂತವಾದ ಉದ್ದೇಶವಾಗಿದೆ. ಇದು ಈ ಸದನದ್ದೇ ಅಲ್ಲ ಪ್ರಜಾಪ್ರಭುತ್ವದ ಮೂಲ ಉದ್ದೇಶ ವಾಗಿರುತ್ತದೆ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು ೩೯ ವರ್ಷಗಳು ಕಳೆದಿವೆ. ಈ ಮೂವತ್ತೊಂಭತ್ತು ವರ್ಷಗಳಲ್ಲಿ ಕಾಂಗ್ರೆಸ್‌ನವರು ೩೫ ವರ್ಷಗಳ ಕಾಲ ರಾಜ್ಯಭಾರ ಮಾಡಿದರು. ಕರ್ನಾಟಕದಲ್ಲಿ ಜನತಾಪಕ್ಷ ನಾಲ್ಕು ವರ್ಷಗಳ ಕಾಲ ಅಧಿಕಾರ ಸೂತ್ರವನ್ನು ಹಿಡಿದು ಆಡಳಿತವನ್ನು ನಡೆಸುತ್ತಿದೆ. ಈ ಮೂವತ್ತನಾಲ್ಕು ವರ್ಷ ಕಾಂಗ್ರೆಸ್ ಪಕ್ಷ ಏನೇನು ಕೆಲಸ ಮಾಡಿತು, ಜನತಾ ಕಲ್ಯಾಣಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿತು ಎನ್ನುವುದನ್ನು ಒಂದುಕಡೆ ಇಟ್ಟುಕೊಂಡು, ಇನ್ನೊಂದು ಕಡೆ ಕೇವಲ ನಾಲ್ಕು ವರ್ಷಗಳಲ್ಲಿ ಜನತಾ ಪಕ್ಷವು ಏನೇನು ಕಾರ್ಯಗಳನ್ನು ಮಾಡಿ ಸಾಧನೆ ಮಾಡಿದೆ ಎನ್ನುವ ಬಗ್ಗೆ ಎ ಮತ್ತು ಬಿ ಪಟ್ಟಿಯನ್ನು ಮಾಡಿ ನಾವು ಇಲ್ಲಿ ಚರ್ಚೆಯನ್ನು ಮಾಡುವುದು ಬೇಡ. ಸಾಮಾನ್ಯ ಪ್ರೈಮರಿ ಶಾಲೆಯಲ್ಲಿ ಓದುವ ಹುಡುಗರಿಗೆ ಈ ಎರಡು ಪಟ್ಟಿಯನ್ನು ಕೊಟ್ಟಲ್ಲಿ ಅವರು ಕಣ್ಣು ಮುಚ್ಚಿಕೊಂಡು ಜನತಾ ಪಕ್ಷ ಬಹಳ ಕೆಲಸ ಮಾಡಿದ್ದಾರೆ ಎನ್ನುವ ವಿಚಾರವನ್ನು ಹೇಳುತ್ತಾರೆ, ಇಷ್ಟೆಲ್ಲ ಒಳ್ಳೆಯ ಕೆಲಸ ನಡೆದ ಮೇಲೆಯೂ ಜಿಲ್ಲಾ ಪರಿಷತ್ತು ಚುನಾವಣೆಯಲ್ಲಿ ನಾವು ನಿರೀಕ್ಷಿಸಿದಷ್ಟು ಜನ ಗೆಲ್ಲಲಿಲ್ಲವೆಂದರೆ ನಮ್ಮಲ್ಲೂ ಕೂಡ ಅನೇಕ ಪ್ರಶ್ನೆಗಳು ಉದ್ಭವವಾಗುತ್ತದೆ. ಈ ಪ್ರಶ್ನೆಗೆ ಉತ್ತರ ಹುಡುಕಬೇಕೆಂದು ನನಗನಿಸುತ್ತದೆ. ನಾವು ೭೫ ಪರ್ಸೆಂಟ್ ಕೆಲಸ ಮಾಡಿದ್ದರೂ ಕೇವಲ ೨೫ ಪರ್ಸೆಂಟ್ ಪ್ರಚಾರ ಮಾತ್ರ ಮಾಡಿದ್ದೇವೆ. ಆದರೆ ಕಾಂಗ್ರೆಸ್ ಪಕ್ಷದವರು ಕೇವಲ ೨೫ ಪರ್ಸೆಂಟ್ ಕೆಲಸಮಾಡಿ ೭೫ ಪರ್ಸೆಂಟ್ ಪ್ರಚಾರವನ್ನು ಗಿಟ್ಟಿಸಿದ್ದೆ, ಜಿಲ್ಲಾ ಪರಿಷತ್ತಿನಲ್ಲಿ ಹೆಚ್ಚಿನ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗೆಲುವನ್ನು ಸಾಧಿಸಲಿಕ್ಕೆ ಸಾಧ್ಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈವತ್ತು ೩೦ ವರ್ಷದಿಂದ ಬಿ. ಡಿ. ಓ. ಕಚೇರಿಯಲ್ಲಿಯಾಗಲಿ, ತಹಶೀಲ್ದಾರರ ಕಚೇರಿಯಲ್ಲಾಗಲಿ ಯಾವುದೇ ಸರ್ಕಾರಿ ಕಚೇರಿಗಳಿಗೆ ಹೋಗಿಬರತಕ್ಕಂಥ ವ್ಯವಹಾರ, ಅದು ವೃದ್ಧಾಪ್ಯ ವೇತನ ಇರಬಹುದು, ಕೃಷಿ ಸಾಲದ ವಿಚಾರ ಇರಬಹುದು, ಅಥವಾ ಯಾವುದೇ ಸಹಾಯ ಪಡೆಯುವ ವಿಚಾರ ಇರಬಹುದು. ಯಾವ ಕೆಲಸವಾಗಬೇಕಾಗಿದ್ದರೂ ನಿರಕ್ಷರಸ್ಥನಾದ ಸಾಮಾನ್ಯ ಮನುಷ್ಯ ಯಾರಮೇಲೆ ಹೆಚ್ಚಿನ ಅವಲಂಬಿತನಾಗಿದ್ದನೆಂದರೆ, ಅಲ್ಲಿರತಕ್ಕ ಪುಢಾರಿಗಳ ಮೇಲೆ ಅವಲಂಬಿತನಾಗಿದ್ದ ಎಂದರೆ ತಪ್ಪಾಗಲಾರದು. ಈ ಪುಢಾರಿ ಈ ರೀತಿ ಕೆಲಸ ಮೂವತ್ತನಾಲ್ಕು ವರ್ಷಗಳಿಂದ ಮಾಡಿಕೊಂಡು ಬಂದುದೇ ಇವರಿಗೆ ಹೆಚ್ಚಿನ ಪ್ರಚಾರ ಮಾಡಲಿಕ್ಕೆ ಸಾಧ್ಯವಾಯಿತು. ಇವರು ಏನು ಹೇಳುತ್ತಾರೆಂದರೇ, ಶ್ರೀಮತಿ ಇಂದಿರಾ ಗಾಂಧಿಯವರು ವಿಲ್ ಮಾಡಿಟ್ಟು ಹೋಗಿದ್ದಾರೆ, ಹಸಿರು ಕಾರ್ಡ್ ಕೊಡುವ ವಿಚಾರ. ವೃದ್ಧಾಪ್ಯ ವೇತನ, ಜೀತ ಪದ್ಧತಿ ಈ ಬಗ್ಗೆ ಎಲ್ಲವನ್ನೂ ಕೂಡ ಶ್ರೀಮತಿ ಇಂದಿರಾ ಗಾಂಧಿಯವರೇ ವಿಲ್ ಮಾಡಿ ಬಿಟ್ಟುಹೋಗಿದ್ದಾರೆ, ಅದರ ಪ್ರಕಾರ ಜನತಾ ಸರ್ಕಾರ ನಡೆದುಕೊಳ್ಳುತ್ತಿದೆ ಎನ್ನುವುದನ್ನು ಜನಸಾಮಾನ್ಯರಲ್ಲಿ ಬಿತ್ತರಿಸಿದ್ದಾರೆ. ಇಂಥ ಉದಾಹರಣೆಗಳು ಅನೇಕ ಇವೆ. ಅವುಗಳನ್ನೆಲ್ಲಾ ಇಲ್ಲಿ ಪ್ರಸ್ತಾಪಿಸುವುದಕ್ಕೆ ಇಚ್ಛೆಪಡುವುದಿಲ್ಲ. ನಾನು ಹೇಳತಕ್ಕದ್ದು ಏನೆಂದರೆ, ಜನತಾ ಕಾರ್ಯಕರ್ತರು ಏನಿದ್ದಾರೆ ಅವರಿಗೆ ಈ ಕೆಲಸ ನಿರ್ವಹಿಸುವುದಕ್ಕಾಗುವುದಿಲ್ಲ. ನಮ್ಮ ಜನತಾ ಕಾರ್ಯಕರ್ತರಿಗೆ ಬಡಜನತೆಯಲ್ಲಿ ವಿಶ್ವಾಸ ಇದೆ. ಯಾವ ಅಧಿಕಾರಿ ಹತ್ತಿರ ಯಾವ ಕೆಲಸ ಮಾಡಿಸಿಕೊಳ್ಳಬೇಕೆಂಬ ವಿಚಾರ ಗೊತ್ತಿಲ್ಲದೆ ಇರುವವರ ಹತ್ತಿರ ೫೦ ರೂಪಾಯಿ ಲಂಚ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಇಂಥ ಕೆಲಸವನ್ನು ನಮ್ಮ ಯಾವ ಶಾಸಕರೂ ಮಾಡಿಲ್ಲವೆಂದು ಹೇಳುತ್ತೇನೆ. ಸಾಮಾನ್ಯ ಜನರನ್ನು ಕಛೇರಿಗೆ ಕರೆದುಕೊಂಡು ಹೋಗಿ ಅವರಿಗೆ ಸಹಾಯ ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ನಮ್ಮ ಕಾರ್ಯಕರ್ತರು ರೂಢಿಸಿಕೊಳ್ಳದೇ ಇರುವುದರಿಂದ ಈ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಕಾಂಗ್ರೆಸ್ಸಿನವರು ಸಾಕಷ್ಟು ವಿಜಯಗಳಿಸುವುದಕ್ಕೆ ಸಾಧ್ಯವಾಯಿತು ಎಂದು ಭಾವಿಸಿದ್ದೇನೆ. ವಿರೋಧಪಕ್ಷದವರು ಬಹಳಷ್ಟು ಹೇಳಿದ್ದಾರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ರಾಜಕೀಯ ಭಾಷಣವೇನು? ನಮ್ಮ ಕಾರ್ಯಕರ್ತರು ರೂಢಿಸಿಕೊಂಡಿಲ್ಲ, ಜನರು ಹೋಗುತ್ತಿಲ್ಲ ಎಂಬ ಈ ವಿಚಾರಗಳನ್ನೆಲ್ಲಾ ಮಾತನಾಡುವುದಕ್ಕೆ ಬೇರೆ ಪ್ಲಾಟ್‌ಫಾರಂ ಇರುತ್ತದೆ. ನಿಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ಮಾತನಾಡಿ. ಇಲ್ಲಿ ಏನು ಬೇಕು...

ಶ್ರೀ ಡಿ. ಟಿ. ಜಯಕುಮಾರ್.—ನಾನು ಯಾರಿಗೂ ಈಲ್ಡ್ ಆಗುವುದಿಲ್ಲ. ಬೇಕಾದರೆ ಗುರುತು ಹಾಕಿಕೊಂಡು ನಂತರ ಉತ್ತರಿಸಲಿ. ನಾವು ಅನೇಕ ಸಾಧನೆ ಕೆಲಸಗಳನ್ನು ಮಾಡಿದ್ದೇವೆ. ಅನೈತಿಕ ಅಡ್ಡದಾರಿ ಹಿಡಿದು ಜನತಾ ಪಕ್ಷದವರು ಗೆದ್ದಿದ್ದಾರೆಂದು ಹೇಳುತ್ತಾರೆ. ಅದರಲ್ಲೇನು ಹುರುಳಿಲ್ಲ. ೩೦ ವರ್ಷದ ಇತಿಹಾಸದಲ್ಲಿ ೭೫ ಪರ್ಸೆಂಟ್ ಮತದಾನ ನಡೆದಿದೆ ಎಂಬ ವಿಚಾರವನ್ನು ವಿರೋಧ ಪಕ್ಷದವರು ತಿಳಿದುಕೊಳ್ಳಬೇಕು. ೭೫ ಪರ್ಸೆಂಟ್ ಮತದಾನ ನಡೆಯಬೇಕಾದರೆ ಶಾಂತವಾದ ಮತ್ತು ನಿಷ್ಪಕ್ಷಪಾತವಾದ ವಾತಾವರಣ ಸೃಷ್ಟಿಯಾದುದರಿಂದ ಮಾತ್ರ ಸಾಧ್ಯವಾಯಿತು. ವಿರೋಧಪಕ್ಷದವರು ಹೇಳುತ್ತಿದ್ದರು. ಆ ರೀತಿ ಮಾಡಿದರು, ಈ ರೀತಿ ಮಾಡಿದರು ಎಂದು. ಮಾನ್ಯ ಬಂಗಾರಪ್ಪನವರು ಹೇಳಿದರು, ಹೆಂಡ, ಹಣದ ಹೊಳೆ ಹರಿಸಿದರು ಎಂದು. ಇದಕ್ಕೊಂದು ಸಣ್ಣ ಉದಾಹರಣೆ ಕೊಡುತ್ತೇನೆ. ನಾನು ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾಗ ಸೇಂದಿ ಕಂಟ್ರಾಕ್ಟರು ಒಬ್ಬರು ಬಂದು ಹೇಳಿದರು, ನೀವು ಏತಕ್ಕೆ ಇಷ್ಟು ಕಷ್ಟಪಡುತ್ತೀರಿ. ನಾಳೆ ಚುನಾವಣೆ ಇರುವಾಗ ಒಂದು ಲಾರಿ ಸೇಂದಿ, ಸಾರಾಯಿಯನ್ನು ಕಳುಹಿಸುತ್ತೇನೆ, ಹಂಚಿ ಎಂದು. ಆಗ ನಾನು ಹೇಳಿದೆ, ಇದನ್ನೆಲ್ಲಾ ಕಾಂಗ್ರೆಸ್ಸಿನವರಿಗೆ ಹೇಳಿ, ನಮಗೆ ಮತ ಬಾರದೆ ಸೋತರೂ ಚಿಂತೆ ಇಲ್ಲ, ಇಂಥ ಕೆಲಸ ಮಾತ್ರ ಮಾಡುವುದಿಲ್ಲ ಎಂದು. ಅದೇ ಲಾರಿ ಕಾಂಗ್ರೆಸ್ಸಿನವರಿಗೆ ಹೋಯಿತು. ನಮ್ಮ ಕಾರ್ಯಕರ್ತರು ಲಾರಿಯನ್ನು ಹಿಡಿದು ಕೇಸ್ ಹಾಕಿದ್ದಾರೆ. ಸುಳ್ಳು ಆಪಾದನೆ ಮಾಡುವುದಕ್ಕೋಸ್ಕರ ಹೇಳುತ್ತಿಲ್ಲ. ಎರಡು ಕೇಸ್‌ಗಳನ್ನು ರಿಜಿಸ್ಟರ್ ಮಾಡಿಸಿದ್ದೇವೆ. ಅದೇ ಕಂಟ್ರಾಕ್ಟರ್ ಕಾಂಗ್ರೆಸ್ಸಿನವರಿಗೆ ಹೆಂಡವನ್ನು ಸರಬರಾಜು ಮಾಡಿದ ಕೇಸನ್ನು ನಂಜನಗೂಡು ಪೋಲೀಸ್ ಸ್ಟೇಷನ್‌ನಲ್ಲಿ ರಿಜಿಸ್ಟರ್ ಮಾಡಿಸಿರುವ ದಾಖಲಾತಿ ಇದೆ. ಕೆಲವು ಕಡೆ ಏನು ಮಾಡಿದ್ದಾರೆಂದರೆ ಸೇಂದಿ ಸರಾಬು ಹಂಚುವುದರ ಜೊತೆಗೆ ಒಂದು ಓಟಿಗೆ ೫ ರೂಪಾಯಿ ಕೊಟ್ಟಿದ್ದಾರೆ. ಒಂದು ಮನೆಯಲ್ಲಿ ೫ ಜನರಿದ್ದರೆ ೨೫ ರೂಪಾಯಿ ಕೊಟ್ಟಿದ್ದಾರೆ. ಈ ರೀತಿ ದುರ್ವ್ಯವಹಾರ ಮಾಡಿ, ಅಡ್ಡದಾರಿ ಹಿಡಿದು ಗೆಲುವು ಸಾಧಿಸುವುದಕ್ಕೆ ಸಾಧ್ಯವಾಯಿತೇ ಹೊರತು ನ್ಯಾಯವಾಗಿ ಇವರಿಗೆ ಅಷ್ಟು ಮತ ದೊರೆಯಲಿಲ್ಲ. ಇವರ ಕಪಿ ಮುಷ್ಟಿಗೆ ಮಹಾ ಜನತೆ ಸಿಲುಕಿದಾರೆ. ಇದೇ ಅವರ ಬಂಡವಾಳ. ಕಳೆದ ೩೦ ವರ್ಷಗಳಿಂದ ಜನತೆಗೆ ಸರಿಯಾದ ವಿದ್ಯಾಭ್ಯಾಸ, ಅಕ್ಷರಜ್ಞಾನ,

ರಾಜಕೀಯ ಪ್ರಜ್ಞೆ ಬೆಳಿಸತಕ್ಕ ಅವಕಾಶ ಇಲ್ಲದ ಕಾರಣದಿಂದ ಇವತ್ತು ಜನತೆಗೆ ಕಾಂಗ್ರೆಸ್ ಒಳ್ಳೆಯದೆ, ಜನತಾ ಒಳ್ಳೆಯದೆ, ಯಾರು ಒಳ್ಳೆಯ ಕೆಲಸ ಮಾಡಿದ್ದಾರೆ, ಯಾರು ಮಾಡಿಲ್ಲ ಎಂಬುದನ್ನು ಅರ್ಥ ಮಾಡಿಕೊಂಡು ಓಟು ಕೊಡತಕ್ಕ ಪ್ರಜ್ಞೆ ಇಲ್ಲವಾಗಿದೆ. ಆ ಒಂದು ಪ್ರಜ್ಞೆಯನ್ನು ಜನತೆಯಲ್ಲಿ ಬೆಳಿಸದೆ ಇರುವ ಕಾರಣದಿಂದ ಕಾಂಗ್ರೆಸ್ಸಿನವರು ಅಲ್ಪಸ್ವಲ್ಪ ಗೆದ್ದಿದ್ದಾರೆಯೇ ಹೊರತು ನ್ಯಾಯವಾದ ರೀತಿಯಲ್ಲಿ ಅಲ್ಲ. ಕುಡಿಯುವ ನೀರಿನ ಬಗ್ಗೆ ಅವರಿಗೆ ಕಾಳಜಿ ಇಲ್ಲವೇ? ೩೪ ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ಸಿನವರು ತೋಡಿಸಿದ ಕೊಳವೆ ಬಾವಿಗಳ ಸಂಖ್ಯೆ ಕೇವಲ ೨೮ ಸಾವಿರ. ಆದರೆ ಜನತಾ ಸರ್ಕಾರ ಕೇವಲ ೪ ವರ್ಷಗಳಲ್ಲಿ ಒಂದು ಲಕ್ಷದ ೫೬ ಸಾವಿರ ಕೊಳವೆ ಬಾವಿಗಳನ್ನು ತೋಡಿಸಿದೆ.

ಒಬ್ಬ ಮಾನ್ಯ ಸದಸ್ಯರು.—ಕೋರಂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೬೫ ಮಂದಿ ಸದಸ್ಯರು ಇರತಕ್ಕ ಜಾಗದಲ್ಲಿ ೯ ಜನ ಮಾತ್ರ ಇದ್ದಾರೆ.

ಛೇರ್ಮನ್.—ಹಿಂದೆ ಇದ್ದಾರೆ ನೋಡಿ, ಕೆಲವರು ಊಟಕ್ಕೆ ಹೋಗಿದ್ದಾರೆ ಬರುತ್ತಾರೆ.

೨–೩೦ ಪಿ. ಎಂ.

ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳಬೇಕೆಂದಿದ್ದೇನೆ ಎಂದರೆ.........

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕೋರಂ ಬೇಕಲ್ಲ.

ಶ್ರೀ ಬಿ. ಬಸವಲಿಂಗಪ್ಪ.—೧೦ ಪರ್ಸೆಂಟ್ ಕೋರು ಇರಬೇಕಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದೇನಾಗಿದೆಯೆಂದರೆ, ಈ ರೀತಿಯಾಗಿ ಸಭೆ ನಡೆಸಿದರೆ ರೂಲ್ಸ್ ಪ್ರಕಾರ ಸರಿಹೋಗುವುದಿಲ್ಲ. ಹತ್ತನೇ ಒಂದು ಭಾಗವಾದರೂ ಸದಸ್ಯರು ಇರಬೇಕು. ಅದಿಲ್ಲ ಅಂದರೆ ಸಭೆ ನಡೆಸುವುದರಲ್ಲಿ ಅರ್ಥ ಇಲ್ಲ.

ಛೇರ್ಮನ್.—ಎರಡೂ ಕಡೆ ಜನ ಊಟಕ್ಕೆ ಹೋಗಿದ್ದಾರೆ, ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರೂಲ್ಸ್ ಪರ್ಮಿಟ್ ಮಾಡುವುದಿಲ್ಲ.

ಛೇರ್ಮನ್.—ಬರುತ್ತಿದ್ದಾರೆ ತಗೊಳ್ಳಿ. ಟಿಫಿನ್‌ಗೆ ಹೋಗಿದ್ದಾರೆ. (ಕೆಲವು ಸದಸ್ಯರು ಸಭೆಗೆ ಆಗಮಿಸಿದರು)

ಶ್ರೀ ಡಿ. ಟಿ. ಜಯಕುಮಾರ್.—ಈಗ ಕೋರಂ ಆಯಿತು. ನಾನು ಕುಡಿಯುವ ನೀರಿನ ಬಗ್ಗೆ ಹೇಳುತ್ತಿದ್ದೆ. ಒಂದು ಲಕ್ಷಕ್ಕಿಂತ ಹೆಚ್ಚು ಕೊಳವೆ ಬಾವಿಗಳನ್ನು ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ತೋಡಿಸಿದ್ದಾರೆ. ಯಾವುದೇ ರೋಗ ಬರಬೇಕಾದರೆ ಶೇಕಡ ೫೦ ರಷ್ಟು ಬರತಕ್ಕದ್ದು ಕಲ್ಮಶವಾದ ನೀರನ್ನು ಕುಡಿಯುವುದರಿಂದ. ಈಗ ಕೊಳವೆ ಬಾವಿ ಕೊಡುವುದರ ಮುಖಾಂತರ ಜನತೆಗೆ ನೀರನ್ನು ಕೊಡುವುದರ ಜೊತೆಗೆ.........

ಛೇರ್ಮನ್.—ಲಘು ಮುಗಿಸಿ, ೧೦ ನಿಮಿಷ ಆಯಿತು.

ಶ್ರೀ ಡಿ. ಟಿ. ಜಯಕುಮಾರ್.—ಮಧ್ಯೆ ಡಿಸ್ಟರ್ಬೆನ್ಸ್ ಆಯಿತು. ನಾನು ಐದು ನಿಮಿಷವೂ ಮಾತನಾಡಲಿಲ್ಲ. ಕೊಳವೆ ಬಾವಿಗಳನ್ನು ತೋಡಿಸಿ ೨೫೦ ಅಡಿ ಆಳದಿಂದ ಬರುವ ನೀರನ್ನು ಜನರಿಗೆ ಕೊಟ್ಟು, ನೀರು ಕೊಡುವುದರ ಜೊತೆಗೆ ಆರೋಗ್ಯಭಾಗ್ಯವನ್ನೂ ಕೊಟ್ಟಿದ್ದೇವೆ. ಡಾಕ್ಟರುಗಳು ನಮ್ಮನ್ನು ಬೈಯ್ಯುತ್ತಿದ್ದಾರೆ. ನೀವೇನು ಕೊಳವೆ ಬಾವಿ ತೋಡಿಸಿದ್ದೀರಿ, ನಮಗೆ ದಿನಕ್ಕೆ ೨೦೦-೩೦೦ ರೂಪಾಯಿ ಆದಾಯ ಬರುತ್ತಿದ್ದುದು ೫೦–೬೦ ರೂಪಾಯಿಗೆ ಇಳಿದಿದೆ ಎಂದು ಹೇಳುತ್ತಿದ್ದಾರೆ. ಅಷ್ಟರ ಮಟ್ಟಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೇವೆ. ಹಸಿರು ಕಾರ್ಡ್ ಮುಖಾಂತರ ಕೆ. ಜಿ. ಗೆ ಎರಡು ರೂಪಾಯಿಯಂತೆ ಅಕ್ಕಿ ಕೊಡುತ್ತಿದ್ದಾರೆ. ಹಿಂದೆಲ್ಲಾ, ಬರಗಾಲ ಬಂದಾಗ ಐದಾರು ಕೊಳಗ ಕೊಳೆತ ಜೋಳ ಮತ್ತು ರಾಗಿಯನ್ನು ಜನರಿಗೆ ಕೊಟ್ಟು ಅವನು ಸಾಲ ತೀರಿಸಲಿಲ್ಲ ಎಂದರೆ ಐದಾರು ವರ್ಷ ಜೀತ ಮಾಡಿಸಿ ಕೊಳ್ಳುತ್ತಿದ್ದರು. ನಾವು ಕೆ. ಜಿ. ಎರಡು ರೂಪಾಯಿಯಂತೆ ಅಕ್ಕಿ ಕೊಡದೇ ಇದ್ದ ಪಕ್ಷದಲ್ಲಿ......

ಛೇರ್ಮನ್.—೧೦ ನಿಮಿಷ ಆಯಿತು, ಮುಗಿಸಿ.

ಶ್ರೀ ಡಿ.ಟಿ. ಜಯಕುಮಾರ್.—ಐದು ನಿಮಿಷವೂ ಆಗಿಲ್ಲ. ಹೇಳತಕ್ಕದ್ದು ಬಹಳ ಇದೆ. ಸಂಕ್ಷಿಪ್ತವಾಗಿ ಹೇಳುತ್ತೇನೆ. ಜನತಾ ಸರ್ಕಾರಕ್ಕೆ ಬಂದಿರತಕ್ಕ ಕಾಳಜಿ ಎಂದರೆ ಜನರನ್ನು ಬುದ್ಧಿವಂತರನ್ನಾಗಿ ಮಾಡಬೇಕು ಎಂಬುದು. ಅದನ್ನು ಯಾವರೀತಿ ಮಾಡಬೇಕು? ೫ ರೂಪಾಯಿ ೧೦ ರೂಪಾಯಿ ಕೊಟ್ಟು ಒಂದು ಕೆ. ಜಿ. ಬುದ್ಧಿವಂತಿಕೆ ಕೊಡು ಎಂದು ಅಂಗಡಿಯಿಂದ ತರುವುದಕ್ಕಾಗುತ್ತದೆಯೆ? ಅದನ್ನು ಮಾಡಲುಇರುವ ಏಕೈಕ ಮಾರ್ಗ ಎಂದರೆ ವಿದ್ಯಾಭ್ಯಾಸವನ್ನು ಕೊಡತಕ್ಕದ್ದು. ಉಚಿತ ಸಮವಸ್ತ್ರ, ಉಚಿತ ಪುಸ್ತಕಗಳನ್ನು ಕೊಡುವುದರ ಮೂಲಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನಿಡುತ್ತಿದ್ದೇವೆ. ಯಾವ ಶಾಲೆಯಲ್ಲಿ ಹಿಂದೆ ೩೦–೪೦ ಮಕ್ಕಳು ಬರುತ್ತಿದ್ದರು ಅಲ್ಲಿ ಈಗ ೨೫೦–೩೦೦ ಮಕ್ಕಳು ಬರುತ್ತಿದ್ದಾರೆ. ಇದು ಜನತಾ ಸರ್ಕಾರದ ಸಾಧನೆ. ವಿಧವಾ ವೇತನ, ತಾಳಿಭಾಗ್ಯ, ಗಂಗಾಕಲ್ಯಾಣ, ಭಾಗ್ಯ ಜ್ಯೋತಿ, ಅಂಗವಿಕಲರ ವೇತನ ಈ ಯೋಜನೆಗಳನ್ನು ಜನತಾ ಸರ್ಕಾರ ಸಮರ್ಪಕವಾಗಿ ಮಾಡುತ್ತಿದೆ. ಸತ್ಯ ಯಾವಾಗಲೂ ಬಹಳ ಕಠೋರವಾಗಿರುತ್ತದೆ. ಶ್ರೀಮತಿ ಮನೋರಮ ಮಧ್ವರಾಜ್ ಅವರು ಹೇಳಿದರು ''ಇದ್ದದ್ದನ್ನು ಇದ್ದಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದಹಾಗೆ'' ಎಂದು ನಮ್ಮ ಎಲೆಯಲ್ಲಿ ನೊಣ ಬಿದ್ದಿದೆಯೆಂದು ಅವರು ವ್ಯಂಗ್ಯ ಮಾಡುತ್ತಿದ್ದಾರೆ. ಅವರ ಎಲೆಯಲ್ಲಿ ಹೆಗ್ಗಣ ಬಿದ್ದಿದೆ. ವಾಸನೆ ತಡೆಯುವುದಕ್ಕಾಗುವುದಿಲ್ಲ. ಆದರೂ ಅವರು ಸತ್ಯಕ್ಕೆ ದೂರವಾದ ಆರೋಪಗಳನ್ನು ಮಾಡುತ್ತಿದ್ದಾರೆ. ವಿರೋಧಪಕ್ಷದವರು ಚರ್ಚೆ ಮಾಡಲಿ. ಅವರಿಗೂ ಕೂಡ ಜವಾಬ್ದಾರಿ ಇದೆ. ಜನತಾ ಪಕ್ಷಕ್ಕೆ ಮಾತ್ರ ಜವಾಬ್ದಾರಿ ಇಲ್ಲ. ವಿರೋಧಪಕ್ಷದವರಿಗೂ ಜವಾಬ್ದಾರಿ ಇದೆ. ಈ ಜವಾಬ್ದಾರಿ ಇರುವ ಸಂದರ್ಭದಲ್ಲಿ ಟೀಕೆಗೋಸ್ಕರ ಟೀಕೆ ಮಾಡುವುದು ಸರಿಯಲ್ಲ. ರಚನಾತ್ಮಕವಾದ ಟೀಕೆ ಮಾಡಬಹುದು. ಪ್ರತಿಯೊಂದನ್ನೂ ಕಾಮಾಲೆ ಕಣ್ಣಿನಿಂದ ನೋಡತಕ್ಕ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಅದನ್ನು ನಿಲ್ಲಿಸಬೇಕು. ಈ ಸರ್ಕಾರ ಯಾವ ಕೆಲಸ ಮಾಡಬೇಕು ಎಂಬ ಬಗ್ಗೆ ಪಟ್ಟಿ ಕೊಡಲಿ. ಆ ರೀತಿ ಕೊಟ್ಟರೆ ಅದನ್ನು ಒಪ್ಪಿಕೊಂಡು ಸಂಪನ್ಮೂಲದ ಚೌಕಟ್ಟಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಮಾಡುವುದಕ್ಕೆ ಪ್ರಯತ್ನ ಮಾಡಬಹುದು. ನೀರಾವರಿ ಯೋಜನೆ ಎಲ್ಲಕ್ಕಿಂತ ಮುಖ್ಯವಾದುದು. ಜನರಿಗೆ, ಹರಿಜನಗಿರಿಜನರಿಗೆ ಅನೇಕ ಕಾರ್ಯಕ್ರಮಗಳನ್ನು ಇಟ್ಟಿದ್ದೇವೆ. ಯಾವುದೇ ಒಂದು ಕಾರ್ಯಕ್ರಮಕ್ಕಿಂತ ಮಿಗಿಲಾದ ಕಾರ್ಯಕ್ರಮ ಎಂದರೆ ನೀರಾವರಿ ಯೋಜನೆ. ಇದರಿಂದ ಸ್ವಂತ ಮನೆ ಕಟ್ಟಿಕೊಳ್ಳುತ್ತಾರೆ. ಚಿನ್ನನೂ ಒಂದೇ, ನೀರೂ ಒಂದೇ. ಎಲ್ಲಾ ಕೆಲಸಕಾರ್ಯ ನಿಲ್ಲಿಸಿ ಮೊಟ್ಟಮೊದಲನೆಯ ಆದ್ಯತೆಯನ್ನು ನೀರಾವರಿಗೆ ಕೊಟ್ಟು ಸಹಾಯ ಮಾಡಿದರೆ ಅವರು ಮನೆ ಕಟ್ಟಿಕೊಳ್ಳುತ್ತಾರೆ. ಬಟ್ಟೆ ತೆಗೆದುಕೊಳ್ಳುತ್ತಾರೆ. ಇಂಥ ಒಂದು ನೀರಾವರಿ ಯೋಜನೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಜೊತೆಗೆ ಇದಕ್ಕೆಲ್ಲಾ ಹೊಳೆಯಲ್ಲಿ ಹುಣಸೇ ಹಣ್ಣನ್ನು ತೇಡಿದ ಹಾಗೆ ಆಗುತ್ತಿದೆ. ಏಕೆಂದರೆ ಜನ ನಿಯಂತ್ರಣ ಮಾಡದೇ ಇರುವುದರಿಂದ ನಾವು ಏನೇ ಕೆಲಸವನ್ನು ಮಾಡಿದರೂ ಜನಸಂಖ್ಯೆ ಅವನ್ನೆಲ್ಲಾ ತಿಂದು ಹಾಕುತ್ತದೆ. ಜನ ನಿಯಂತ್ರಣ ಮಾಡುವುದಕ್ಕೆ ಆ ಒಂದು ಕಾರ್ಯಕ್ರಮದಲ್ಲಿ ನಮ್ಮ ರಾಜ್ಯ ಇಡೀ ರಾಷ್ಟ್ರದಲ್ಲಿ ೨ನೇ ಸ್ಥಾನ ಗಳಿಸಿದೆ.

ಛೇರ್ಮನ್.—ಬೇಗ ಮುಗಿಸಿ.

ಶ್ರೀ ಡಿ. ಟಿ. ಜಯಕುಮಾರ್.—ಆದ್ದರಿಂದ ಜನ ನಿಯಂತ್ರಣ ಮಾಡುವಂತಹ ಕಾರ್ಯಕ್ರಮವಲ್ಲಿ ಹೆಚ್ಚು ಆಧ್ಯತೆಯನ್ನು ಕೊಡಬೇಕು. ನಂತರ ಪಾನನಿರೋಧವನ್ನು ರಾಷ್ಟ್ರೀಕರಣ ಮಾಡಿದರೆ ಒಳ್ಳೆಯದು. ಇದನ್ನು ಮಾಡಿದ್ದೇ ಆದರೆ, ಕೊನೆ ಪಕ್ಷ ೫೦ ಪರ್ಸೆಂಟ್ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬಹುದಾಗಿತ್ತು. ಕೇವಲ ೫-೬ ಕುಳಗಳು ಕೋಟ್ಯಾಂತರ ರೂಪಾಯಿಗಳನ್ನು ಮಾಡಿಕೊಂಡು ಇಡೀ ಸರ್ಕಾರವನ್ನೇ ಕಂಟ್ರೋಲ್ ಮಾಡತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಪಾನನಿರೋಧವನ್ನು ಜಾರಿಗೆ ತರಬೇಕು. ಇಲ್ಲದಿದ್ದರೆ ಇದನ್ನು ರಾಷ್ಟ್ರೀಕರಣವನ್ನಾದರೂ ಮಾಡಬೇಕು. ನಂತರ ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ಕರ್ನಾಟಕ ರಾಜ್ಯಕ್ಕೆ ಎಷ್ಟು ವಿದ್ಯುಚ್ಛಕ್ತಿ ಬೇಕು ಎನ್ನತಕ್ಕಂತಹ ಬೇಡಿಕೆಯನ್ನು ತಯಾರು ಮಾಡುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರದ ಸಹಾಯವನ್ನು ತೆಗೆದುಕೊಂಡು ವಿದ್ಯುಚ್ಛಕ್ತಿಯಲ್ಲಿ ನಮ್ಮಲ್ಲಿ ಇರುವಂತಹ ಪೂರ್ಣ ಪ್ರಮಾಣದ ಬೇಡಿಕೆಯನ್ನು ಪೂರೈಸಿ ಸ್ವಾವಲಂಬಿಯಾಗುವ ದಿಸೆಯಲ್ಲಿ ಸರ್ಕಾರ ಯೋಜನೆಗಳನ್ನು ರೂಪಿಸಬೇಕು.

ನಂತರ ಪರಿಸರದ ಹತೋಟಿಯ ಬಗ್ಗೆ ಹೇಳುವುದಾದರೆ, ಬೆಂಗಳೂರು ನಗರ, ಮೈಸೂರು ನಗರ, ಹಾಗೂ ಹುಬ್ಬಳ್ಳಿ ನಗರ ಇನ್ನಿತರೆ ನಗರಗಳಲ್ಲಿ ಏರ್ ಪೊಲ್ಯೂಷನ್‌ನಿಂದ ಅನೇಕ ತೊಂದರೆಗಳು ಉಂಟಾಗುತ್ತಿವೆ. ಯಕಾಲಜಿಕಲ್ ಸಿಸ್ಟಂನ್ನು ತರಬೇಕು. ಶ್ರೀಮಾನ್ ರಾಮಕೃಷ್ಣ ಹೆಗಡೆ

ಯುವರು ನಗರಗಳಲ್ಲಿ ಕೋಟ್ಯಾಂತರ ಸಸಿಗಳನ್ನು ಬೆಳೆಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಅದೇ ರೀತಿ ಶಾಲಾ ಆವರಣದಲ್ಲಿ, ಸರ್ಕಾರಿ ಕಛೇರಿಗಳ ಆವರಣದಲ್ಲಿ ಎಲ್ಲೆಲ್ಲಿ ಗುಂಡು ತೋಪುಗಳು ಇವೆಯೋ ಅಲ್ಲೆಲ್ಲಾ ಸಸಿಗಳನ್ನು ನೆಡತಕ್ಕ ವ್ಯವಸ್ಥೆಯನ್ನು ಇನ್ನು ಮುಂದೂ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಸದಸ್ಯರಿಗೆ ೧೦ ನಿಮಿಷ ಅವಕಾಶ ಕೊಟ್ಟು ಈಗ ಅವರು ೧೫ ನಿಮಿಷಗಳಾಗಿದ್ದರೂ ಇನ್ನೂ ಮಾತನಾಡುತ್ತಿದ್ದಾರೆ. ಅದೇ ರೀತಿ ನಮ್ಮ ಸದಸ್ಯರಿಗೂ ಕಾಲಾವಕಾಶವನ್ನು ಕೊಡಬೇಕಾಗುತ್ತದೆ.

(ಗೊಂದಲ)

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು.)

ಅಧ್ಯಕ್ಷರು.—ನೀವು ಬಂದ್ ಮಾಡಿ. ೧೫ ನಿಮಿಷ ಮಾತನಾಡಿದ್ದೀರಿ.

ಶ್ರೀ ರಾಜವರ್ಧನ್.—ಅವರಿಗೆ ಸ್ವಲ್ಪ ಅವಕಾಶ ಕೊಡಿ

ಅಧ್ಯಕ್ಷರು.—ಇನ್ನೂ ೧೯ ಜನ ಸದಸ್ಯರು ಮಾತನಾಡುವವರು ಇದ್ದಾರೆ. ಒಬ್ಬೊಬ್ಬರಿಗೂ ೧೦ ನಿಮಿಷದಂತೆ ಕೊಟ್ಟರೂ ೧೯೦ ನಿಮಿಷಗಳಾಗುತ್ತವೆ. ೫-೩೦ ಗಂಟೆಯೊಳಗೆ ಚರ್ಚೆ ಮುಗಿಯಬೇಕಾಗುತ್ತದೆ. ಆದ್ದರಿಂದ ದಯಮಾಡಿ ಅವರು ಕುಳಿತುಕೊಳ್ಳಬೇಕು. ಇಲ್ಲದಿದ್ದರೆ ನಾನು ಬೇರೆಯವರ ಹೆಸರನ್ನು ಕರೆಯಬೇಕಾಗುತ್ತದೆ.

ಶ್ರೀ ಡಿ. ಟಿ. ಜಯಕುಮಾರ್.—ಹೊಸಬರಿಗೂ ಕೂಡ ಕಲಿಯಬೇಕೆಂಬ ಆಸೆ ಇದೆ. ನೀವು ಹಳಬರನ್ನೇ ಯಾರು ಸಯನಾಜೋಕಾಗಿ ಮಾತನಾಡುತ್ತಾರೋ ಅವರನ್ನು ಇಟ್ಟುಕೊಂಡು ವಿಧಾನ ಸಭೆಯನ್ನು ನಡೆಸಬೇಕೆಂದಿದ್ದರೆ ನಡೆಸಿಕೊಳ್ಳಿ. ೨ ನಿಮಿಷ ಅವಕಾಶ ಕೊಟ್ಟಿ ಅಂದರೆ ಕೊಡುವುದಿಲ್ಲ. ಬೇರೆ ವಿಷಯದಲ್ಲಿ ಗಂಟೆಗಟ್ಟಲೆ ಸಮಯ ಕಳೆದುಹೋಗುತ್ತದೆ. ಆದರೆ ನನಗೆ. ೨ ನಿಮಿಷ ಅವಕಾಶಕೊಡುವುದಿಲ್ಲ. ನಿಮ್ಮ ಕಾಲದಲ್ಲಾದರೂ ಹೊಸಬರು ಕಲಿತುಕೊಳ್ಳುವುದಕ್ಕೆ ಅವಕಾಶ ಸಿಕ್ಕುತ್ತದೆಂದು ನಾನು ತಿಳಿದುಕೊಂಡಿದ್ದೆ.

ಅಧ್ಯಕ್ಷರು.—ನೀವು ಬಂದ್ ಮಾಡಬೇಕು. ೧೫ ನಿಮಿಷ ಮಾತನಾಡಿದ್ದೀರಿ.

ಶ್ರೀ ಡಿ. ಟಿ. ಜಯಕುಮಾರ್.—೧೦ ನಿಮಿಷ (ಇಂಟರ್‌ಫಿಯರೆನ್ಸ್) ಗಲಾಟೆಯಲ್ಲೇ ಹೋಯಿತು.

ಅಧ್ಯಕ್ಷರು.—ನೀವು ಆ ರೀತಿಯ ಇಂಟರ್‌ಫಿಯರೆನ್ಸ್ ಆಗದ ಹಾಗೆ ಮಾತನಾಡಬೇಕು.

ಶ್ರೀ ಡಿ. ಟಿ. ಜಯಕುಮಾರ್.—ಕೋರ್ಟುಗಳಲ್ಲಿ ಲಕ್ಷಾಂತರ ಕೇಸುಗಳು ಪೆಂಡಿಂಗ್ ಇವೆ. ಅವುಗಳನ್ನು ಬೇಗ ಬಗೆಹರಿಸುವ ದಿಸೆಯಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಮೈಸೂರು ದಸರದ ಬಗ್ಗೆ ದೊಡ್ಡ ಅವ್ಯವಹಾರ ನಡೆದಿದ್ದು ಅದರ ಬಗ್ಗೆ ತನಿಖೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಆದಾಯ ಪತ್ರ (ಇನ್‌ಕಮ್ ಸರ್ಟಿಫಿಕೇಟ್) ವಿಷಯ ಇವತ್ತು ಬಹಳ ಗೊಂದಲದಲ್ಲಿ ಇದೆ. ಪ್ರತಿ ವರ್ಷವೂ ವಿದ್ಯಾರ್ಥಿಗಳು ಕಾಲೇಜುಗಳಿಗೆ ಸೇರುವಾಗ ಈ ಸರ್ಟಿಫಿಕೇಟ್‌ಗಳ ಬಗ್ಗೆ ಕಛೇರಿಗೆ ಅಲೆಯಬೇಕಾಗಿರುವುದರಿಂದ ಫ್ಯಾಮಿಲಿ ಕಾರ್ಡ್ ಸಿಸ್ಟಮ್‌ನ್ನು ಪರ್ಮನೆಂಟಾಗಿ ತಂದರೆ ಇವರಿಗೆ ಬಹಳ ಅನುಕೂಲವಾಗುತ್ತದೆ. ಜೊತೆಗೆ ಅಧಿಕಾರಿಗಳನ್ನು ನಿಯಂತ್ರಿಸತಕ್ಕ ಕೆಲಸ ಸಾಕಷ್ಟು ಆಗಬೇಕಾಗಿದೆ. ಪ್ರತಿವರ್ಷದಂತೆ ಈ ವರ್ಷವೂ ಸಹಾ ಬರಗಾಲ ತಲೆದೋರಿರುವುದರಿಂದ ಇದಕ್ಕೆ ಒಂದು ಶಾಶ್ವತ ಪರಿಹಾರವನ್ನು ನಾವು ಕಂಡುಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವೊಂದು ಉದ್ದಿಮೆಗಳ ಬಗ್ಗೆ ಕೇಂದ್ರದ ಮಲತಾಯಿ ಧೋರಣೆ ಸರಿಯಾದುದಲ್ಲ. ಇವತ್ತು ನಾನು ವಿರೋಧ ಪಕ್ಷದ ಸದಸ್ಯರನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ೨೭ ಜನ ಲೋಕಸಭಾ ಸದಸ್ಯರು ಇನಿದ್ದಾರೆ ಅವರು ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ, ಮೈಸೂರು-ಬೆಂಗಳೂರು ನಡುವಣ ರೈಲುಹಳಿಯನ್ನು ಬ್ರಾಡ್‌ಗೇಜ್ ಮಾಡುವುದರ ಜೊತೆಗೆ ವಿದ್ಯುತ್ ಮಾರ್ಗವನ್ನಾಗಿ ಇದನ್ನು ಪರಿವರ್ತಿಸುವುದರ ಬಗ್ಗೆ ಒತ್ತಾಯ ತರಬೇಕೆಂದು ಹೇಳುತ್ತೇನೆ. ಇನ್ನು ಗಂಗಾ-ಕಾವೇರಿ ಬಗ್ಗೆ ಜನತಾಪಕ್ಷ ಅಧಿಕಾರದಲ್ಲಿದ್ದಾಗಲೇ ಯೋಜನೆ ಮಾಡಿತ್ತು. ಅದಕ್ಕಿಂತಾ ಹಿಂದೆ ಬ್ರಿಟಿಷರ ಕಾಲದಲ್ಲೇ ಈ ಬಗ್ಗೆ ಒಂದು ತೀರ್ಮಾನ

ವಾಗಿದೆಯೆಂದು ಕಾಣುತ್ತದೆ. ಈಜಿಪ್ಟ್‌ಗೆ ನೈಲ್‌ನದಿ ವರದಾನವಾಗಿರುವಂತೆ ನಮ್ಮ ದೇಶದ ಅಭಿವೃದ್ಧಿಗೆ ಗಂಗಾ–ಕಾವೇರಿ ಯೋಜನೆ ಅಗತ್ಯವಾಗಿ ಬೇಕಾಗಿದೆ. ರಾಷ್ಟ್ರದ ಯುವ ಪ್ರಧಾನಿಗಳು ಈ ಬಗ್ಗೆ ಗಮನಹರಿಸಿ ರಾಷ್ಟ್ರದ ಬಡತನವನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ. ಮಾನ್ಯ ಲಕ್ಕಪ್ಪನವರು ಹೇಳಿದ ಪ್ರಕಾರ ಮೈಸೂರಿನಲ್ಲಿ ಕರೆನ್ಸಿ ನೋಟ್ ಕಾರ್ಯಾಗಾರ ಹಾಗೂ ಮಂಗಳೂರಿನಲ್ಲಿ ತೈಲ ರಿಫೈನರಿ ತರುವುದರ ಬಗ್ಗೆ ತಿಳಿಸಿರುವ ಮಾನ್ಯ ಜನಾರ್ಧನ ಪೂಜಾರಿಯವರಿಗೆ ನಾನು ಅಭಿನಂದಿಸುತ್ತೇನೆ. ಕೊನೆಯದಾಗಿ ಮಾನ್ಯ ಜನಾರ್ಧನ ಪೂಜಾರಿಯವರ ಸಾಲ ಮೇಳ ಕಾಂಗ್ರೆಸ್ ಸರ್ಕಾರದ ಸಾಲಮೇಳವೆಂದು ಹೇಳದೇ ವಿಧಿಯಿಲ್ಲ. ನನ್ನ ಕ್ಷೇತ್ರದಲ್ಲೇ ಕಾಂಗ್ರೆಸ್ ಜನ, ಕಾಂಗ್ರೆಸ್ ಕಾರ್ಯಕರ್ತರಿಗೆ ೧ ಸಾವಿರ, ೩ ಸಾವಿರ ಸಾಲವನ್ನು ಕೊಡಿಸಬೇಕಾದರೆ ೫೦೦, ೬೦೦ ರೂಪಾಯಿ ಪಡೆದು ಸಾಲ ಕೊಡಲಾಗಿದೆ. ಅರ್ಜಿ ಪಡೆಯಲೂ ಲಂಚ ಕೊಡಲಾಗಿದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಕಾಂಗ್ರೆಸ್ ವಿರುದ್ಧ ಭಾಷಣ ಅದು.

† SMT. MUKHTARUNNISA (Narasimharaja).—Sir, I thank you for giving me an opportunity to speak on the Motion of Thanks to the Governor's Address. In the Governor's address there is no reference to the development and upliftment of women folk which constitue 51% of our population. In this modern era women folk play a very important role in educational, technical, social, political and sports fields. Kumari P. T. Usha is example who brought good name to our Bharat. The Hon. Leader of Opposition in this House, our Party Leader, is also a woman. I would urge the Government to start a Women's University and a Women Development Corporation. They should also start a Training Institute in Sports for women and enable them to compete in the future sports event. The women are neglected. There is the mention of only family welfare in this Address. Are the women meant only for family welfare schemes

Though the Departments of Co-operation, Mines and Geology, Wakfs and Muzrai and Information are vast Departments and are headed by Cabinet Ministers, there is no mention about it in the Governor's Address. There is no mention about the progress made or new schemes intended for implementation. The Hon. Minister for Co-operation is here. I would like to say that more and more number of Societies are coming up in our State.

About Para No.2 of the Address, I would like to point out that not a single word of compliments is there to the Central Government and our esteemed Prime Minister Sri Rajiv Gandhiji who was kind enough to give more money for drought relief. They should compliment the Central Government for the drought relief. In Para No. 6 it is mentioned that Bangalore has become a centre for international events on account of the second SAARC meeting. we are proud for that because it is our Karnataka. But here also

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

there are no compliments given to our Central Government particularly our Hon Prime Minister who sanctioned grants to maintain roads and beautify the City including this Vidhana Soudha. He was kind enough to select Bangalore for this meeting.

Again in Para 2 it is mentioned that the tempo of employment generation programme is being maintained. Sir I would like to ask why are there so many strikes? Every-day, in Cubbon Park you can see striking employees such as contract lectureres, nursary teachers etc; who have not received salary for the last nine months and local candidates and so on. M.A. (Rural Development) is a course run by the Bangalore University. Those students who have passed this course are facing unemployment problem. The students from Andhra Pradesh who came here and complete this course are appointed as BDOs, Extension Officers in Revenue Department and so on in Andhra Pradesh. But unfortunately the Panchayati Raj Department of Karnataka has not recognised this course. If it is so, why not abolish this course? These students are also sitting in a Dharna. And then, there are about 8000 stipendary graduates who are working for the last 10 years at a fixed salary of Rs. 490/- without getting any other benefits. Their age is barred and their services are also not counted. Somehow or the other they are working. When some non-stipendiary graduates filed a case in the High Court, the High Court ordered to regularise 50% of the stipendiary graduates and the local candidates. Only the local candidates are regularised and the stipendiary graduates are left out, why is there this step-motherly treat ment to the stipendiary graduates? where will they get jobs when their age is barred? I learnt that the Government has constituted a committee with the Law Secretary as Chairman and with Legislators and NGO members. I would like to ask what is the report of that Committee? when this Government had assured to regularise the services of these stipendiary graduates, why is it not taking interest? why have refused to do so when they say that the tempo of employment is being maintained? In Para 7 it is said "......a scheme of supplying subsidised foodgrains to the rural poor was launched on 1st November, 1985. Initially the coverage was 24 lakh families. As representations were made that some deserving families had been left out, a fresh survey was carried out and the benefit of the Scheme has been extended to another 7 lakh families." Many of my friends spoke on that subject but I only point out that here also there are no compliments given to the Central Government because there is no problem to get food grains at subsidesed rates. There is no problem for food-grains from the Centre. Poor means poor whether the poor residing in the hilly region or urban area or rural areas, all are the same. I would like to ask why the urban poor are neglected. Always it is mentioned

or rural poor. Is not the weaker section poor in urban areas? The green card is distributed for those whose income is less than Rs. 2,000/- in the rural areas why the Government differentiates between the urban poor and the rural poor? Is not the urban Poor Glso having less than Rs. 2000/- income? I would request the novernment to implement equal justice to all the poor of the Kar-aataka State, not as urban poor or rural poor. Poor means, all are same. I do not want to say much about Thali Bhagya Scheme. Kindly close that scheme, because it is not connected to the wornen welfare; it is connected to the men's welfare.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾಳಿ ಕಟ್ಟಲಿಕ್ಕೆ ಅವನಿಗೆ ಶಕ್ತಿ ಬೇಕಲ್ಲ? ಗಂಡು ತಾಳಿ ಕಟ್ಟಬೇಕಾದರೆ ಶಕ್ತಿ ಬೇಕು.

ಅಧ್ಯಕ್ಷರು.—ಹೆಣ್ಣು ಮಕ್ಕಳು ಮಾತನಾಡುವಾಗ ಅಡ್ಡಿ ಮಾಡಬೇಡಿ.

ಶ್ರೀ ಬಸವಣ್ಣಪ್ಪ.—ತಾಳಿಭಾಗ್ಯದ ಮುಖ್ಯ ಉದ್ದೇಶ ಬಡ ಸಂಸಾರಗಳಿಗೆ ಸಹಾಯ ಮಾಡುವುದು. ಮದುವೆಗೆ ವಿಪರೀತ ಖರ್ಚಾಗುತ್ತಿರುವಾಗ. ಅದನ್ನು ಕಡಿಮೆ ಮಾಡುವುದಕ್ಕೋಸ್ಕರ ಈ ಕಾರ್ಯಕ್ರಮ ಇದೆ.

SMT. MUKTHARUNNISSA BEGUM.—You give some maehines for their livelihood.

ಶ್ರೀ ಕೆ.ಬಿ. ಮಲ್ಲಪ್ಪ.—ಶ್ರೀಮಂತ ವರ್ಗದ ಜನಕ್ಕೆ ಬಡವರ ಕಷ್ಟದ ಅರಿವು ಇರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಗೆ ಬಟ್ಟೆ ಹೊಲಿಯುವ ಯಂತ್ರ ಕೊಡಿ. ಅವರ ಬದುಕು ನಿರ್ವಹಣೆಗೆ ಸಹಾಯವಾಗುವಂಥಾದ್ದು ಕೊಡಿ.

SMT. MUKTHARUNNISSA BEGUM.—In Para No. 7 (c) it is mentioned about site distribution. In Mysore how many persons were granted sites where still 24 lay-outs are not regularised and after demolishing houses in two lay-cuts in Jyothinagar and Kuvempu Nagar? Government has refused to grant compensation and is trying to send them from their houses to other far off places, to disPose of that lay-out in the highest rate through C.I.T.B., because the area is developed now. I would like to ask one question in this connection. When the Tibetian refugees from Tibet who rushed to Karnataka because it is a peace-loving state, were granted land, loan, and houses at Periyapata and other places of Karnataka, why the persons born in Karnataka and so-called Kannadigas were not granted sites? What is their fate? How can we belive that your Government is following the 20-point programme? Everytime this demolition question comes. Why they are neglected like that?

SRI B. RACHAIAH.—Tibetian refugees problem was posed by Pandit Jawaharlal Nehru and he wanted Sri Nijalingappa to allot some land to rehabilitate them. It is the desire of late pandit Jawaharlal Nehru. Because it was an inter-national problem he wanted the Chief Minister to accommodate them here, and we have done it.

SMT. MUKTHARUNNISSA BEGUM.—In Para No. 3 His Excellcncy has mentioned about the incidents in Mysore and Bangalore. Our Hon. Minister for Home said in his reply ನಾವುಎಷ್ಟು ರಕ್ಷಣೆ ಕೊಡುತ್ತಿದ್ದೇವೆ, ಆದರೆ ಅವು ಒಂದು ಮಾತನ್ನೂ ಹೇಳಲಿಲ್ಲ ಎಂದು ಅವರು ಹೇಳಿದ್ದಾರೆ. In this connection I would say that I have high regardsabout our Hon. Minister Sri Rachaiah, not as a Minister. But, I know.........

MR. SPEAKER.—He is your own Minister,

SMT. MUKTHARUNNISSA.—He was in Congress. As a guardian and elderly person we give respect to him. Actually I was feeling sympathy for him because he came from Bangalore to Mysore. I saw him three or four times when he was going round I thank him. I thank you Sri Rachaiah that you had helped. I have no complaints against you. At that time there was no time That is way in my speech on Governor's address I am saying. you have mistaken me, I have got full regards about you. You have hone much work in this field.

MR. SPEAKER.—She has complimented the Minister.

SMT, MUKTHARUNNISSA.—My only request is to produce the photos of the victims to say that police have fired on the back side. When the people were rushing, police say for their security, they opened fire, But, it was on the chest and neck. I would request you to conduct judicial enquiry, You are our guardian from Mysore.

About text books, I will give only a small suggestion. It is a beautifull scheme as our leader Smt. Nagarathnamma said. Books are distributed very late and also for three or four subjects. There are about 5 to 6 subjects Those books are not available in the market also. When the children do not have it, it affects their study, My suggestion is that if the Government really wants to help the innocent children, the Government should make available all the subject-wise text-books in the month of may 1987 and make distribution from the re-opening day *i. e.*, 1st june 1987. You should differentiate between the poor and the rich children. In every school there are poor and rich children. It will have a psychological effect on the children. It is a very good scheme, but the implementation is bad. It is for your future guidance.

In Para 7 (g) it is said that Irrigation Project is in top priority. In that connection I would lika to say why Varuna C nal wor is delayed at Mysore. How much benefit would have come to poor farmers had it been completed early ?

The most important matter for minorities is about Minority Development Corporation. The Minority Development Corporation was established in 1985. In the Assembly we Compli-

mented the Hon. Chief Minister who sanctioned Rs. 1 crore for its establishment. After the second year, in my question I requested the Hon. Chief Minister to appoint a Chairman. He appointed the Chairman. Again in this Assembly in the third year I asked 'Whether the money is disbursed to the poor beneficiaries ? The answer was 'Loan rules are yot to be issued, So loans have not actually been disbursed'. That is the answer. Loan is not disbursed in the third year also. Since three years this money of Rs. 1 crore is layiny there. Day before yesterday when I asked they said the loans are not yet distributed: We are already in the 4th or 5th year, I feel, this amount will not be received by the beneficiaries. This is not good.

Sir, in the second para it is said, they want to encourage more industries. What about sick industries ? The Government has not taken any action to reopen the K. R. Mills which is closed since three years affecting three thousand employees and about 20,000 families are suffering on account of this. The employees have already resorted to roko and other agitation last month, but still they have not naken any decision. The Government has said that it wants to encourage new industries Sir, there are many outsiders who are coming and starting industries here, but they are bringing labourers and other technical nfficers from outside. People who are born in Karnataka are not taken by those employers and they are wandering for small job. But these outsiders are benefited as they are using Karnataka's land, water, power, subsids and marketing facility. But our Karnataka people have to beg for jobs and have to beg to reopen their sick industries. Our educated and uneducated youths are wandering for employment. This should be avoided.

In conclusion, I would request the hon, Minister to see that all my questions are replied Properly because, many times my questions are not replied: My district Minister is present here. I request him to reply all my questions, Thank you.

೩–೦೦ ಪಿ.ಎಂ.

ಅಧ್ಯಕ್ಷರು.—ಕೊಟ್ರಪ್ಪನವರೇ, ಜಯಕುಮಾರ್ ಅವರು ೨೦ ನಿಮಿಷ ಮಾತನಾಡಿದರು ಎಂದು ಬೇಗಮ್ ಅವರಿಗೆ ೨೩ ನಿಮಿಷ ಕೊಟ್ಟಿದ್ದೇನೆ. ಇನ್ನು ಮುಂದೆ ಆ ಕಡೆಯುವರಿಗೆ ಹತ್ತು ನಿಮಿಷ ಈ ಕಡೆಯುವರಿಗೂ ಹತ್ತು ನಿಮಿಷ ಕೊಡುತ್ತೇನೆ. ಆದುದರಿಂದ ನೀವು ೧೦ ನಿಮಿಷ ಮಾತನಾಡಿ.

† ಶ್ರೀ ಬಿ.ಜಿ. ಕೊಟ್ರಪ್ಪ(ಹರಿಹರ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನುದ್ದೇಶಿಸಿ ದಿನಾಂಕ ೨೯–೧–೧೯೮೭ ರಂದು ಮಾಡಿದ ಭಾಷಣಕ್ಕೆ ಅನುಮೋದನೆಯನ್ನು ಸೂಚಿಸಿ ನಾಲ್ಕು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಹಿಂದಿನ ಕಾರ್ಯಗಳ ಅವಲೋಕನ ಹಾಗೂ ಮುಂದೆ ಸರಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂಬ ಸೂಚನೆಯನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡುವುದಕ್ಕೋಸ್ಕರ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಇದು ಒಂದೆ ಆಗಿರತಕ್ಕ, ಮುಂದೆ ಆಗಬೇಕಾದ ಕಾರ್ಯಗಳನ್ನು ಕನ್ನಡಿಯ ರೂಪದಲ್ಲಿ ಈ ಸದನಕ್ಕೆ, ಈ ರಾಜ್ಯದ ಜನತೆಗೆ ತೋರಿಸತಕ್ಕ ರೀತಿಯಲ್ಲಿ ಜಂಟಿ ಅಧಿವೇಶನದಲ್ಲಿ ಮಾಡಿದ ಭಾಷಣ ಇರುತ್ತದೆ. ಹಿಂದೆ ಅಂದರೆ ೧೯೮೩ರ ಹಿಂದಿದ್ದ ಸರಕಾರ ನಡೆಸಿದ ದೌರ್ಜನ್ಯ ಮತ್ತು ಜನಹಿತಕ್ಕೆ ಉಪಕಾರಿಯಾಗದಿರುವಂತ ಕೆಲಸಗಳು, ಕನ್ನಡ ಜನತೆಯನ್ನು ಭಯದಲ್ಲಿಟ್ಟಿದ್ದ ಸರಕಾರ ಅದು. ಆ ಪಾಪದ ಫಲವಾಗಿ ಬರ ಪ್ರಾರಂಭವಾಯಿತು. ಶನಿದೇವ ಕಾಲಿಡಬೇಕಾದರೆ ಮೊದಲು ಪ್ರಖರತೆ ಕಡಿಮೆ ಇರುತ್ತದೆ, ಬರು ಬರುತ್ತಾ ಶನಿದೇವನ ಕಾಟ ಜಾಸ್ತಿಯಾಗುವ ರೀತಿಯಲ್ಲಿ ಅವರ ಪಾಪದ ಫಲವಾಗಿ ಬರ ಬರುತ್ತಾ ಬರುತ್ತಾ ಜಾಸ್ತಿಯಾಗಿ ಅದರ ಪ್ರಖರತೆ ಜಾಸ್ತಿ ಮಾಡುತ್ತಾ ಬಂದಿತು.

ಅಧ್ಯಕ್ಷರು.—ನಿಮಗಿರುವುದು ೧೦ ಮಿನಿಟ್ ಅದನ್ನು ನೋಡಿಕೊಂಡು ಮಾತನಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇಲ್ಲದೇ ಹೋದರೆ ಆ ಪಾಪದ ಫಲ ನಿಮಗೆ ಬಂದು ಬಿಡುತ್ತದೆ.

ಶ್ರೀ ಬಿ.ಜಿ. ಕೊಟ್ರಪ್ಪ.—ಜನತೆ ಈ ಒಂದು ಬರಗಾಲ ಪರಿಸ್ಥಿತಿಯನ್ನು ತಂದ ಒಂದು ಸರಕಾರ ಇರಕೂಡದು, ಜನರಿಗೆ ಒಳ್ಳೆಯದನ್ನು ಮಾಡತಕ್ಕ ಸರಕಾರ ತರಬೇಕಾದರೆ, ಅದು ಜನತಾ ಪಕ್ಷದ ಸರಕಾರವೇ ಯೋಗ್ಯವಾದ ಸರಕಾರ ಎಂದು ಹೇಳಿ ೧೯೮೩ನೇ ಇಸವಿಯಲ್ಲಿ ಜನತಾ ಸರಕಾರವನ್ನು ಪ್ರಾರಂಭ ಮಾಡಿದ ಕನ್ನಡ ಜನತೆಗೆ ನಿಜವಾಗಿಯೂ ಅಭಿನಂದನಾರ್ಹರು. ಜನತಾ ಸರ್ಕಾರ ಅಧಿ-ಕಾರಕ್ಕೆ ಬಂದ ತಕ್ಷಣವೇ ಬರಗಾಲದಿಂದ ಬೆಂದ ಜನತೆಯು, ಬರಗಾಲದ ಬೇಗೆಗೆ ಸಿಕ್ಕಿ ನರಳುತ್ತಿದ್ದ ಜನತೆಯ ಇಂಗಿತವನ್ನು ಮನಗಂಡು ಅವರ ಅನುಕಂಪವನ್ನು ಮನಗಂಡು ಅವರಿಗೆ ಆಹಾರ ಪದಾರ್ಥ ಗಳನ್ನು ದೊರಕಿಸಿಕೊಡುವುದು, ದುಡಿಯುವವರಿಗೆ ಕೆಲಸವನ್ನು ಒದಗಿಸಿಕೊಡುವುದು, ದನಗಳಿಗೆ ಮೇವು ಒದಗಿಸಿಕೊಡುವುದು, ಕುಡಿಯುವ ನೀರು ಒದಗಿಸಿಕೊಡುವುದು, ಇತ್ಯಾದಿ ಇತ್ಯಾದಿ ಕೆಲಸಕಾರ್ಯ ಗಳನ್ನು ಸುಸೂತ್ರವಾಗಿ ಮಾಡಿದ್ದಾರೆಂದು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದ ಪ್ರಾರಂಭ ದಲ್ಲಿಯೇ ಹೇಳಿದ್ದಾರೆ. ಈ ಬರಗಾಲದ ಪರಿಸ್ಥಿತಿ ೧೯೮೪ರ ವೇಳೆಗೆ ಅತಿರೇಖಕ್ಕೆ ಮುಟ್ಟಿತು. ಆದರೂ ಸಹ ಜನತಾ ಸರ್ಕಾರ ಹೆದರಿಕೊಳ್ಳದೆ ಧೈರ್ಯದಿಂದ ಮುನ್ನುಗ್ಗಿ ಜನಗಳ ಕಷ್ಟಕ್ಕೆ ಹೆಗಲಿಗೆ ಹೆಗಲು ಕೊಟ್ಟು ಜನತೆಗೆ ಬೇಕಾದಂತಹ ಎಲ್ಲಾ ರೀತಿಯ ಸೌಭಾಗ್ಯಗಳನ್ನು ಒದಗಿಸಿಕೊಟ್ಟಂತಹ ಸರ್ಕಾರ ನಮ್ಮ ಜನತಾ ಸರ್ಕಾರ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯ ಅನುದಾನ ನಮ್ಮ ರಾಜ್ಯ ಸರ್ಕಾರಕ್ಕೆ ಕೊಡದಿದ್ದರೂ ಸಹ ಜನತೆಯ ಕಷ್ಟ ಕಾರ್ಪಣ್ಯಗಳನ್ನು ಹೋಗಲಾಡಿಸಿದ ಮತ್ತು ಪಸುಗಳ ಸಂರಕ್ಷಣೆಯನ್ನು ಮಾಡಿದ ಕೀರ್ತಿ ನಮ್ಮ ಜನತಾ ಸರ್ಕಾರಕ್ಕೆ ಬರಬೇಕು. ಆದುದರಿಂದಲೇ ೧೯೮೫ನೇ ಇಸವಿಯ ಚುನಾವಣೆಯಲ್ಲಿ ಜನತಾ ಸರ್ಕಾರಕ್ಕೆ ಜನತೆ ನಿಚ್ಚಳ ಬಹುಮತ ಕೊಟ್ಟರೂ. ಬರಗಾಲ ಪರಿಸ್ಥಿತಿಯಲ್ಲಿ ಜನತೆ ಇದ್ದಾಗ ಕೇಂದ್ರ ಸರ್ಕಾರ ಕೊಟ್ಟಿದ್ದು ಕಡಿಮೆಯಾದರೂ ಸಹ ನಮ್ಮ ಜನತಾ ಸರ್ಕಾರ ಹೆಚ್ಚು ಹೆಚ್ಚು ಹಣವನ್ನು ಕೊಟ್ಟಿದೆ, ಜನತೆಗೆ ಉದ್ಯೋಗವಕಾಶವನ್ನು ಒದಗಿಸಿಕೊಟ್ಟಿದೆ. ಕೇಂದ್ರ ಸರ್ಕಾರ ನಮ್ಮ ನೆರವಿಗ ಬರದಿದ್ದರೂ ಸಹ ನಾವು ಜನತೆಯ ಸಂಕಷ್ಟಗಳಲ್ಲಿ ಪಾಲ್ಗೊಂಡು ಅವರಿಗೆ ಸಹಾಯ ಮಾಡುತ್ತೇವೆಂದು ದಿಟ್ಟವಾಗಿ ಹೇಳಿದಂತಹ ಸರ್ಕಾರ ನಮ್ಮ ಜನತಾ ಸರ್ಕಾರ. ಆ ಮಾತನ್ನು ಮಾನ್ಯ ರಾಜ್ಯಪಾಲರು ಮುಕ್ತಕಂಠದಿಂದ ಹೇಳಿದ್ದಾರೆ. ಇನ್ನು ಎರಡನೆಯದಾಗಿ ನಮ್ಮ ರಾಜ್ಯ ಜಾತ್ಯಾತೀತ ರಾಜ್ಯ. ನಮ್ಮ ರಾಜ್ಯದಲ್ಲಿ ಪ್ರತಿಯೊಬ್ಬರೂ ಅಣ್ಣ ತಮ್ಮಂದಿರಂತೆ, ಅಕ್ಕತಂಗಿಯರಂತೆ, ಸೋದರ ಸೋದರಿಯರಂತೆ, ಹಿಂದೂ ಮುಸಲ್ಮಾನರೆನ್ನುವ ಭೇದಭಾವ ಇಲ್ಲದೆ ಅನ್ಯೋನ್ಯತೆಯಿಂದ ಬಾಳಿ ಬದುಕಿದಂತಹ ರಾಜ್ಯ ನಮ್ಮ ಕರ್ನಾಟಕ ರಾಜ್ಯ. ಅಂತಹ ಒಂದು ಸಂದರ್ಭದಲ್ಲಿ ಬೆಂಗಳೂರು ಮೈಸೂರಿನಲ್ಲಿ ಒಂದು ಅಹಿತಕರವಾದಂಥ ಘಟನೆ ನಡೆದು ಹೋಯಿತು ಈ ಘಟನೆ ಯಾರೋ ಕೆಲರ ಕುಚೋದ್ಯದಿಂದ ನಡೆಯಿತು. ಯಾವುದೋ ಒಂದು ಕಡೆ ಪತ್ರಿಕೆಗಳಲ್ಲಿ ಪ್ರಕಟವಾಯಿತು ಎಂದು ಕೆಲವು ಜನ ಮಾಡಿಸಿದ ಕುಚೋದ್ಯ ಇದು, ಇವರಲ್ಲಿ ಸರ್ಕಾರದ ಕೈವಾಡ ಮತ್ತಿತರ ಕೈವಾಡವಿಲ್ಲ. ಯಾರೋ ಕೆಲವುಜನರ ಪ್ರಚೋದನೆಯಿಂದ ಹಲವಾರುಜನರ ಪ್ರಾಣಹತ್ಯೆ ಗಳಾದವು. ರಾಜ್ಯದ ಎಲ್ಲೆಡೆಗಳಲ್ಲಿ ಕಲುಷಿತ ವಾತಾವರಣಕ್ಕೆ ಎಡೆ ಮಾಡಿ ಕೊಟ್ಟಂತಾಯಿತು. ಆದರೂ ಸಹ ನಮ್ಮ ಕರ್ನಾಟಕ ರಾಜ್ಯದ ಜನ ಅರಿತುಕೊಂಡು ಎರಡು ದಿವಸಗಳಲ್ಲಿಯೇ ಸಹಜವಾದ ಸ್ಥಿತಿಗೆ ಬಂದರುಜೊತೆಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಅಲ್ಲಲ್ಲಿ ಎಲ್ಲಾ ಜಾತಿಗಳ ಮುಖ್ಯಸ್ಥರನ್ನು ಕರೆಸಿ ಸಮಾಧಾನ ಪಡಿಸಿ ಮಾತನಾಡಿ ಕಲುಷಿತ ವಾತಾವರಣದಲ್ಲಿದ್ದ ಪರಿಸ್ಥಿತಿಯನ್ನು ಶಾಂತಿ ಪರಿಸ್ಥಿತಿಗೆ ತಂದರು. ಕೆಲವೇ ದಿನಗಳಲ್ಲಿ ಅವರ ಕುಚೋದ್ಯ ತಂತ್ರ ನಶಿಸಿ ಹೋಯಿತು. ಆ ಸಮಯದಲ್ಲಿ ಸನ್ಮಾನ್ಯ ಗೃಹ ಸಚಿವರೂ ಸಹ ಸಾಕಷ್ಟು ಶ್ರಮಪಟ್ಟು ಹಗಲಿರುಳು ದುಡಿದು ಶಾಂತಿಯನ್ನುಂಟು ಮಾಡಿದರು

ಈ ಸಂದರ್ಭದಲ್ಲಿ ನಾನೂ ಸಹ ಅವರನ್ನು ಅಭಿನಂದಿಸಬೇಕಾಗಿದೆ. ಇನ್ನು ಪಂಚಾಯಿತಿ ರಾಜ್ಯ ವಿಷಯದ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಜನತಾ ಸರ್ಕಾರ ಆಡಿದ ಮಾತಿಗೆ ತಪ್ಪದ ಸರ್ಕಾರ ನುಡಿದಂತೆ ನಡೆಯುವ ಸರ್ಕಾರ ೧೯೮೩ ನೇ ಇಸವಿಯಲ್ಲಿ ಏನು ಒಂದು ಘೋಷಣೆಯನ್ನು ಸರ್ಕಾರ ಮಾಡಿತ್ತೋ ಆ ಕೆಲಸವನ್ನು ಮಾಡಿದೆ. ಅಧಿಕಾರದ ವಿಕೇಂದ್ರೀಕರಣ

(ಶ್ರೀ ಚಂದ್ರಕಾಂತ ಬೆಲ್ಲದ್‌ರವರು ಅಧ್ಯಕ್ಷಪೀಠವನ್ನಲಂಕರಿಸಿದರು)

ಮಾಡಿದೆ. ಜಿಲ್ಲಾಪರಿತ್ತು ಮತ್ತು ಮಂಡಲ್ ಪಂಚಾಯಿತಿಗಳ ಚುನಾವಣೆಗಳನ್ನು ಮಾಡಿ ಅಧಿಕಾರವನ್ನು ಕೆಳಹಂತದ ಜನತೆಯ ಕೈಗೆ ಕೊಟ್ಟಿದ್ದಾರೆ. ತಮ್ಮ ಗ್ರಾಮಾಭಿವೃದ್ಧಿಯನ್ನು ತಾವೇ ಮಾಡಿಕೊಳ್ಳುವಂತಹ ಅವಕಾಶವನ್ನು ಜನತೆಗೆ ಜನತಾ ಸರ್ಕಾರ ಮಾಡಿಕೊಟ್ಟಿದೆ. ಇನ್ನು ಬೆಂಗಳೂರು ಮಹಾನಗರದಲ್ಲಿ ಸಾರ್ಕ್‌ಸಮ್ಮೇಳನವನ್ನು ನಡೆಸಿದರು. ಆ ಸಮ್ಮೇಳನಕ್ಕೆ ಅಂತರಾಷ್ಟ್ರೀಯ ಗಣ್ಯರು ಸಹ ಬಂದಿದ್ದರು. ಈ ದೇಶದ ಪ್ರಧಾನ ಮಂತ್ರಿಗಳು ಸಹ ಬಂದಿದ್ದರು. ಆಗ ನಮ್ಮ ಜನತಾ ಸರ್ಕಾರ ಅವರಿಗೆ ತೋರಿಸಿದ ಆಥಾರತೀತ್ಯಗಳನ್ನು ಅವರು ಮೆಚ್ಚಿಕೊಂಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಕೀರ್ತಿ ಅಂತರಾಷ್ಟ್ರ ಮಟ್ಟದಲ್ಲಿ ಕೂಡ ಮಿಂಚುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಇನ್ನು ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರುವಲ್ಲಿ ಕರ್ನಾಟಕ ರಾಜ್ಯವು ಇಡೀ ಭಾರತದಲ್ಲಿ ೩ನೇ ಸ್ಥಾನದಲ್ಲಿದೆಯೆಂದು ಕೇಂದ್ರ ಸರ್ಕಾರದವರೇ ಹೇಳಿ ಹೋಗಿದ್ದಾರೆ. ಈ ಕರ್ನಾಟಕ ಸರ್ಕಾರವು ೨೦ ಅಂಶಗಳ ಕಾರ್ಯಕ್ರಮವನ್ನು ಎಷ್ಟರ ಮಟ್ಟಿಗೆ ಕಾಳಜಿ ವಹಿಸಿ ಜನತೆಯ ಉದ್ಧಾರಕ್ಕಾಗಿ ಕೆಲಸ ಮಾಡಿದೆಯೆಂದು ಇದರಿಂದ ಮನಗಾಣಬೇಕಾಗಿದೆ. ಹೋದ ೩ ವರ್ಷಗಳಿಂದಲೂ ಕರ್ನಾಟಕದಲ್ಲಿ ಬರಗಾಲದಲ್ಲಿ ಜನರಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಬಡವರಿಗೆ ಕಡಿಮೆ ಬೆಲೆಯಲ್ಲಿ ಆಹಾರಧಾನ್ಯಗಳನ್ನು ಪೂರೈಸಿದೆ. ಕೇಂದ್ರ ಸರ್ಕಾರದವರು ಆಹಾರ ಧಾನ್ಯಗಳನ್ನು ಕೊಡುವುದರಲ್ಲಿ ಕೊಂಕು ಮಾಡಿದ್ದರೂ ಕೂಡ ಹಾಗೂ ಕೇಂದ್ರ ಸರ್ಕಾರದವರು ಆಹಾರ ಧಾನ್ಯಗಳಿಗೆ ಹೆಚ್ಚಿನ ಧಾರಣೆ ತೆಗೆದುಕೊಂಡರೂ ಸಹ, ಜನತೆಗೆ ಜನತಾ ಸರ್ಕಾರವು ವಚನ ಕೊಟ್ಟ ರೀತಿಯಲ್ಲಿ ಎರಡು ರೂಪಾಯಿಗೆ ಒಂದು ಕೇಜಿ ಅಕ್ಕಿಯನ್ನು ಕೊಟ್ಟಿದೆ, ರಾಗಿಯನ್ನು ೧೩೦ ಪೈಸೆಗೆ ಕೊಟ್ಟಿದೆ, ಜೋಳವನ್ನು ೧೪೦ ಪೈಸೆಗೆ ಕೊಡತಕ್ಕ ಕೆಲಸವನ್ನು ಮಾಡಿದೆ. ಕೇಂದ್ರ ಸರ್ಕಾರ ಕೇವಲ ೬೦ ಸಾವಿರ ಟನ್ ಹೆಚ್ಚಿನ ಧಾನ್ಯ ಕೊಟ್ಟಿದೆ. ಇದು ಏನೇನೂ ಸಾಲದು ಆದರೂ ನಮ್ಮ ಸರ್ಕಾರ ಆಹಾರ ಧಾನ್ಯಗಳನ್ನು ಮಾತು ಕೊಟ್ಟಂತೆ ಸರಬರಾಜು ಮಾಡಿ ಕೀರ್ತಿಯನ್ನು ಪಡೆದಿದೆ. ಬಡ ಜನತೆಗೆ ಸಹಾಯ ಮಾಡಿದ ಕೀರ್ತಿ ಜನತಾ ಸರ್ಕಾರಕ್ಕೆ ಸೇರಬೇಕಾಗಿದೆ. ಇದೂ ಅಲ್ಲದೇ ಅನೇಕ ವರ್ಷ ವರ್ಷಗಳಿಂದ ಬಡ ಜನತೆ, ಹಳ್ಳಿಯ ಜನತೆ, ಕುಗ್ರಾಮದಲ್ಲಿರತಕ್ಕ ಜನತೆ, ನೀರು ನೀರು ಎಂದು ಪರಿತಪಿಸುತ್ತಿದ್ದರು. ಹಿಂದಿನ ಸರ್ಕಾರ ೩೭ ವರ್ಷಗಳಿಂದ ಕೇವಲ ೨೭ ಸಾವಿರ ಬಾವಿಗಳನ್ನು ತೆಗೆಸಿತ್ತು. ಹಿಂದಿನ ಸರ್ಕಾರ ೩೭ ವರ್ಷಗಳಲ್ಲಿ ಮಾಡದೇ ಇದ್ದ ಕೆಲಸವನ್ನು ಜನತಾ ಸರ್ಕಾರ ಬಂದ ೩ ವರ್ಷಗಳಲ್ಲಿ ಮಾಡಿ ತೋರಿಸಿದೆ. ಜನತಾ ಸರ್ಕಾರ ಬಂದ ೩ ವರ್ಷಗಳಲ್ಲಿ ಪ್ರತಿಯೊಂದು ಕೋಳಿ ಕೂಗುವ ಹಳ್ಳಿಗೂ ಬಾವಿಯನ್ನು ತೋಡಿಸಿಕೊಟ್ಟು ಜನತೆಯು ನೀರು ಕುಡಿಯುವುದಕ್ಕೆ ಅನುಕೂಲ ಮಾಡಿಕೊಟ್ಟಿದೆ. ಈ ವಿಷಯವನ್ನು ನಮ್ಮ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಹೇಳಿದೆ. ಬಡವರಿಗೆ ನಿವೇಶನಗಳನ್ನು ಕೊಡುವ ಬಗ್ಗೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ರಾಜ್ಯದಲ್ಲಿರುವ ಎಲ್ಲಾ ಬಡವರನ್ನು ಗುರುತಿಸಿ, ನಿವೇಶನ ಇಲ್ಲದೇ ಇರುವ ಎಲ್ಲಾ ಬಡವರಿಗೂ ಮನೆಗಳನ್ನು ಒದಗಿಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಈಗಾಗಲೇ ಈ ಯೋಜನೆಯನ್ನು ಕಾರ್ಯಗತ ಮಾಡಲಾಗಿದೆ.

ಶ್ರೀ ಬಿ. ಸ್ವಾಮಿರಾವ್,—ಮಾನ್ಯ ಉಪಾಧ್ಯಕ್ಷರೇ, ಸದನದಲ್ಲಿ ಕೋರಮ್ ಇಲ್ಲ, ಆದರೂ ಮಾನ್ಯ ಸದಸ್ಯರು ಮಾತನಾಡುತ್ತಲೇ ಇದ್ದಾರೆ.

ಉಪಾಧ್ಯಕ್ಷರು.—ಬರುತ್ತಾರೆ, ಬರುತ್ತಾರೆ, ಕುಳಿತುಕೊಳ್ಳಿ.

ಶ್ರೀ ಬಿ. ಎಂ. ಇದಿನಬ್ಬ.—ಸಂಬಂಧಪಟ್ಟ ಮಂತ್ರಿಗಳೂ ಕೂಡ ಇಲ್ಲ.

ಉಪಾಧ್ಯಕ್ಷರು.—ಬರುತ್ತಾರೆ, ಕುಳಿತುಕೊಳ್ಳಿ.

ಶ್ರೀ ಬಿ. ಜಿ. ಕೊಟ್ರಪ್ಪ.—ಕರ್ನಾಟಕ ಸರ್ಕಾರವು ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ವಿದ್ಯಾ ವಿಕಾಸ ಯೋಜನೆಯಲ್ಲಿ ಬಡ ಮಕ್ಕಳಿಗೆ ಪುಸ್ತಕವನ್ನು ಪುಕ್ಕಟೆಯಾಗಿ ಕೊಡಲಾಗುತ್ತಿದೆ, ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಉಚಿತವಾಗಿ ಕೊಡಲಾಗುತ್ತಿದೆ. ಬಡ ಮಕ್ಕಳನ್ನು ಪಾಠಶಾಲೆಗೆ ಬರುವಂತೆ ಆಕರ್ಷಣೆ ಮಾಡಿ ಅವರನ್ನು ವಿದ್ಯಾ

ವಂತರನ್ನಾಗಿ ಮಾಡಿರುವ ಯೋಜನೆಯು ಬಹಳ ಸ್ತುತ್ಯಾರ್ಹವಾಗಿ ಕೆಲಸ ಮಾಡಿದೆ. ಬಡವರು ಹೆಚ್ಚಿನ ಸಂಖ್ಯೆಯಲ್ಲಿ ಅವಿದ್ಯಾವಂತರಾಗಿದ್ದಾರೆ. ಇವರನ್ನು ವಿದ್ಯಾವಂತರನ್ನಾಗಿ ಮಾಡುವ ಯೋಜನೆಯನ್ನು ಹಾಕಿಕೊಂಡಿರುವುದು ಬಹುಶಃ ಭಾರತದ ಯಾವ ರಾಜ್ಯದವರೂ ಈ ರೀತಿ ಮಾಡಿಲ್ಲವೆಂದು ಹೇಳಬಹುದು. ನಂತರ ಖುಷ್ಕಿ ಜಮೀನು ಅಭಿವೃದ್ಧಿ ಬಗ್ಗೆ ಜನತಾ ಸರ್ಕಾರವು ಒಳ್ಳೆಯ ಕೆಲಸಗಳನ್ನು ಮಾಡಿದೆ. ಕೆಲವರಿಗೆ ಭೂಮಿ ಎಂದರೆ ಏನು ಗೊತ್ತಿಯೋ ಇಲ್ಲವೋ, ಬೇಸಾಯ ಎನುವುದು ಗೊತ್ತಿದೆಯೋ ಇಲ್ಲವೋ, ಅಂಥವರೆಲ್ಲಾ ಒಣ ಬೇಸಾಯದ ಬಗ್ಗೆ ಮಾತನಾಡಿದ್ದಾರೆ. ಈ ಒಣ ಬೇಸಾಯದ ಅಭಿವೃದ್ಧಿ ಬೋರ್ಡ್‌ನ್ನು ಮಾಡಿರುವುದು ಬಹಳ ಒಳ್ಳೆಯದು. ರೈತರುಗಳು ನೀರಾವರಿ ಅನುಕೂಲ ಇಲ್ಲದ ಪ್ರದೇಶಗಳಲ್ಲಿ ಬರ ಮತ್ತು ಬೆಂಗಾಡುಗಳಿಂದ ಕಂಗಾಲಾಗಿದ್ದಾರೆ. ಅಂಥ ಜನಗಳು ಅಲ್ಪ ಸ್ವಲ್ಪ ಬೆಳೆ ಬೆಳೆಯುಲಿಕ್ಕೆ ಮಾಡಿರುವ ಈ ಯೋಜನೆಯು ನಿಜವಾಗಿ ಸ್ತುತ್ಯಾರ್ಹವಾಗಿದೆ. ಒಣ ಭೂಮಿಯನ್ನು ಹೊಂದಿರುವ ರೈತರುಗಳು ಈ ಕಾರ್ಯಕ್ರಮದಿಂದ ನಾವು ಅಲ್ಪ ಸ್ವಲ್ಪ ಬೆಳೆಯನ್ನಾದರೂ ಬೆಳೆಯಬಹುದೆಂಬ ಆಶಾಭಾವನೆಯನ್ನು ತಳೆದಿದ್ದಾರೆ. ಜನರ ಆಶಾಭಾವನೆಯನ್ನು ಹಾಗೂ ಕಲ್ಪನೆಯನ್ನು ಈ ಖುಷ್ಕಿ ಬೇಸಾಯ ಅಭಿವೃದ್ಧಿ ಬೋರ್ಡ್‌ನ್ನು ಮಾಡುವುದರ ಮೂಲಕ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ. ನೀರಾವರಿ ಯೋಜನೆಗೂ ಸಹ ಎಷ್ಟೋ ಅಡ್ಡಿ ಆತಂಕ ಇದ್ದರೂ ೨೦–೩೦ ಕೋಟಿ ರೂಪಾಯಿಗಳನ್ನು ಕೊಟ್ಟು ಹೆಚ್ಚಿನ ಜಮೀನಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿ ಕೊಟ್ಟಿದೆ. ಅದೂ ಅಲ್ಲದೇ ೧೯೮೭–೮೮ನೇ ಸಾಲಿನ ಬಜೆಟ್‌ನಲ್ಲಿ ನೀರಾವರಿಗಾಗಿ ೩೦೦ ಕೋಟಿ ರೂಪಾಯಿಗಳನ್ನು ಇಡುತ್ತೇವೆಂದು ಘೋಷಣೆ ಮಾಡಲಾಗಿದೆ. ಕೃಷ್ಣ ಬೇಸಿನ್‌ಗೆ ಹಾಗೂ ಕಾವೇರಿ ಬೇಸಿನ್‌ಗೆ ವಿಶೇಷ ಗಮನ ಕೊಟ್ಟು ಹೆಚ್ಚಿನ ಹಣವನ್ನು ಈ ಸಾಲಿಗಾಗಿ ಬಿಡುಗಡೆ ಮಾಡುತ್ತಿದೆ. ಎರಡು ಸಾವಿರ ವರ್ಷದೊಳಗೆ ಬಚಾವತ್ ರಿಪೋರ್ಟ್ ಪ್ರಕಾರ ನಮ್ಮ ರಾಜ್ಯಕ್ಕೆ ಬರಬೇಕಾದ ನೀರನ್ನು ಬಳಸಿಯೇ ತೀರುತ್ತೇವೆಂದು ನಮ್ಮ ಲೋಕೋಪಯೋಗಿ ಮಂತ್ರಿಗಳು ಘೋಷಣೆ ಮಾಡಿದ್ದಾರೆ. ನಾವು ಬಳಸಬೇಕಾದ ನೀರನ್ನು ಬಳಸಿಯೇ ತೀರುತ್ತೇವೆ ಎಂದು ನಮ್ಮ ಲೋಕೋಪಯೋಗಿ ಮಂತ್ರಿಯವರು ಮತ್ತು ಮುಖ್ಯಮಂತ್ರಿಯವರು ಹೇಳಿರತಕ್ಕಂಥ ಘೋಷಣೆ ಮತ್ತು ಅದರ ಪರಿಪೂರ್ಣತೆಗಾಗಿ ೩೦೦ ಕೋಟಿ ರೂಪಾಯಿಗಳನ್ನು ೧೯೮೭–೮೮ನೇ ವಾರ್ಷಿಕ ಬಜೆಟ್‌ನಲ್ಲಿ ಒದಗಿಸಿಕೊಡುತ್ತೇವೆ ಎಂದು ಹೇಳಿರತಕ್ಕಂಥಾದ್ದು ಇವೊತ್ತು ಅತ್ಯಂತ ಸ್ತುತ್ಯಾರ್ಹವಾಗಿದೆ.

ಇನ್ನು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಅನೇಕ ಭೂಮಾಲೀಕರು ಕೋರ್ಟ್‌ಗೆ ಕೇಸ್‌ಗಳನ್ನು ಹಾಕಿದರು. ಆದರೆ, ಒಕ್ಕಲುಗಳು ಎಲ್ಲಗೂ ಹೆಚ್ಚಾಗಿ ಬಡವರು ಇದ್ದಾರೆ. ಬಡತನದಲ್ಲಿರತಕ್ಕಂಥ ಜನರಿಗೆ ಕೋರ್ಟಿಗೆ ಅಲೆದಾಡಲು, ವೆಚ್ಚ ಮಾಡಲು ಹಣ ಇಲ್ಲ ಎಂದು ತಿಳಿದುಕೊಂಡು, ಅವರನ್ನು ಗಮನದಲ್ಲಿಟ್ಟುಕೊಂಡು ಅಂತಹ ಕೇಸ್‌ಗಳ ತೀರ್ಮಾನವು ಆಯಾಯಾ ಜಿಲ್ಲೆಗಳಲ್ಲಿ ನಡೆಯುವಂಥ ಒಂದು ವ್ಯವಸ್ಥೆಯನ್ನು ಅಂದರೆ ಸುಪ್ರೀಮ್ ಕೋರ್ಟಿನ ತೀರ್ಮಾನದ ಪ್ರಕಾರ ಅಪಿಲೇಟ್ ಟ್ರಿಬ್ಯೂನಲ್ ಮಾಡಿಕೊಟ್ಟ ಕೀರ್ತಿಯು ಜನತಾ ಸರಕಾರಕ್ಕೆ ಮೊದಲು ಸಲ್ಲಬೇಕು.

ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ತುಂಬಾ ಚೆನ್ನಾಗಿ ಕೆಲಸವನ್ನು ಮಾಡಿ ರಾಷ್ಟ್ರಮಟ್ಟದಲ್ಲಿ ಪ್ರಶಂಸೆಗೆ ಪಾತ್ರವಾಗಿದೆ. ಒಂದು ಕೋಟಿ ರೂಪಾಯಿಗಳ ಬಹುಮಾನವನ್ನು ಕೂಡ ಪಡೆಯುವಲ್ಲಿ ತನ್ನ ಕಾರ್ಯದಕ್ಷತೆಯನ್ನು ತೋರಿಸಿತು. ಮಾನ್ಯ ಮಾಜಿ ಆರೋಗ್ಯ ಮಂತ್ರಿಗಳವರಾದ ಶ್ರೀ ತಿಮ್ಮೇಗೌಡರು ಈ ಕಾರ್ಯದಲ್ಲಿ ತಮ್ಮ ನಿಷ್ಠೆಯನ್ನು ತೋರಿಸಿ ಯೋಜನೆಯನ್ನು ಯಶಸ್ವಿಗೊಳಿಸಿದರು. ಇದೊಂದು ಸರಕಾರ ಮಾಡಿದ ಯೋಗ್ಯವಾದ ಕೆಲಸ ಎಂದು ಹೇಳಬೇಕಾಗಿದೆ.

ಇನ್ನು ಕನಿಷ್ಟ ಕೂಲಿಯನ್ನು ಪಡೆಯತಕ್ಕಂಥ ಜನರಿಗೆ ಹೆಚ್ಚಿನ ಕೂಲಿ ಮತ್ತು ಇತರ ಸೌಲಭ್ಯಗಳನ್ನು ಕೊಡಿಸುವಲ್ಲಿ ಕಾರ್ಯನಿರ್ವಹಣೆಯನ್ನು ಸರಕಾರ ಮಾಡಿದೆ. ಅಂತೆಯೇ ಬಡವರಿಗೆ ಕಾನೂನು ನೆರವನ್ನು ಒದಗಿಸಿದೆ. ಅಂತಹ ಅನೇಕ ಬಡಜನರ ಹಿತಸಾಧನೆಯ ಕೆಲಸಗಳನ್ನು ಸರಕಾರ ಮಾಡಿದೆ ಎಂದು ಹೇಳಲು ಇಷ್ಟಪಡುತ್ತೇನೆ.

ನಮ್ಮ ಕನ್ನಡ ಕಾವಲು ಸಮಿತಿ ಕೇವಲ ಕರ್ನಾಟಕ ಎಂಬ ಹೆಸರು ಇದ್ದರೆ ಸಾಲದು, ಪ್ರತಿಯೊಬ್ಬರೂ ಕನ್ನಡ ಕಲಿಯ ಬೇಕಾದ ಒಂದು ವಾತಾವರಣ ನಿರ್ಮಾಣ ಆಗಬೇಕು, ಬಡರೈತರಿಗೆ, ಗ್ರಾಮೀಣ ಜನತೆಗೆ ತಿಳಿಯುವ ಭಾಷೆಯಲ್ಲಿ ರಾಜ್ಯದ ವ್ಯವಹಾರ ನಡೆಯಬೇಕು ಎಂದು ಕನ್ನಡಕ್ಕೆ ಪ್ರೋತ್ಸಾಹಕರವಾದ ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಬಡವರ, ರೈತರ ಪ್ರತಿಯೊಂದು ಅರ್ಜಿ ಕನ್ನಡದಲ್ಲಿರುವುದರಿಂದ ಅವುಗಳಿಗೆ ಇಂದು ಮನ್ನಣೆ ಪ್ರಾಪ್ತವಾಗಿದೆ. ಸರಕಾರದ ವ್ಯವಹಾರಗಳೆಲ್ಲವೂ ಕನ್ನಡದಲ್ಲಿ ನಡೆಯಬೇಕೆಂಬ ಉದ್ದೇಶದಿಂದ ಕನ್ನಡ ಕಾವಲು ಸಮಿತಿಯವರು ಅತ್ಯಂತ ಶ್ರದ್ಧೆಯಿಂದ ಶ್ರಮಿಸುತ್ತಿದ್ದಾರೆ. ಆದರೆ ಕೆಲವು ಮಾನ್ಯ ಸದಸ್ಯರುಗಳು ಟೀಕೆ ಮಾಡಿದ್ದಾರೆ. ಆ

ಬಗೆಗೆ ನಾನು ಹೆಚ್ಚಿಗೆ ಮಾತನಾಡಲು ಹೋಗುವುದಿಲ್ಲ. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತು ಎಂಬ ಹಾಗೆ ಈ ಟೀಕೆಗಳು ಎಂದು ಹೇಳಬೇಕಾಗುತ್ತದೆ. ಎದುರು ಪಕ್ಷದ ಮಾನ್ಯ ಸದಸ್ಯರುಗಳು ಮಾಡಿದಂತಹ ಭಾಷಣವನ್ನು ನೋಡಿದರೆ, ಆನೆಯ ಮೈ ತೊಳೆದಂತೆ ಆಗಿದೆ. ಆನೆಗೆ ಎಷ್ಟು ಬಾರಿ ಮೈ ತೊಳೆದರೂ ಕೂಡ ಪುನಃ ಮಣ್ಣನ್ನು ಹಾಕಿಕೊಳ್ಳುತ್ತದೆ. ಅದು ಅವರ ಸ್ವಭಾವವಾಗಿದೆ. ಹಾಗಾಗಿದೆ ಇವರ ಟೀಕೆಗಳು. ೩೫ ವರ್ಷಗಳಿಂದ ಯಾರು ಆಡಳಿತವನ್ನು ಮಾಡಿ ರಾಮರಾಜ್ಯವನ್ನು ಸ್ಥಾಪಿಸಲಿಕ್ಕೆ, ಜನರ ಕಷ್ಟಕಾರ್ಪಣ್ಯಗಳನ್ನು ಅರಿತು ಅದಕ್ಕೆ ಸ್ಪಂದಿಸಲಿಕ್ಕೆ ಪ್ರಯತ್ನವನ್ನು ಮಾಡಲಿಲ್ಲ. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳವರಾದ ರಾಮಕೃಷ್ಣ ಹೆಗಡೆಯವರು ೧೯೮೩ರಲ್ಲಿ ತಮ್ಮ ಆಡಳಿತ ವನ್ನು ಪ್ರಾರಂಭ ಮಾಡಿ ರಾಮರಾಜ್ಯ ಸ್ಥಾಪನೆಯ ರೀತಿಯಲ್ಲಿ ಜನತೆಯ ಕಲ್ಯಾಣವನ್ನು ಮಾಡಿದ್ದಾರೆ. ಜನಹಿತ ಕೆಲಸಗಳನ್ನು ಮಾಡಿದ್ದಾರೆ. ಜನತೆಯ ಮನಸ್ಸನ್ನು ಆಕರ್ಷಿಸಿಕೊಂಡು ಆಡಳಿತವನ್ನು ನಡೆಸುತ್ತಿದ್ದಾರೆ. ಜನತೆಯ ಪರವಾಗಿ ಸರಕಾರವನ್ನು ನಡೆಸುತ್ತಿದ್ದಾರೆ. ಆದರೆ ಇಂದಿರಾ ಗಾಂಧಿ ಯವರು ಸತ್ತ ನಂತರ, ಅವರು ಗುಂಡು ಹೊಡೆದು ನಿಧನರಾದ ಫೋಟೋವನ್ನು ಜನರಿಗೆ ತೋರಿಸಿ, ಜನರ ಅನುಕಂಪವನ್ನು ಪಡೆದು ಓಟು ತೆಗೆದುಕೊಳ್ಳುವ ಪ್ರಯತ್ನವನ್ನು ವಿರೋಧಪಕ್ಷದವರು ಮಾಡಿದರು. ಆಗ ರಾಮಕೃಷ್ಣ ಹೆಗಡೆಯವರು ಜನತೆಯ ತೀರ್ಪಿಗೆ ರಾಜೀನಾಮೆಯನ್ನು ಕೊಟ್ಟರು. ಯಾರಾದರೂ ಹೀಗೆ ನಿಮ್ಮಲ್ಲಿ ಜನತೆಯ ತೀರ್ಪಿಗೆ ಮನ್ನಣೆ ಕೊಟ್ಟಿದ್ದಾರೆಯೇ ?... ಇಂದಿರಾಗಾಂಧಿ ಯವರು ಹೈಕೋರ್ಟಿನ ತೀರ್ಪಿಗೆ ಎದುರಾಗಿ ನಡೆದು, ಕಾನೂನನ್ನು ಧಿಕ್ಕರಿಸಿ ನಡೆದಿದ್ದರು. ಇದು ನಾಚಿಕೆಗೇಡಲ್ಲವೇ......

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತನಾಡಿ ಮುಗಿಸಲಿ.

ಶ್ರೀ ವಿನಯಕುಮಾರ್ ಸೊರಕೆ.—ಅಧ್ಯಕ್ಷರೇ, ನಮಗೂ ಮಾತನಾಡಲು ಅವಕಾಶ ಕೊಡಿ.....

(ಗೊಂದಲ)

ಶ್ರೀ ಬಿ. ಜಿ. ಕೊಟ್ರಪ್ಪ.—ಮಾನ್ಯ ರಾಮಕೃಷ್ಣ ಹೆಗಡೆಯವರು ರಾಜೀನಾಮೆಯನ್ನು ಕೊಟ್ಟು ಜನತೆಯ ತೀರ್ಪಿಗೆ ಮನ್ನಣೆ ಕೊಟ್ಟರು. ಬದಲಾಗಿ ಅಧಿಕಾರಕ್ಕೆ ಅಂಟಿಕೊಳ್ಳುವ ಬಗ್ಗೆ ಪ್ರಯತ್ನ ಮಾಡಲಿಲ್ಲ. ಮುಂದೆ ಜನತೆಗೆ ತಮ್ಮ ಮೇಲೆ ವಿಶ್ವಾಸ ಇದೆಯೋ ಇಲ್ಲವೋ ಎಂದು ತಿಳಿಯಲು ಓಟು ಕೇಳಲು ಜನತೆಯ ಮುಂದೆ ಹೋದಾಗ ಜನತೆಯು ರಾಮಕೃಷ್ಣ ಹೆಗಡೆಯವರನ್ನು ಗೌರವಿಸಿ ಆರಿಸಿದ್ದಾರೆ. ಅವರು ರಾಮ–ಕೃಷ್ಣರ ಅವತಾರ...

ಶ್ರೀ ಬಿ. ಎಂ. ಇದಿನಬ್ಬ.—ಇವರನ್ನು ಮಂತ್ರಿಯಾಗಿ ಮಾಡಬೇಕು... ಮುಖ್ಯಮಂತ್ರಿಯವ ರನ್ನು ಹೊಗಳಿ ಮಾತನಾಡುತ್ತಿದ್ದಾರೆ. ಕೌರವರದ ಕಾಂಗ್ರೆಸ್ಸಿಗರ ದುರ್ಗುಣಗಳನ್ನು ಕಿತ್ತು ಪಾಂಡವರ ಸತ್ಯಧರ್ಮದ ರಾಜ್ಯ ಸ್ಥಾಪನೆ ಮಾಡಬೇಕಾಗಿದೆ ಎಂದು ಹೆಗಡೆಯವರು ೧೯೮೩ರಲ್ಲಿ ಹೇಳಿದಾಗ ಜನತೆ ಜನತಾ ಸರ್ಕಾರವನ್ನು ತಂದಿತು. ಆದ್ದರಿಂದ ಇವತ್ತಿ ರುವುದು ಧರ್ಮರಾಜ್ಯ. ಈ ಕಾಂಗ್ರೆಸಿಗರು ಹರಿಜನಗಿರಿಜನರ ಬಗ್ಗೆ ಮುಸಲ್ಮಾನರ ಬಗ್ಗೆ ಅವರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಾ ಅವರನ್ನೊಂದು ವೋಟ್‌ಬ್ಯಾಂಕ್ ಆಗಿ ಸೃಷ್ಟಿಸಿಕೊಂಡು ಆಳ್ವಿಕೆ ಮಾಡುತ್ತಿದ್ದರು. ಆದರೆ ಜನತಾ ಸರ್ಕಾರ ಜನ ನೆನಪಿನಲ್ಲಿಟ್ಟುಕೊಳ್ಳುವ ಕೆಲಸ ಮಾಡಿದೆ. ನಮ್ಮ ದೇವೇಗೌಡರ ಉದಾಹರಣೆ ತೆಗೆದುಕೊಳ್ಳಿ. ಗಂಗಾಕಲ್ಯಾಣ ಎಂದು ಒಂದು ಯೋಜನೆ ತಂದು ನೂರಾರು ಬಡವರ ಹೊಲಗದ್ದೆಗಳಿಗೆ ಗಂಗೆಯನ್ನು ಹರಿಸಿದ್ದಾರೆ. ನನ್ನ ತಾಲ್ಲೂಕಿನಲ್ಲೇ ಹೇಳುವುದಾದರೆ ೧೨೦ ಎಕರೆ ಹರಿಜನರ ಭೂಮಿಗಳಿಗೆ ಈ ಯೋಜನೆಯಿಂದ ನೀರು ಹರಿದಿದೆ.

(ಗೊಂದಲ)

ರಾಮ ಮತ್ತು ಕೃಷ್ಣ ಎರಡನ್ನು ಸೇರಿಸಿಕೊಂಡು ರಾಮಕೃಷ್ಣ ಹೆಗಡೆಯವರ ಸರ್ಕಾರದ ಸಾಧನೆಗಳನ್ನು ಮಾನ್ಯ ರಾಜ್ಯಪಾಲರು ಪಟ್ಟಿಮಾಡಿದ್ದಾರೆ. ಇದೆಲ್ಲ ಧರ್ಮರಾಜ್ಯದ ಸಂಗತಿಗಳಲ್ಲವೇ?

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ಗೋವಿಂದಾ, ಗೋವಿಂದಾ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ಈಗ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಅವರು ಮಾತನಾಡಿದ ಮೇಲೆ ಉತ್ತರ ಕೊಡಲಿಕ್ಕೆ ಅವಕಾಶ ಇದೆ. ಅದು ಬಿಟ್ಟು ಗೋವಿಂದಾ ಎಂದು ಹೀಗೆಲ್ಲ ಕೂಗುವುದು ಸೌಜನ್ಯವೂ ಅಲ್ಲ, ಸದ್ವರ್ತನೆಯೂ ಅಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ರಾಮ ಕೃಷ್ಣ ಎಂದು ಅವರು ಹೇಳಬಹುದು, ನಾನು ಗೋವಿಂದಾ ಎಂದರೆ ಹೇಗೆ ತಪ್ಪಾಗುತ್ತದೆ ?

ಶ್ರೀ ಆರ್. ಎಲ್. ಜಾಲಪ್ಪ.—ಈ ಸದನದಲ್ಲಿ ಹೀಗೆಲ್ಲ ಮಾತನಾಡಬಾರದು. ಹೊರಗಡೆ ಪ್ಲಾಟ್‌ಫಾರಮ್‌ನಲ್ಲಿ ಹೇಗೆ ಬೇಕಾದರೂ ಅವರು ಹೋಗಿ ಮಾತನಾಡಲಿ, ಕೂಗಿಕೊಳ್ಳಲಿ. ಇಲ್ಲಿ ನಾವೂ ನೀವೂ ಎಲ್ಲರೂ ಸೌಜನ್ಯದಿಂದ ವರ್ತಿಸಬೇಕು.

(ಗೊಂದಲ)

ಅಧ್ಯಕ್ಷರು.—ಕಾನಡೆಯವರೇ ನಿಮಗೆ ಅವಕಾಶ ಇರುವಾಗ ನೀವು ಮಾತನಾಡಿ.

ಶ್ರೀ ಬಿ. ಜಿ. ಕೊಟ್ರಪ್ಪ.—ಸ್ವಾಮಿ ನನಗೆ ಕೊಟ್ಟ ಸಮಯವನ್ನೆಲ್ಲ ಅವರೇ ಮಾತನಾಡಿದ್ದಾರೆ. ಇಂದಿರಾಗಾಂಧಿಯವರು ಸ್ವತಃ ಹೆಂಗಸಾಗಿದ್ದರೂ, ತಾಯಿಯಾಗಿದ್ದರೂ ಹೆಂಗಸರ ಕಷ್ಟಗಳನ್ನರಿಯಲಿಲ್ಲ. ಆದರೆ ನಮ್ಮ ಹೆಗಡೆಯವರು ಮಾತೃದೇವೋಭವ ಎಂಬುದನ್ನು ನಂಬಿ ನಿರ್ಗತಿಕ ವೃದ್ಧರಿಗೆ, ಗರ್ಭಿಣಿಯರಿಗೆ ಮಾಸಾಶನ ಕೊಟ್ಟರು. ವಿಧವೆಯರಿಗೆ ಮಾಸಾಶನ ಕೊಡಿಸುತ್ತಿದ್ದಾರೆ. ಇದನ್ನೆಲ್ಲ ಸರ್ಕಾರ ಪವಿತ್ರಭಾವನೆಯಿಂದ ಮಾಡಿದೆ. ಈ ಕಾರ್ಯಕ್ರಮಗಳನ್ನು ಮುಂದೆ ಎಂಥ ಕಷ್ಟ ಬಂದರೂ ಮುಂದುವರೆಸುವುದಾಗಿ ಸರ್ಕಾರದ ಪರವಾಗಿ ರಾಜ್ಯಪಾಲರು ಜನತೆಗೆ ಆಶ್ವಾಸನೆ ಕೊಟ್ಟಿದ್ದಾರೆ. ಅದು ಮುಂದುವರಿದೇ ತೀರುತ್ತದೆ.

ಈ ಸರ್ಕಾರ ಜೀವವಿಲ್ಲದ ಸೊಸೈಟಿಗಳಿಗೆ ಜೀವದಾನ ಮಾಡಿದೆ. ಬಡರೈತರಿಗೆ ೭ ಪರ್ಸೆಂಟ್ ಬಡ್ಡಿ ಮನ್ನಾ ಮಾಡಿದೆ. ಅರಣ್ಯಗಳನ್ನು ಉಳಿಸಿ ಬೆಳೆಸಬೇಕೆನ್ನುವ ದೃಷ್ಟಿಯಿಂದ ಸಸಿಗಳನ್ನು ಬೆಳಸಿ ಪುಕ್ಕಟೆಯಾಗಿ ಹಂಚುವ ಕಾರ್ಯಕ್ರಮ ಹಾಕಿಕೊಂಡಿದೆ. ಇದನ್ನೆಲ್ಲ ಯಾರು ಮಾಡಿದ್ದಾರೆ. ಇದನ್ನೆಲ್ಲ ಗಮನಿಸಿ ಜನತಾ ಸರ್ಕಾರಕ್ಕೆ ಶಹಭಾಷ್‌ಗಿರಿ ಕೊಡುವುದನ್ನು ಬಿಟ್ಟು ಸುಮ್ಮನೆ ಟೀಕಿಸುವುದರಲ್ಲಿ ಏನೂ ಸಾಧನೆಯಾಗುವುದಿಲ್ಲ. ರಾಜ್ಯಪಾಲರ ಭಾಷಣಕ್ಕೆ ಬೆಂಬಲವಾಗಿ ತಂದಿರುವ ಈ ನಿರ್ಣಯವನ್ನು ಬೆಂಬಲಿಸಿ ರಾಜ್ಯ ಪಾಲರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಆರ್. ರಾಮಯ್ಯ. (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಕೆಲವು ಮಾತುಗಳನ್ನಾಡಲು ಇಷ್ಟ ಪಡುತ್ತೇನೆ. ಬಹುಶಃ ಅವರ ಭಾಷಣ ಜನರನ್ನು ಸ್ಪಂದಿಸುವ ರೀತಿಯಲ್ಲಿರುತ್ತದೆಂದು ಯೋಚನೆ ಮಾಡಿದ್ದ ಜನತೆಗೆ ಇದು ಸಪ್ಪೆ ಎನಿಸುತ್ತದೆ. ಪ್ರತಿ ವರ್ಷ ಹೇಳಿದ ಇಂತಹ ಮಾತುಗಳನ್ನೇ ಪುನಃ ಬಳಸಿರುವುದರಿಂದ ಇದರಲ್ಲಿ ಹೊರಗಿನವರಿಗೆ ಅಮಿತಾನಂದ ತರುವಂಥಾದ್ದು ಬಹಳ ಕಡಿಮೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ರಾಷ್ಟ್ರದಲ್ಲಿ ಬಹಳಷ್ಟು ಬಡತನ ಇದೆ ಎಂದು ಪಿತಾಮಹ ಗಾಂಧೀಜಿಯವರು ಒಂದು ನಿದರ್ಶನದಲ್ಲಿ ಹೇಳಿದ್ದಾರೆ. ಅದೇನೆಂದರೆ ''ಒಮ್ಮೆ ಗುಜರಾತಿನ ಪ್ರಮುಖ ಬೀದಿಯೊಂದರಲ್ಲಿ ಪ್ರಾತಃ ಕಾಲದ ಸಮಯದಲ್ಲಿ ಗಾಂಧೀಜಿಯವರು ಅಲ್ಲಿ ಹಾದು ಹೋಗುತ್ತಿರಬೇಕಾದರೆ ಅಲ್ಲಿ ಒಂದು ಗುಂಪು ಸೇರಿತ್ತು, ಅದು ಏನೆಂದು ಗಾಂಧೀಜಿ ಹೋಗಿ ನೋಡಲು ಅಲ್ಲಿ ಬಡ ಮಹಿಳೆಯು ತನ್ನ ಗಂಟನ್ನು ಕೈಯಲ್ಲಿ ಹಿಡಿದುಕೊಂಡಿದ್ದಂತಹ ಸಂದರ್ಭದಲ್ಲಿ ಪೋಲೀಸರು ಬಂದು ಇದನ್ನು ಎಲ್ಲಿಂದಲೋ ದೋಚಿಕೊಂಡು ಬಂದಿದ್ದಾಳೆಂದು ಹೇಳಿದರು, ಆಗ ಅದನ್ನು ತೆಗೆದು ನೋಡಿದರೆ ಅದರಲ್ಲಿ ಒಂದು ಜೊತೆ ಉಡುಪು ಇತ್ತು, ಇದು ಯಾರದೆಂದು ಆಕೆಯನ್ನು ಕೇಳಿದಾಗ ನನಗೆ ಇಬ್ಬರು ಮಕ್ಕಳಿದ್ದರು ಇವತ್ತು ಒಬ್ಬ ಸತ್ತು ಹೋಗಿದ್ದಾನೆ, ಅವನು ಹಾಕಿಕೊಳ್ಳುತ್ತಿದ್ದ ಬಟ್ಟೆಯನ್ನು ಬರೀ ಮೈಯಲ್ಲಿರುವ ಇನ್ನೊಬ್ಬ ಮಗನಿಗೆ ತೊಡಿಸುದಕ್ಕೆ ತೆಗೆದುಕೊಂಡು ಹೋಗುತ್ತಿದ್ದೇನೆಂದು ಹೇಳಿದಳು''. ನಮ್ಮ ದೇಶದಲ್ಲಿ ಬಡತನ ಎಷ್ಟು ಆಳವಾಗಿ ಬೇರೂರಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇದನ್ನು ಹೋಗಲಾಡಿಸಲು ನಮ್ಮ ಸರಕಾರಗಳು ಏನಾದರೂ ಪ್ರಯತ್ನ ಮಾಡಿದೆಯೋ ಎಂದು ನೋಡಿದರೆ, ಬರೀ ನಮ್ಮನ್ನು ಹೊಗಳಿ ಕೊಳ್ಳುವುದರಲ್ಲಿ ಶಹಭೇಶ್‌ಗಿರಿ ಪಡೆದುಕೊಳ್ಳುವಲ್ಲಿ ಕಾಲಹರಣ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡುತ್ತಿದ್ದೇವೆಯೇ ಹೊರತು, ಬಡತನವನ್ನು ತೊಲಗಿಸಲು ನಮ್ಮ ಕೈಯಿಂದ ಸಾಧ್ಯವಾಗಿಲ್ಲ. ಕಳೆದ ವರ್ಷ ತೀವ್ರ ಬರಗಾಲವಿರುವ ಬಗ್ಗೆ ಹೇಳಿದರು ಆದರೆ ಈ ವರ್ಷ ಬರದ ಬಗ್ಗೆ ಹೆಚ್ಚಿನ ಮಾತನ್ನು ಹೇಳಿಲ್ಲ. ಕೆಲವು ಜಿಲ್ಲೆಗಳು ಬರದಲ್ಲಿ ತೊಳಲುತ್ತಿವೆಯೆಂದು ಹೇಳಿದ್ದಾರೆ. ಈ ನಾಲ್ಕು ವರ್ಷಗಳ ಸತತ ಬರಗಾಲ ಪರಿಸ್ಥಿತಿಯಲ್ಲಿ ಈ ಸರಕಾರ ಮಾಡಿದಂತಹ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆಯನ್ನು ಎಲ್ಲೂ ವ್ಯಕ್ತಪಡಿಸಿಲ್ಲ ಮತ್ತು ವ್ಯಥೆಯನ್ನು ಎಲ್ಲೂ ವ್ಯಕ್ತಪಡಿಸಿಲ್ಲ ಈ ಸರಕಾರ ಏನು ಮಾಡಿದೆ ಎಂದು ಅವರಿಗೆ ಸ್ಪಷ್ಟವಾಗಿ ಹೇಳಿಲ್ಲವೆಂದು ಇದರಿಂದ ಅರ್ಥ ಮಾಡಿಕೊಳ್ಳಬಹುದು. ನಮ್ಮ ಸರಕಾರ ಗೋಶಾಲೆಗಳನ್ನು ನಿರ್ಮಾಣ ಮಾಡಿದೆ. ಆದರೆ ಅಲ್ಲಿ ದನಗಳು ಸತ್ತು ಹೋಗಿವೆ, ಮೇವಿಗಾಗಿ ರೈತರು ಪಟ್ಟಂತಹ ಸಂಕಷ್ಟವನ್ನು ಎಲ್ಲೂ ಸಹ ಹೇಳಲಿಲ್ಲ. ಇದರ ಜೊತೆಗೆ ಬರಗಾಲ ಇದ್ದಂತಹ ಸಂದರ್ಭದಲ್ಲಿ ಕೊಳವೆ ಬಾವಿಗಳನ್ನು ಎಲ್ಲಾ ಕಡೆಗಳಲ್ಲಿ ಮಾಡಿದ್ದೇವೆಂದು ಹೇಳಿದ್ದಾರೆ. ಹಳ್ಳಿಗಾಡಿನ ಜನರಿಗೆ ಶುದ್ಧವಾದ ನೀರನ್ನು, ಕುಡಿಯುವ ನೀರನ್ನು ಒದಗಿಸಬೇಕೆಂದು ರಾಷ್ಟ್ರೀಯ ನೀತಿಯಿದ್ದು, ಅದನ್ನು ಈಡೇರಿಸುವುದಕ್ಕೋಸ್ಕರ ಕೇಂದ್ರ ಸರಕಾರದವರು ಧಾರಾಳವಾಗಿ ಹಣವನ್ನು ಕೊಟ್ಟಿದ್ದಾರೆ. ಅದರಿಂದಾಗಿ ಈ ಕೆಲಸ ನಡೆದಿದೆ. ಆದರೆ ಇವತ್ತು ಕೊಳವೆ ಬಾವಿಗಳ ಪರಿಸ್ಥಿತಿ ಏನಾಗಿದೆ ಎಂದರೆ, ಅವುಗಳ ರಿಪೇರಿಯನ್ನೂ ಸಹ ಮಾಡದೆ ನಷ್ಟದಲ್ಲಿದ್ದಾರೆ. ಹತ್ತಾರು ಹಳ್ಳಿಗಳಿಂದ ಕೊಳವೆ ಬಾವಿಗಳು ಕೆಟ್ಟಿವೆ ರಿಪೇರಿ ಮಾಡಿ ಎಂದು ಕೇಳುತ್ತಲೇ ಇದ್ದಾರೆ. ಆದರೆ ಅದಕ್ಕೆ ಧಾರಾಳ ವಾಗಿ ಹಣವನ್ನು ಖರ್ಚು ಮಾಡುವುದಕ್ಕೆ ಇವರ ಕೈಯಲ್ಲಿ ಆಗಿಲ್ಲ. ಆರ್ಥಿಕ ಮುಗ್ಗಟ್ಟು ಇರುವುದ ಕ್ಕೋಸ್ಕರ ಈ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮಾನ್ಯ ಕೊಟ್ರಪ್ಪನವರು ಭಾಷಣ ಮಾಡುತ್ತಾ ಹೇಳಿದರು. ನಾವು ತತ್ವದ ಮೇಲೆ ನಡೆಯು ತಕ್ಕಂತಹವರು ಶ್ರೀಮತಿ ಇಂದಿರಾಗಾಂಧಿಯವರು ಕೋರ್ಟ್ ಆದೇಶವನ್ನು ಉಲ್ಲಂಘನೆ ಮಾಡಿದರು ಎಂದು ಹೇಳಿದರು. ನಾನು ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ಬಾಟ್ಲಿಂಗ್ ಹಗರಣದ ಬಗ್ಗೆ ಬೆಳಕನ್ನು ಚೆಲ್ಲಿದಾಗ ಹೇಳಿದರು ನಮ್ಮನ್ನು ಎಲ್ಲೂ ಭ್ರಷ್ಟರೆಂದು ಹೇಳಿಲ್ಲ ಎಂದು, ನಂತರ ಯಾವುದೋ ನೆಪಕ್ಕೋಸ್ಕರ ರಾಜೀನಾಮೆ ಕೊಟ್ಟು ಮತ್ತೆ ಅಧಿಕಾರಕ್ಕೆ ಬಂದಿದ್ದನ್ನು ಇವತ್ತು ತಮ್ಮ ನೆನಪಿಗೆ ತಂದುಕೊಡುತ್ತಿದ್ದೇನೆ. ಈ ಸಮಾಜದಲ್ಲಿ ಮತೀಯ ಗಲಭೆಗಳು ಹೆಚ್ಚಾಗಿವೆ. ಈ ಶೃಂಗ ಸಮಾಜದಲ್ಲಿ ಜನರ ಭಾವನೆಗಳನ್ನು ಅರ್ಥ ಮಾಡಿಕೊಳ್ಳತಕ್ಕಂತಹ ಸರಕಾರ ಮತ್ತು ಅದಕ್ಕೆ ಸ್ಪಂದಿಸುವ ಸರಕಾರ ಯಾವಾಗ ತನ್ನ ಆಳ್ವಿಕೆಯ ಚುಕ್ಕಾಣಿಯನ್ನು ಸರಿಯಾಗ ಹಿಡಿಯುವುದಿಲ್ಲ ಆಗ ಇಂತಹ ಸಂದರ್ಭ ಉದ್ಭವಿಸುತ್ತದೆ ಮತ್ತು ಮತೀಯ ಪ್ರಚೋದನೆ, ಭಾಷಣಗಳು ಮುಂತಾದುವೂ ಕೂಡ ಈ ಗೊಂದಲಕ್ಕೆ ಕಾರಣವಾಗುತ್ತದೆ. ಇಂಟೆಲಿಜೆನ್ಸ್ ಬ್ಯೂರೋ ಮುಂತಾದುವು ಕೆಲಸ ಮಾಡುತ್ತಿದೆ. ಅಲ್ಲಿ ಕೆಲಸಮಾಡತಕ್ಕಂತಹವರು ಸರಿಯಾದ ಮಾಹಿತಿಯನ್ನು ಸಂಗ್ರಹಿಸಿ ಸರಕಾರದ ಗಮನಕ್ಕೆ ತಂದರೆ ಬೆಳೆಯುವ ಪೈರನ್ನು ಮೊಳಕೆಯಲ್ಲೇ ಕಿತ್ತು ಹಾಕಬಹುದು ಆದರೆ ಪೋಲೀಸ್ ಇಲಾಖೆಯಲ್ಲಿ ಇದನ್ನು ಮಾಡುತ್ತಿಲ್ಲ, ಮಾಡುವುದಕ್ಕೆ ಸಾಧ್ಯವೂ ಇಲ್ಲ. ಇನ್ನು ಜಿಲ್ಲಾ ಪರಿಷತ್ ಚುನಾವಣೆ ಮತ್ತು ಮಂಡಲ ಪಂಚಾಯತಿ ಚುನಾವಣೆಗಳನ್ನು ಮಾಡಿ ಐತಿಹಾಸಿಕ ದಾಖಲೆಯನ್ನು ನಿರ್ಮಿಸಿ ಅಧಿಕಾರ ವಿಕೇಂದ್ರೀಕರಣವನ್ನು ಮಾಡಿದ್ದೇವೆಂದು ಒತ್ತಿ ಹೇಳುತ್ತಿದ್ದಾರೆ. ಆದರೆ ಅವುಗಳಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದಾರೆಯೇ ವಿನಃ ಯಾವುದೇ ಹೆಚ್ಚುಗಾರಿಕೆ ಏನೂ ಇಲ್ಲ, ಐತಿಹಾಸಿಕ ದಾಖಲೆಯನ್ನು ನಿರ್ಮಾಣ ಮಾಡುವುದು ಯಾವಾಗ ಎಂದರೆ ಅದರ ಫಲಿತದ ಸವಿಯನ್ನು ಅನುಭವಿಸಿದಾಗ ಮಾತ್ರ ಐತಿಹಾಸಿಕ ದಾಖಲೆ ಎಂಬ ಮಾತನ್ನು ಉಪಯೋಗಿಸಬೇಕೇ ವಿನಃ ಪ್ರಾರಂಭದಲ್ಲೇ ಐತಿಹಾಸಿಕವೆಂದು ಹೇಳತಕ್ಕಂತಹ ಮಾತು ಅರ್ಥ ಶೂನ್ಯವೆಂದು ಹೇಳ ಬೇಕಾಗುತ್ತದೆ.

೩.೩೦ ಪಿ. ಎಂ.

ಇವತ್ತು ರಾಜ್ಯದ ಬೊಕ್ಕಸಕ್ಕೆ ಸಂಕಟದ ಪರಿಸ್ಥಿತಿ ಇದೆ. ಬಜೆಟ್‌ನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಹಣವನ್ನು ಕೊಡತಕ್ಕಂಥದ್ದರ ಮೇಲೆ ಇವರ ಅಧಿಕಾರ ವಿಕೇಂದ್ರೀಕರಣ ಯಾವ ರೀತಿ ಅವಲಂಬಿಸುತ್ತದೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ. ಬೇರೆ ಬೇರೆ ರಾಜ್ಯಗಳಲ್ಲೂ ಇಂಥದೇ ಪರಿಸ್ಥಿತಿ ಇದೆ. ಅಲ್ಲಿಯೂ ಅಧಿಕಾರ ವಿಕೇಂದ್ರೀಕರಣ ಸರಿಯಾಗಿ ನಡೆಯುತ್ತಿಲ್ಲ ಎಂಬ ಮಾತನ್ನು ಹೇಳಬಯಸುತ್ತೇನೆ. ಇನ್ನು ೨೦ ಅಂಶಗಳ ಆರ್ಥಿಕ ಕಾರ್ಯಕ್ರಮದಲ್ಲಿ ಬಹುಶಃ ಇವರು ಹೇಳುವಂಥ ಎಲ್ಲಾ ಕಾರ್ಯಕ್ರಮಗಳು ಅಲ್ಲಿವೆ. ಹೊಸದಾಗಿ ಇವರು ಏನು ಮಾಡಿದ್ದಾರೆ, ತಾಳಿ ಕೊಡತಕ್ಕಂಥದ್ದು, ಬಟ್ಟೆ, ಸಮವಸ್ತ್ರ ಕೊಡ ತಕ್ಕಂಥದ್ದು ಪುಸ್ತಕ ಕೊಡತಕ್ಕತದ್ದು ಇಂಥ ಕೆಲವು ಕಾರ್ಯಕ್ರಮಗಳನ್ನು ಬಿಟ್ಟರೆ ಜೀವನದ ಕಷ್ಟಗಳನ್ನು ದೂರ ಮಾಡುವಂಥ ಕಾರ್ಯಕ್ರಮಗಳು ಇಲ್ಲ. ಬಡ ಕುಟುಂಬಗಳಿಗೆ ಹಸಿರು ಕಾರ್ಡು ಕೊಡುತ್ತಿದ್ದೇವೆ ಎಂದುಹೇಳಿದ್ದಾರೆ. ತಲಾ ೨ ಕೆ.ಜಿ. ರಾಗಿ, ೭ ಕೆ. ಜಿ. ಅಕ್ಕಿ, ಗೋಧಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಬಡ ಕುಟುಂಬಗಳು ಎಷ್ಟು

ಲಕ್ಷ ಎಂದು ಗುರುತಿಸಿದ್ದಾರೆಯೇ ? ೩೧ ಲಕ್ಷ ಬಡ ಕುಟುಂಬಗಳಿಗೆ ಉಪಯೋಗ ಮಾಡಿದ್ದೇವೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಹಾಗದರೆ ನಮ್ಮ ರಾಜ್ಯದಲ್ಲಿ ಕೇವಲ ೩೮ ಲಕ್ಷ ಬಡ ಕುಟುಂಬಗಳು ಇವೆಯೇ ? ಇಷ್ಟೇ ಬಡ ಕುಟುಂಬಗಳು ಇವೆ ಎಂದು ಗುರುತಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣವೆ ನೆಂದರೆ, ಈ ರೀತಿ ಗುರುತಿಸುವಂಥ ಕಾರ್ಯಕ್ರಮದಲ್ಲಿ ಅನೇಕ ನ್ಯೂನತೆಗಳು ಇವೆ, ಅವೆಲ್ಲವನ್ನು ನಾವು ನೋಡುತ್ತಿದ್ದೇವೆ ಮತ್ತು ಎದುರಿಸುತ್ತಿದ್ದೇವೆ. ದೊಡ್ಡ ದೊಡ್ಡ ಜಮೀನುದಾರರು ಖಾತೆದಾರರ ಆಗಿಲ್ಲದೇ ಇದ್ದರೂ ಬೇರೆ ಒಬ್ಬರ ಹೆಸರಿನಲ್ಲಿ ಖಾತೆ ಇದ್ದು, ಅವರ ಹೆಸರಿನಲ್ಲಿ ಕಾರ್ಡುಗಳನ್ನು ತಂದಿರು ತಕ್ಕಂಥದ್ದು ನಾವು ನೋಡಿದ್ದೇವೆ. ಉದಾಹರಣೆಗೆ ಹಿರಿಯೂರು ತಾಲ್ಲೂಕಿನ ಹತ್ತಿರ ಎವಿಕೊಟ್ಟಿ ಎಂಬ ಒಂದು ಹಳ್ಳಿ ಇದೆ. ಅಲ್ಲಿ ಸಿದ್ಧಯ್ಯ ಎಂಬುವವರು ೩೬ ಎಕರೆ ಭೂಮಿಯನ್ನು ಇಟ್ಟು ಕೊಂಡಿದ್ದಾನೆ. ಆತ ಹಸಿರು ಕಾರ್ಡುಗಳನ್ನು ಪಡೆದಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಖಾತೆ ದಾರರು ಆಗಿಲ್ಲದೇ ಇದ್ದರೂ ಬಡ ಕುಟುಂಬದವರು ಎಂದು ತಿಳಿದುಕೊಂಡು ಅವರಿಗೆ ಹಸಿರು ಕಾರ್ಡನ್ನು ಕೊಟ್ಟ ನಿದರ್ಶನಗಳನ್ನು ನೋಡಿದ್ದೇವೆ.. ಮತ್ತು ಜೊತೆಗೆ ಪಕ್ಷದ ಕಾರ್ಯಕರ್ತರುಗಳು ಏನು ಇದ್ದಾರೆ, ಅವರು ಹೇಳುವಂಥವರಿಗೆ ಈ ಕಾರ್ಡಗಳನ್ನು ಕೊಟ್ಟಿರತಕ್ಕಂಥ ನಿದರ್ಶನಗಳನ್ನು ನೋಡಬಹುದು. ಇದರ ಬಗ್ಗೆ ಬೇಕಾದಷ್ಟು ವಿಷಯಗಳನ್ನು ಭಾಷಣಕಾರರು ಹೇಳಿದ್ದಾರೆ, ಆದ್ದರಿಂದ ಇದನ್ನು ಮತ್ತೆ ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ನ್ಯಾಯಬೆಲೆ ಅಂಗಡಿಗಳ ಪರಿಸ್ಥಿತಿ ಏನಾಗಿದೆ ಎಂದರೆ ಎರಡು ತಿಂಗಳಿಗೆ ಒಮ್ಮೆಯಾದರೂ ಅವನು ಅನ್ಯಾಯವಾಗಿ ಕೊಡಬೇಕಾದಂಥ ಅಕ್ಕಿಯಾಗಲೀ, ಗೋಧಿಯಾಗಲೀ ಕೊಡುತ್ತಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಬಸವಣ್ಣಪ್ಪನವರು ಇಲ್ಲೇ ಇದ್ದಾರೆ. ೩೫ ಎಕರೆ ಜಮೀನು ಉಳ್ಳಂಥವರು ಹಸಿರು ಕಾರ್ಡ್ ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳಿದರು. ೩ವು ಅದನ್ನು ಏನು ಬರೆದುಕೊಳ್ಳಲಿಲ್ಲವಲ್ಲ ?

ಅಧ್ಯಕ್ಷರು.—ಬರೆದುಕೊಂಡಿದ್ದಾರೆ.

ಶ್ರೀ ಆರ್. ರಾಮಯ್ಯ.—ನ್ಯಾಯಬೆಲೆ ಅಂಗಡಿಯಲ್ಲಿ ಎರಡು ತಿಂಗಳ ದಾಸ್ತಾನನ್ನು ಬಹುಶಃ ಕೊಡದೇ ಇರತಕ್ಕಂಥದ್ದು ಇದೆ. ಕೆಂಪುಕಾರ್ಡ್, ಹಸಿರು ಕಾರ್ಡ್ ಪಡೆದಿರುವವರಿಗೆ ಒಟ್ಟಿಗೇ ಒಂದೇ ಬೆಲೆಯಲ್ಲಿ ಕೊಡುತ್ತಿದ್ದಾರೆ. ಎಲ್ಲಾ ಅಕ್ಕಿಯನ್ನು ೨-೮೦ ಪೈಸೆಗೆ ಮಾರಿದಂಥ ನಿದರ್ಶಗಳನ್ನು ಬೇಕಾದಷ್ಟು ದೂರುಗಳನ್ನು ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದರೂ ಸಹ ಇದುವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ನಿವೇಶನಗಳನ್ನು ಮಂಜೂರು ಮಾಡುವ ವಿಷಯದಲ್ಲಿ ಸಾಕಷ್ಟು ಮಾತನ್ನು ಹೇಳಿದ್ದಾರೆ ಬಹುಶಃ ಬಡ ಜನರು ಏನು ನಿರೀಕ್ಷಣೆ ಮಾಡಿದ್ದರೋ, ಆ ನಿರೀಕ್ಷಣೆ ಇವತ್ತು ಅವರ ಪಾಲಿಗೆ ಸುಳ್ಳಾಗಿದೆ. ಪ್ರತಿ ವರ್ಷ ಕಾಂಗ್ರೆಸ್ ಸರ್ಕಾರ ಇರತಕ್ಕಂಥ ಸಂದರ್ಭದಲ್ಲಿ ಪ್ರತಿ ತಾಲ್ಲೂಕಿಗೂ ಸುಮಾರು ೮೦೦-೧೦೦೦ ಮನೆಗಳನ್ನು ಕೊಡುತ್ತಿದ್ದರು. ಇದರಿಂದ ಬಡವರಿಗೆ ಪ್ರಯೋಜನವಾಗುತ್ತಿತ್ತು. ಆದರೆ ಇವರು ಒಂದೊಂದು ತಾಲ್ಲೂಕಿಗೆ ೨೫೦ ಮನೆಗಳನ್ನು ಕೊಡುತ್ತಿದ್ದಾರೆ, ಇದರಿಂದ ಇವತ್ತು ಬಡವರು ಯಾವ ರೀತಿ ಮನೆಗಳನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ನಾವುಗಳು ಯೋಚಿಸಬೇಕಾಗಿದೆ. ಇನ್ನೂ ನೀರಾವರಿ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಬಹುಶಃ ಈ ಸರ್ಕಾರ ೧೯೮೩ ರಲ್ಲಿ ಅಧಿಕಾರ ವಹಿಸಿಕೊಂಡಿದ್ದು. ಈ ಸರ್ಕಾರ ಅಲ್ಲಿಂದ ಯಾವ ಯಾವ ಹೊಸ ಯೋಜನೆಗಳನ್ನು ತಂದಿಲ್ಲ. ಬಹುಶಃ ಯಾವ ಯೋಜನೆಗಳನ್ನು ಜಾರಿಗೆ ತರಬೇಕಾದರೆ ನಮಗೆ ಕೇಂದ್ರ ಸರ್ಕಾರದಿಂದ ಅನುಮತಿ ಸಿಗುತ್ತಿಲ್ಲ ಎಂಬ ಮಾತನ್ನು ಹೇಳುತ್ತಿದ್ದಾರೆ. ನೀರಾವರಿ ಯೋಜನೆಯನ್ನು ಮಾಡದೇ ರಾಜ್ಯವು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಸಮಗ್ರವಾದ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳುತ್ತಾ ಬಂದಿದ್ದೀರಿ. ಯಾವ ವ್ಯವಸ್ಥೆಯನ್ನು ಮಾಡುತ್ತಾರೋ ಎಂಬುದನ್ನು ಕಾದು ನೋಡಬೇಕಾಗಿದೆ. ಇನ್ನು ಗಂಗಕಲ್ಯಾಣ ಕಾರ್ಯಕ್ರಮದಿಂದಾಗಲೀ, ಯಾವ ಕಾರ್ಯಕ್ರಮದಿಂದಾಗಲೀ ಬಡ ಜನರಿಗೆ ವ್ಯವಸ್ಥಿತವಾಗಿ ಸಿಗುತ್ತಿಲ್ಲಎಂಬ ಮಾತನ್ನು ಹೇಳುತ್ತೇನೆ. ಇನ್ನು ನಿವೇಶನ ಹಾಗೂ ಮನೆಗಳ ನಿರ್ಮಾಣದ ಬಗ್ಗೆ ಬಹಳಷ್ಟು ಜನ ಮಾತನಾಡಿದ್ದಾರೆ. ಇದರ ಬಗ್ಗೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಬಹುಶಃ ಏನು ಬಡ ಜನರು ನಿರೀಕ್ಷಣೆ ಮಾಡಿದ್ದರೋ. ಇವೊತ್ತು ಅವರ ಪಾಲಿಗೆ ಆ ನಿರೀಕ್ಷಣೆ ಸುಳ್ಳು ಆಗಿದೆ. ನಮ್ಮ ಕಾಂಗ್ರೆಸ್ ಸರ್ಕಾರ ಇದ್ದ ಸಂದರ್ಭದಲ್ಲಿ ಪ್ರತಿ ವರ್ಷ ಪ್ರತಿಯೊಂದು ತಾಲ್ಲೂಕಿಗೂ ಸುಮಾರು ಎರಡು ಸಾವಿರ ಮನೆಗಳು ಬರುತ್ತಿತ್ತು. ಇವೊತ್ತು ಕೇವಲ ೨೫೦ ಮನೆಗಳು ಬಂದರೆ ಅದೇ ಹೆಚ್ಚು. ಇಂತಹ

ಪರಿಸ್ಥಿತಿಯಲ್ಲಿ ಬಡವರು ಯಾವ ರೀತಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು. ಎನ್ನತಕ್ಕ ಕಲ್ಪನೆಯನ್ನು ಈ ಖಾತೆಯನ್ನು ಹೊತ್ತ ಸಚಿವರು ಗಮನಕ್ಕೆ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ರಾಮಯ್ಯನವರೇ, ಶೀಘ್ರವಾಗಿ ಮುಗಿಸಿ, ಎಲ್ಲರಿಗೂ ಅವಕಾಶ ಸಿಕ್ಕಬೇಕು. ಇನ್ನೂ ೧೮ ಜನ ಮಾತನಾಡುವುದು ಇದೆ.

ಶ್ರೀ ಆರ್. ರಾಮಯ್ಯ.—ಇನ್ನು ಕೇವಲ ಹತ್ತು ನಿಮಿಷ ಕೊಡಿ, ಮುಗಿಸುತ್ತೇನೆ. ನೀರಾವರಿ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಸರ್ಕಾರ ೧೯೮೩ರಲ್ಲಿ ಅಧಿಕಾರ ವಹಿಸಿಕೊಂಡಿತು. ಆಕಸ್ಮಿಕಕ್ಕೆ ಸಿಕ್ಕ ಅಧಿಕಾರವನ್ನು ಚಲಾಯಿಸತಕ್ಕ ಸಂದರ್ಭದಲ್ಲಿ ಸರ್ಕಾರ ತನ್ನ ವ್ಯಾಪ್ತಿಯಲ್ಲಿ ಅನೇಕ ಸಣ್ಣ ಪುಟ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ತೆಲುಗು ಗಂಗಾ ಯೋಜನೆಗೆ ಕೇಂದ್ರದ ಅನುಮತಿ ಸಿಗದೇ ಹೋದರೂ ತಮ್ಮ ರಾಜ್ಯದ ಹಿತದೃಷ್ಟಿಯನ್ನು ಇಟ್ಟುಕೊಂಡು ಅನುಷ್ಠಾನಕ್ಕೆ ತರುತ್ತೇವೆಂಬ ಸಂಕಲ್ಪವನ್ನು ಇಟ್ಟುಕೊಂಡಿರುವ ಆಂಧ್ರದ ಮುಖ್ಯಮಂತ್ರಿಗಳಿಗೆ ನಮ್ಮ ಮುಖ್ಯಮಂತ್ರಿಯವರು ರಕ್ಷಣೆ ಕೊಡುತ್ತಿದ್ದಾರೆಂಬ ಆರೋಪ ಇದೆ. ಬಹುಶಃ ಇವರು ಮಾಡುತ್ತಿರುವ ಖರ್ಚು ಮತ್ತು ಗಾತ್ರ ನೋಡಿದಾಗ ದೊಡ್ಡ ದೊಡ್ಡ ನೀರಾವರಿ ಕಾರ್ಯಕ್ರಮಗಳನ್ನು ಪೂರೈಸಲು ತಲತಲಾಂತರಗಳು ಬೇಕಾಗುತ್ತದೆ ಎಂದು ಹೇಳಬೇಕಾಗುತ್ತದೆ. ಸರ್ಕಾರ ಒಂದು ನಿಗದಿತ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಬಹಳಷ್ಟು ಹಣವನ್ನು ಕೇಂದ್ರೀಕರಿಸಿ ಇದಕ್ಕಾಗಿ ಮುಂದಾಗಿ, ಖರ್ಚು ಮಾಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಮುಗಿಸಿ, ಮುಗಿಸಿ.

ಶ್ರೀ ಆರ್. ರಾಮಯ್ಯ.—ಕೊನೆಯದಾಗಿ, ಒಂದೆರಡು ಮಾತುಗಳನ್ನು ಹೇಳುತ್ತೇನೆ. ಭೂಸುಧಾರಣೆಯನ್ನು ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗ ಬಹಳ ಪರಿಣಾಮಕಾರಿಯಾದ ರೀತಿಯಲ್ಲಿ ನಾವು ಜಾರಿಗೊಳಿಸಿದ್ದೆವು. ಈ ಒಂದು ಪರಿಸ್ಥಿತಿಯಲ್ಲಿ ಅವರಿಗೆ ಸಾಕಷ್ಟು ಕಿರುಕುಳ ಕೊಡುವ ಪ್ರಯತ್ನ ಆಗಿದೆ ಹಾಗೂ ಅವರುಗಳು ಮತ್ತೆ ಕೋರ್ಟಿಗೆ ಹೋಗತಕ್ಕ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ಒಂದು ಪುನರ್ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕು. ಉಳುವವನೇ ಭೂಮಿಯ ಒಡೆಯನು ಎನ್ನುವ ಮಾತನ್ನು ಸಾರ್ಥಕವಾಗಿ ಮಾಡಬೇಕಾಗಿದ್ದರೆ ಈ ಭೂಮಿಯು ಉಳುವವನಿಗೇ ಸೇರತಕ್ಕ ವ್ಯವಸ್ಥೆಯನ್ನು ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಬಗ್ಗೆ ಅವರ ಪಕ್ಷದಲ್ಲೇ ಒಂದು ದೊಡ್ಡ ಗೊಂದಲ ಆಗಬಹುದು ಎಂಬ ಕಾರಣದಿಂದ ದೊಡ್ಡ ರಾಜಕೀಯ ತಂತ್ರ ಮಾಡಿ ಸುಮಾರು ಶೇಕಡ ೯೫ ಜನರು ಎಲ್ಲರೂ ಬ್ಯಾಕ್‌ವರ್ಡ್ ಎಂದು ಪರಿಗಣಿಸಿ ಎಲ್ಲರಿಗೂ ಸೌಲಭ್ಯಗಳು ಸಿಗುವ ರೀತಿಯಲ್ಲಿ ಆಜ್ಞೆ ಮಾಡಿರುತ್ತಾರೆ.

ಇನ್ನು ವಿದ್ಯುತ್ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ಕೇಂದ್ರ ಸರ್ಕಾರ ಸಾಕಷ್ಟು ಅನುಮತಿ ಕೊಡದೇ ಇರುವುದರಿಂದ ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್ತನ್ನು ತಯಾರು ಮಾಡಲು ಆಗುವುದಿಲ್ಲ ಎಂದು ಹೇಳಿದ್ದಾರೆ. ಸಾಕಷ್ಟು ಪ್ರಮಾಣದಲ್ಲಿ ನೀರಾವರಿ ಯೋಜನೆಗಳನ್ನು ಮಾಡಿ ಮುಗಿಸಿದ್ದರೆ ಅನೇಕ ಮೆಗಾವ್ಯಾಟ್ ವಿದ್ಯುತ್ತನ್ನು ಪಡೆಯಬಹುದಾಗಿತ್ತು. ಅದನ್ನು ಮಾಡದೆ ಆ ಕಡೆಗೆ ತೋರಿಸುವುದು ಸರಿಯಲ್ಲ.

ಇನ್ನು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಹಿಂದೆ ಬ್ರಿಟಿಷರ ಕಾಲದಲ್ಲೂ ಸಹ, ರಾಷ್ಟ್ರವನ್ನು ಆಳತಕ್ಕಂಥ ಸಂದರ್ಭದಲ್ಲಿ ಕನ್ನಡ ಭಾಷೆಯಲ್ಲಿ ಆಡಳಿತ ನಡೆಯುತ್ತಿತ್ತು. ಹೈದರಾಬಾದ್, ಟಿಪ್ಪುಸುಲ್ತಾನ್ ಕಾಲದಲ್ಲೂ ಸಹ ಕನ್ನಡ ಭಾಷೆಯನ್ನು ವ್ಯವಸ್ಥಿತವಾಗಿ ಆಡಳಿತ ಭಾಷೆಯನ್ನಾಗಿ ಮಾಡಿದ್ದರು. ಈ ಒಂದು ಕೂಗನ್ನು ನಾವು ಈ ರಾಜ್ಯದಲ್ಲೂ ತರಬಹುದು. ದೊಡ್ಡ ದೊಡ್ಡ ಮಂತ್ರಿ ಮಹೋದಯರು ಇಂಗ್ಲೀಷ್ ಭಾಷೆಯ ವ್ಯಾಮೋಹದಲ್ಲಿ ಬಿದ್ದು ತಮ್ಮ ಮಕ್ಕಳನ್ನು ಕಾನ್ವೆಂಟಿಗೆ ಕಳುಹಿಸತಕ್ಕ ಪದ್ಧತಿ ಸರಿಯಾದುದಲ್ಲವೆಂದು ಹೇಳುತ್ತೇನೆ.

ಕೊನೆಯದಾಗಿ, ಸರ್ಕಾರಿ ನೌಕರರಿಗೆ ಹೆಚ್ಚಿನ ವೇತನ ಕೊಡುವ ಬಗ್ಗೆ ನಾಲ್ಕನೇ ವೇತನ ಆಯೋಗ ಈಗಾಗಲೇ ತನ್ನ ವರದಿ ಕೊಟ್ಟಿದೆ.

ಅಧ್ಯಕ್ಷರು.—ಎಲ್ಲ ಸದಸ್ಯರಿಗೂ ಅವಕಾಶ ಮಾಡಿಕೊಡಲೇಬೇಕಾಗುತ್ತದೆ. ತಾವು ದಯವಿಟ್ಟು ಮುಗಿಸಿ. ವೇಳೆಗೆ ಅನುಗುಣವಾಗಿ ಎಲ್ಲರೂ ನಡೆದುಕೊಂಡರೆ ಒಳ್ಳೆಯದು.

ಶ್ರೀ ಆರ್. ರಾಮಯ್ಯ.—ಸರ್ಕಾರ ಈ ವೇತನ ಆಯೋಗದ ಶಿಫಾರಸ್ಸುಗಳಿಗೆ ಒಪ್ಪಿಗೆ ಕೊಟ್ಟಿರುವ ಬಗ್ಗೆ ಒಂದು ಮಾತು ಹೇಳುತ್ತೇನೆ. ಬರಗಾಲದಿಂದ ರಾಜ್ಯ ತತ್ತರಿಸುವಾಗ ಸರ್ಕಾರ ನೌಕರರ ವೇತನದ ಬಗ್ಗೆ ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಸರಿಯಲ್ಲ ಎಂಬುದನ್ನು ನೋಡಬೇಕು. ರಾಜ್ಯದ ಆದಾಯದಲ್ಲಿ ಶೇಕಡಾ ೪೫ರಷ್ಟು ಹಣ ಇವರಿಗೆ ಖರ್ಚು ಆಗುತ್ತದೆ. ಇವೊತ್ತು ಯಾವ ಬಡ ಜನತೆಯ ಬಗ್ಗೆ ಕರುಣೆ ತೋರಿ ಸರ್ಕಾರ ಸಮಗ್ರ ಬಡ ಜನರ ಹಿತವನ್ನು ಕಾಪಾಡತಕ್ಕ ಒಂದು ದೃಷ್ಟಿಯನ್ನು ಇಟ್ಟುಕೊಂಡು ಅಧಿಕಾರ ನಿರ್ವಹಿಸಬೇಕೆಂದು ಹೇಳುತ್ತಾ, ನನಗೆ ಇಷ್ಟು ಮಾತನಾಡಲು ಸಮಯಾವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಉಪ್ಪಿನ್‌ರವರೇ, ೧೦ ನಿಮಿಷದಲ್ಲಿ ಮುಗಿಸಿ. ಬಹಳ ಸಂಕ್ಷಿಪ್ತವಾಗಿ ಮುಖ್ಯವಾದುದನ್ನು ಮಾತ್ರ ಹೇಳಿ.

† ಶ್ರೀ ಬಿ.ಎ. ಉಪ್ಪಿನ್ (ಕುಂದಗೋಳ್).—ಸನ್ಮಾನ್ಯ ಅಧ್ಯಕ್ಷರೇ, ಕಳೆದ ತಿಂಗಳ ೨೯ರಂದು ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕೆ ಕೃತಜ್ಞತಾ ಪೂರ್ವಕ ವಂದನೆಯನ್ನು ಸಲ್ಲಿಸುವ ನಿರ್ಣಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಮಾನ್ಯ ರಾಜ್ಯಪಾಲರು ತಮ್ಮ ಸುಮಾರು ೧೧ ಪುಟಗಳ ದೀರ್ಘ ಭಾಷಣವನ್ನು ಇಂಗ್ಲೀಷ್ ಭಾಷೆಯಲ್ಲಿ ಮಾಡಿದರೂ, ಈ ಭಾಷಣದ ಪ್ರಾರಂಭದಲ್ಲಿ ಹಾಗೂ ಕೊನೆಯಲ್ಲಿ ಸರಳ ಹಾಗೂ ನಿರರ್ಗಳವಾಗಿ ಕನ್ನಡದಲ್ಲಿಯೇ ಮಾತನಾಡಿದುದನ್ನು ನೋಡಿದರೆ ಕರ್ನಾಟಕದ ಜನತಾ ಸರ್ಕಾರ ಈ ರಾಜ್ಯದಲ್ಲಿ ನಾಡು ಭಾಷೆಯಾದ, ಆಡು ಭಾಷೆಯಾದ ಕನ್ನಡವನ್ನು ವ್ಯವಸ್ಥಿತ ರೀತಿಯಲ್ಲಿ ಹಂತ ಹಂತವಾಗಿ ಎಲ್ಲಾ ಇಲಾಖೆಗಳಲ್ಲೂ ಜಾರಿತರತಕ್ಕಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ ಎನ್ನತಕ್ಕ ಮಾತು ಈ ಸಂದರ್ಭದಲ್ಲಿ ವ್ಯಕ್ತವಾಗುತ್ತದೆ. ಕನ್ನಡವನ್ನೇ ಅರಿಯದ ಕನ್ನಡವನ್ನೇ ಓದಲುಬಾರದ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇಷ್ಟೊಂದು ಸರಳವಾಗಿ ಮಾತನಾಡಿದ ಕನ್ನಡದ ನಿಲುವನ್ನು ನಾವು ಹೆಚ್ಚು ಹೆಚ್ಚಾಗಿ ಮೆಚ್ಚಬೇಕಾಗಿದೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ರಾಜ್ಯಪಾಲರು ಎಲ್ಲವನ್ನೂ ಕನ್ನಡದಲ್ಲಿ ಎಲ್ಲಿ ಓದಿದರು, ಮೊದಲನೇದು ಮತ್ತು ಕೊನೇದನ್ನು ಓದಿದರು ಅಷ್ಟೆ.

ಶ್ರೀ ಬಿ. ಎ. ಉಪ್ಪಿನ್.—ಅವರು ಒಂದು ವಾಕ್ಯವನ್ನೇ ಹೇಳಲಿ. ಅವರು ಒಂದು ಪ್ಯಾರವನ್ನೇ ಹೇಳಲಿ. ಅವರು ಕನ್ನಡದಲ್ಲಿ ಭಾಷಣ ಮಾಡಿರುವಾಗ ಮಾನ್ಯ ಸದಸ್ಯರಾದ ಬೂಸಾ ಬಸವಲಿಂಗಪ್ಪನವರು ಕನ್ನಡ ಬೇಡ ಎಂದು ಇಂಗ್ಲಿಸ್‌ನಲ್ಲಿ ಮಾತನಾಡುವುದು ಸರಿಯೇ. ಇಂತಹ ಸದಸ್ಯರ ಮಾತುಗಳನ್ನು ಕೇಳಿದರೆ ನಮ್ಮ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರು ಈ ಶಾಸಕರು ಕನ್ನಡವನ್ನು ಅನುಷ್ಠಾನಕ್ಕೆ ತರಲಿಕ್ಕೆ ವಿಶೇಷವಾದ ಆಸಕ್ತಿ ವಹಿಸಿಲ್ಲ ಎಂದು ಹೇಳಿರುವುದು ನನಗೆ ನೆನಪಿಗೆ ಬರುತ್ತದೆ. ಕನ್ನಡವನ್ನು ಅನುಷ್ಠಾನಕ್ಕೆ ತರಲಿಕ್ಕೆ ಸಹಾಯಕವಾಗುವಂತೆ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರು. ಅದನ್ನು ಪಾಲನೆಮಾಡಿಕೊಂಡು ಬರಲು ಪ್ರಯತ್ನ ಪಡುತ್ತಿದ್ದಾರೆ. ಆದರೆ ಕರ್ನಾಟಕ ರಾಜ್ಯದ ೪ ಕೋಟಿ ಕನ್ನಡಿಗರೂ ಸಹ ಸಹಕರಿಸಿದರೆ ಮಾತ್ರ ಇದು ಸಾಧನೆ ಆಗುತ್ತದೇ ವಿನಾ ಇಲ್ಲದಿದ್ದರೆ ಸಾಧನೆಯಾಗುವುದಿಲ್ಲ. ಅದೇನೇ ಇರಲಿ ಮಾನ್ಯ ರಾಜ್ಯಪಾಲರ ಭಾಷಣ ಏನು ಇದೆ ಆ ಭಾಷಣದ ತಿರುಳಿನ ಬಗ್ಗೆ ಹೇಳುವುದಾದರೆ. ೧೯೮೩ ರಲ್ಲಿ ಮೊದಲು ರಾಜ್ಯಪಾಲರು ಏನು ಭಾಷಣ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಿದ್ದಾರೆ ಅನ್ನುವುದನ್ನೂ ನೋಡಿ. ಮೊದಲು ಇದ್ದಂಥಾ ಸರ್ಕಾರಕ್ಕೆ ನಮ್ಮ ಕರ್ನಾಟಕದ ಜನತೆ ದೂರು ಸರಿದಿದ್ದರು. ಬಹಳ ನೊಂದಿದ್ದರು. ಆಗ ಆಡಳಿತ ಕೆಟ್ಟಿತು. ೧೯೮೩ ರಲ್ಲಿ ನಮ್ಮ ಜನತಾ ಸರ್ಕಾರ ಬಂದಮೇಲೆ ಮೊದಲು ಇದ್ದಂಥಾ ಸರ್ಕಾರ ತಂತಿಬೇಲಿಯನ್ನು ಏನು ಹಾಕಿಸಿತ್ತು ಅದನ್ನು ತೆಗೆಸಿದರು. ಆಮೇಲೆ ನಮ್ಮ ಜನತಾ ಸರ್ಕಾರ ಜನತೆಯ ಅವಶ್ಯಕತೆಗಳನ್ನು ಅರಿತು ಕೊಂಡು ವಿವಿಧ ಯೋಜನೆಗಳನ್ನು ಹಾಕಿದರು.

ಶ್ರೀ ರ್ಯ. ಭೂಪತಿ.—ತಾವು ಏನೋ ತಂತಿಬೇಲಿಯನ್ನು ತೆಗೆಸಿ ಹಾಕಿದಿರಿ. ಅದರ ಬದಲು ೧೪೪ನೇ ಸೆಕ್ಷನ್ ಅನ್ನು ಜಾರಿಗೆ ತಂದಿರಿ.

ಶ್ರೀ ಬಿ ಎ. ಉಪ್ಪಿನ್.—ನಾನು ಮೊದಲೇ ಹೇಳಿದ ಹಾಗೆ ನಮ್ಮ ಕರ್ನಾಟಕ ರಾಜ್ಯದ ಜನತೆಯ ಅನುಕೂಲಕ್ಕಾಗಿ ಅವರ ಅವಶ್ಯಕತೆಗಳನ್ನು ಅರಿತುಕೊಂಡು ವಿವಿಧ ಯೋಜನೆಗಳನ್ನು ಮತ್ತು ಜನರಿಗೆ ಅವಶ್ಯಕವಾದಂಥಾ ವಿವಿಧ ಕಾರ್ಯಗಳನ್ನೂ ಮಾಡುವುದಕ್ಕೆ ಒಳ್ಳೆಯ ಕೈಗನ್ನಡಿಯಂತೆ ಈ ಭಾಷಣದಲ್ಲಿ ಇಟ್ಟಿದ್ದಾರೆ ಎಂದು ನನ್ನ ಭಾವನೆ. ರಾಜ್ಯಪಾಲರು ಇದರ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಈ ಜನತಾ ಸರ್ಕಾರ ವಿವಿಧ ಯೋಜನೆಗಳನ್ನು ಕೈಗೊಂಡಿರ ತಕ್ಕಂಥಾದ್ದರ ಬಗ್ಗೆ ಒಂದು ಹಂತದಲ್ಲಿ ಕೇಂದ್ರಸರ್ಕಾರದವರು ಸ್ವಾಗತಿಸಿದ್ದಾರೆ. ನಮ್ಮ ಜನತಾ ಸರ್ಕಾರ ಬಡವರಿಗೆ ತಾಳಿಭಾಗ್ಯ ಎನ್ನುವ ಯೋಜನೆ ಏನು ತಂದಿದ್ದಾರೆ. ಇದರ ಬಗ್ಗೆ ನಮ್ಮ ಸಹ ಸದಸ್ಯೆಯರಾದ ಶ್ರೀಮತಿ ಮುಕ್ತರುನ್ನೀಸಾ ಬೇಗಂ ಅವರು ಈ ಯೋಜನೆಯನ್ನು ಬಿಂದ್ ಮಾಡಿ ಎಂದು ಹೇಳಿದಾಗ ನನಗೆ ವ್ಯಥೆಯಾಯಿತು. ಇವೊತ್ತು ಕನ್ನಡನಾಡಿನಲ್ಲಿ ಇರತಕ್ಕಂಥ ಬಡ ಕುಟುಂಬಗಳ ಬೇನೆಯ ಅರಿವು ಶ್ರೀಮತಿ ಮುಕ್ತರುನ್ನೀಸಾ ಬೇಗಂ ಅವರಿಗೆ ಇಲ್ಲ ಎಂದು ಕಾಣುತ್ತದೆ. ವಿವಾಹವಾಗುವುದು ಅನಿವಾರ್ಯ. ಸಂಸಾರವನ್ನು ಅವನು ಮಾಡಲೇಬೇಕು. ಈವೊತ್ತು ಕರ್ನಾಟಕ ರಾಜ್ಯದಲ್ಲಿ ಅನೇಕ ಬಡ ಕುಟುಂಬಗಳವರು ನಿರ್ಗತಿಕರಾಗಿದ್ದಾರೆ. ಅವರು ತಮ್ಮ ಮಕ್ಕಳಿಗೆ ಮದುವೆ ಮಾಡುವುದೇ ಕಷ್ಟವಾಗಿರುವುದರಿಂದ ಅಂಥಾವರಿಗೆ ಅನುಕೂಲವಾಗಲೆಂದು ಈ ತಾಳೀ ಭಾಗ್ಯದ ಯೋಜನೆಯನ್ನು ತಂದಿರುವುದು ಕೆಲವರು ಮೂಢನಂಬಿಕೆಯಿಂದ ತಮ್ಮ ಹತ್ತಿರ ಇರುವ ಮನೆಮಠಗಳನ್ನು ಮಾರಿ ಮದುವೆ ಮಾಡ್ತಾರಲ್ಲಾ ಅವರಿಗೆ ಸಹಾಯವಾಗಲಿ ಎಂದು ಈ ಯೋಜನೆಯನ್ನು ಮಾಡಿರುವುದು. ಅವರು ಯಾವ ಅಪ್ಯವಹಾರಕ್ಕೂ ಹೋಗದೆ, ದುಂದು ವೆಚ್ಚ ಮಾಡದೇ ಸರಿಯಾದ ರೀತಿಯಲ್ಲಿ ತಮ್ಮ ಜೀವನವನ್ನು ನಡೆಸಿಕೊಂಡು ಹೋಗಬೇಕು ಎನ್ನುವ ಉದ್ದೇಶದಿಂದ ಈ ಜನತಾ ಸರ್ಕಾರ ತಾಳಿಭಾಗ್ಯ ಯೋಜನೆ ತಂದದ್ದು. ಜನತಾ ಸರ್ಕಾರ ಈ ಒಂದು ಯೋಜನೆ ತಂದಿರುವುದನ್ನು ನೋಡಿದರೆ, ಇದರಲ್ಲಿ ಜನರು ಭಾಗವಹಿಸಿರುವುದನ್ನು ನೋಡಿದರೆ, ನಿಜಕ್ಕೂ ಇದು ಒಳ್ಳೆಯದು ಎಂದು ನನಗೆ ಅನಿಸುತ್ತದೆ.

ಇನ್ನೊಂದು ಪ್ರಮುಖ್ಯವಾದ ವಿಷಯ ಈ ಸದನ ಪ್ರಾರಂಭವಾದಾಗಿನಿಂದ ಈ ಮನೆಯ ಹಿರಿಯ ಸದಸ್ಯೆಯರೂ ಹಾಗೂ ಮಾತೆಯ ಸ್ವರೂಪದಲ್ಲಿರತಕ್ಕಂಥ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ವಿರೋಧಪಕ್ಷದ ನಾಯಕರಾಗಿರುವುದು ನಾವು ನಿಜಕ್ಕೂ ಸಂತೋಷ ಪಡಬೇಕಾಗಿದೆ. ಅಲ್ಲದೆ ಬಂಗಾರಕ್ಕೆ ಮೆರುಗು ಕೊಟ್ಟ ಹಾಗೆ ಅವರು ಇರುವುದು. ಅವರ ಬಗ್ಗೆ ನಮ್ಮ ನಾಯಕರಾದ ಶ್ರೀ ಮಾನ್ ಹೆಗಡೆಯವರೂ ಸಹ ಅವರನ್ನು ಅಭಿನಂದಿಸಿದ್ದಾರೆ. ಅದಕ್ಕೆ ಅವರು ಉತ್ತರ ರೂಪವಾಗಿ ವಿರೋಧ ಪಕ್ಷದವರಾದ ನಾವು ಎಲ್ಲವನ್ನೂ ವಿರೋಧ ಮಾಡುವುದಿಲ್ಲ, ನೀವು ಮಾಡಿದ ಒಳ್ಳೆಯ ಕಾರ್ಯಗಳನ್ನು ನಾವು ಮೆಚ್ಚುತ್ತೇವೆ. ಹೊಗಳುತ್ತೇವೆ, ಎಂದರು. ಮತ್ತೇನು ಹೇಳಿದರು ಎಂದರೆ, ನೀವು ಮದವೇರಿದ ಆನೆಯ ಹಾಗೆ ಇದ್ದರೆ ನಾವು ಅದಕ್ಕೆ ಅಂಕುಶ ಇದ್ದ ಹಾಗೆ ಎಂದು ಹೇಳಿದರು. ಅದನ್ನು ನಾವೆಲ್ಲಾ ಸ್ವಾಗತಿಸಿದೆವು. ಆದರೆ ಮಾನ್ಯ ಸದಸ್ಯೆಯವರಾದ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ನಮ್ಮ ಸರ್ಕಾರ ತಂದಿರತಕ್ಕಂಥಾ ಈ ತಾಳಿಭಾಗ್ಯ ಯೋಜನೆ ಬೇಡ ಅಂದರೆ ಈವೊತ್ತಿನ ದಿವಸ ನಾನಾ ಹೇಳುತ್ತೇನೆ, ಭಾರತ ದೇಶದಲ್ಲಿ ಇದು ಎಲ್ಲೂ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಅಲ್ಲದೆ, ಈವೊತ್ತು ನಮ್ಮ ಜನತಾ ಸರ್ಕಾರ ಕರ್ನಾಟಕದಲ್ಲಿ ನಡೆದಂಥಾ ಜಿಲ್ಲಾಪರಿಷತ್ ಚುನಾವಣೆಯಲ್ಲಿ ಮತ್ತು ಮಂಡಲ ಪಂಚಾಯತ್ ಚುನಾವಣೆಯಲ್ಲಿ ಮಹಿಳೆಯರು ಭಾಗವಹಿಸಲು ೨೫ ಪರ್ಸೆಂಟ್ ಅಷ್ಟು ಮೀಸಲಾತಿ ಕೊಟ್ಟಿರುವುದನ್ನು ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರ ನೆನಪಿಗೆ ತರುತ್ತೇನೆ.

† ಶ್ರೀ ಯು. ಭೂಪತಿ.—ಮಾನ್ಯ ಸದಸ್ಯರು ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ ಬಗ್ಗೆ ಪ್ರಸ್ತಾಪ ಮಾಡುವಾಗ ಇಂತಹ ಪದ್ಧತಿ ಭಾರತದಲ್ಲಿ ಬೇರೆ ಎಲ್ಲಿಯೂ ಇಲ್ಲವೆಂದು ಹೇಳುತ್ತಿದ್ದಾರೆ. ಆದರೆ ಬೇರೆ ರಾಜ್ಯಗಳಲ್ಲಿ ಇಂತಹ ಪದ್ಧತಿ ಈಗಾಗಲೇ ಜಾರಿಯಲ್ಲಿದೆ.

ಶ್ರೀ ಬಿ. ಎ. ಉಪ್ಪಿನ್.—ಶ್ರೀಮತಿ ನಾಗರತ್ನಮ್ಮನವರು ಸ್ವತಃ ಮಹಿಳೆಯರಾಗಿದ್ದುಕೊಂಡು ಈ ಬಗ್ಗೆ ಒಂದು ಪ್ರಶಂಸನೀಯವಾದಂಥ ಮಾತನ್ನೂ ಆಡಲಿಲ್ಲ. ಅವರು ನುಡಿದಂತೆ ನಡೆಯಲಿಲ್ಲ ವೆಂಬ ಭಾವನೆ ನನಗೆ ಬರುತ್ತಿದೆ. ಇವೊತ್ತು ನಮ್ಮ ದೇಶದಲ್ಲಿ ಹಳ್ಳಿಗಳೇ ಜಾಸ್ತಿ ಇವೆ. ನಮ್ಮ ದೇಶದಲ್ಲಿ ಶೇಕಡಾ ೮೦ರಷ್ಟು ಹಳ್ಳಿಗಳು ಇವೆ. ಹಳ್ಳಿಗಳೇ ಪ್ರಧಾನವಾಗಿರುವ ಈ ದೇಶದ ಬಗ್ಗೆ ಮಹಾತ್ಮಾ ಗಾಂಧೀಜಿ ಅವರು, ಯುವಕರು ಪಟ್ಟಣಗಳ ವ್ಯಾಮೋಹಕ್ಕೆ ಬಲಿಯಾಗದೆ ಹಳ್ಳಿಗಳಿಗೆ ಹೋಗಿ ನೆಲಸಬೇಕು, ಹಳ್ಳಿಗಳ ಅಭಿವೃದ್ಧಿ ಕಡೆಗೆ ಲಕ್ಷ್ಯ ಕೊಡಬೇಕು ಎಂದು ಹೇಳಿದರು. ಅವರು ಇನ್ನೊಂದು ಮಾತು ಏನು ಹೇಳಿದರೆಂದರೆ, ಪಟ್ಟಣಗಳಿಗೆ ಸತ್ವ ಒದಗಿಸುವುದು ಹಳ್ಳಿಗಳು ಎಂದು. ಆದರೆ ಈಗ ಹಳ್ಳಿಗಳು ಈ ಸತ್ವವನ್ನು ಕಳೆದುಕೊಂಡಿವೆ. ಅವು ಸತ್ವವನ್ನು ಕಳೆದುಕೊಂಡ ಮೇಲೆ ಇನ್ನು ಪಟ್ಟಣಗಳಿಗೆ ಯಾವ ರೀತಿ ಸತ್ವ ಬರಬೇಕು? ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ಊಟಕ್ಕೆ ರುಚಿ ಬರಬೇಕಾದರೆ ಉಪ್ಪು ಬೇಕು. ಆದರೆ ಉಪ್ಪೇ ತನ್ನ ರುಚಿಯನ್ನು ಕಳೆದುಕೊಂಡರೆ ಊಟಕ್ಕೆ ರುಚಿ ಯಾವ ರೀತಿ ಬರುತ್ತದೆ? ಇವೊತ್ತು ಹಳ್ಳಿಗಳ ಪರಿಸ್ಥಿತಿಯೂ ಇದೇ ರೀತಿ ಆಗಿದೆ. ಈ ಭಾರತದಲ್ಲಿರುವ ಹಳ್ಳಿಗಳ ಸ್ಥಿತಿ ಏನಾಗಿದೆ ಎಂಬ ಬಗ್ಗೆ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಒಂದು ಮಾತನ್ನು ಹೇಳಿದ್ದಾರೆ. ತಮ್ಮ ಅನುಮತಿ ಪಡೆದು ಅವರು ಹೇಳಿರುವ ಒಂದೆರಡು ಮಾತುಗಳನ್ನು ಇಲ್ಲಿ ಹೇಳಲು ಇಚ್ಛಿಸುತ್ತೇನೆ :

> ''ಹಳ್ಳಿಗಳೇ ಭಾರತದ ಬೆನ್ನೆಲುಬುಗಳು. ಅವುಗಳ ಉದ್ಧಾರವೇ ಭಾರತದ ಉದ್ಧಾರ.'' ಸ್ವಾತಂತ್ರ್ಯ ಪೂರ್ವದಿಂದಲೂ ಇಂಥ ಮಾತುಗಳನ್ನು ಕೇಳುತ್ತಲೇ ಬಂದಿದ್ದೇವೆ. ಆದರೂ ಹಳ್ಳಿಗಳ ಸ್ಥಿತಿಯಲ್ಲಿ ಬದಲಾವಣೆಗಳು ಕಂಡುಬರುತ್ತಿಲ್ಲ. ಬದಲಾಗಿ ಆ ಬೆನ್ನೆಲುಬುಗಳು ಬಾಗಿವೆ. ಕೆಲವು ಕಡೆ ಮುರಿದಿವೆ. ಕಾಲಮೇಲೆ ಕೈಯನೂರಿ ಕೋಲು ಹಿಡಿಯುವ ವೃದ್ಧರಂತಾಗಿದೆ ಹಳ್ಳಿಗಳ ಸ್ಥಿತಿ. ಹಳ್ಳಿಗರ ಬದುಕಂತೂ ತುಂಬಾ ಚಿಂತಾಜನಕವಾಗಿದೆ. ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಪರಿಸ್ಥಿತಿಗಳು ಶೋಚನೀಯವಾಗಿವೆ. ಒಂದು ರೀತಿಯಲ್ಲಿ ನಾವು ಕಟ್ಟಬೇಕೆಂದಿರುವ ಭವ್ಯ ಭವನದ ಬುನಾದಿಯೇ ಕುಸಿದಿದೆ. ಇಂಥ ಅಭದ್ರ ಭವನದ ಬುನಾದಿಯ ಮೇಲೆ ನಾವೆಂಥ ಭಾರತ ಕಟ್ಟಬಹುದು?

ಅವರು ಮುಂದುವರೆದು ಈ ಬಗ್ಗೆ ಇನ್ನೂ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ:

> ''ಹಳ್ಳಿಗಳ ರಸ್ತೆ, ಶಾಲೆ, ಆಸ್ಪತ್ರೆಗಳ ಕಡೆ ಕಣ್ಣೆತ್ತಿ ನೋಡದವರು ೨೧ನೇ ಶತಮಾನಕ್ಕೆ ಕಾಲಿಡುವ ಕನಸು ಕಾಣುತ್ತಿದ್ದಾರೆ. ದೇಶವನ್ನು ಕಂಪ್ಯೂಟರ್‌ಮಯ ಮಾಡಲು ಹೊರಟಿದ್ದಾರೆ. ನಮ್ಮ ಜನರಿಗೆ ಇಂದು ಮುಖ್ಯವಾಗಿ ಬೇಕಾಗಿರುವುದು ಕುಡಿಯಲು ನೀರು, ತುತ್ತು ಅನ್ನ, ಗೇಣು ಬಟ್ಟೆ, ಸ್ಲೇಟುಗಳೇ ಹೊರತು ಕಂಪ್ಯೂಟರ್‌ಗಳಲ್ಲ''

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಹೇಳಿರುವಂತಹ ಈ ಮಾತನ್ನು ಕೇಳಿದಾಗ ನಮ್ಮ ಹಳ್ಳಿಗಳು ಯಾವ ಸ್ಥಿತಿಯಲ್ಲಿವೆ ಎಂಬುದು ನಮಗೆ ಅರಿವಾಗುತ್ತದೆ. ಇದೇ ಕಾರಣದಿಂದ ಮಹಾತ್ಮಾ ಗಾಂಧಿಯವರು ಕಂಡ ಕನಸನ್ನು ನನಸು ಮಾಡಲು ನಮ್ಮ ಸರ್ಕಾರ ಹೊರಟಿದೆ. ಇಲ್ಲಿಯವರೆಗೆ ಒಂದೇ ಕಡೆ ಹೆಪ್ಪುಗಟ್ಟಿದ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಲು ನಮ್ಮ ಸರ್ಕಾರ ಪ್ರಯತ್ನ ಮಾಡಿದೆ. ಇದೇ ಉದ್ದೇಶ ಇಟ್ಟುಕೊಂಡು ನಮ್ಮ ಸರ್ಕಾರದವರು ಇಡೀ ರಾಜ್ಯದಲ್ಲಿ ಜಿಲ್ಲಾಪರಿಷತ್‌ಗಳ ಮತ್ತು ಮಂಡಲ್ ಪಂಚಾಯತ್‌ಗಳ ಚುನಾವಣೆಯನ್ನು ನಡೆಸಿದರು. ಈ ಚುನಾವಣೆಗಳ ಬಗ್ಗೆ ಒಂದು ಮಾತನ್ನು ನಾನು ಬಹಳ ವ್ಯಸನದಿಂದ ಹೇಳುತ್ತೇನೆ. ಈ ಚುನಾವಣೆಗಳು ನಡೆದ ಬಗ್ಗೆ ನಮ್ಮ ಅನೇಕ ಕಾಂಗ್ರೆಸ್ ಮಿತ್ರರು ಬಹಳ ಕಟುವಾಗಿ ಟೀಕೆ ಮಾಡಿದರು. ಚುನಾವಣೆ ಸಂದರ್ಭದಲ್ಲಿ ಜನರಿಗೆ ಹೆಂಡ ಕುಡಿಸಿದರು, ಹಣವನ್ನು ಹಂಚಿದರು ಎಂದೆಲ್ಲಾ ಆಪಾದನೆ ಮಾಡಿದರು. ನಾನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಈ ಬಗ್ಗೆ ಇಡೀ ರಾಜ್ಯದ ಬಗ್ಗೆ ಹೇಳುವುದಿಲ್ಲ. ಆದರೆ ನನ್ನ ತಾಲ್ಲೂಕ್ ಬಗ್ಗೆ ಮಾತ್ರ ಹೇಳುತ್ತೇನೆ. ಮಂಗ ಬೆಣ್ಣೆ ತಿಂದು ಮೇಕೆ ಬಾಯಿಗೆ ಸವರಿತು ಎಂಬ ಗಾದೆ ಮಾತಿನಂತೆ ಈ ಕಾಂಗ್ರೆಸ್‌ನವರು ತಾವು ಮಾಡಿದ ಕೆಲಸಗಳನ್ನು ಮರೆತು ಆ ತಪ್ಪುಗಳನ್ನೆಲ್ಲಾ ನಮ್ಮ ಮೇಲೆ ಹೊರಿಸುತ್ತಿದ್ದಾರೆ. ಈ ಆಪಾದನೆಯನ್ನು ನಾನು ಈಗ ಅನಿವಾರ್ಯವಾಗಿ ಮಾಡಬೇಕಾಗಿದೆ. ನನ್ನ ತಾಲ್ಲೂಕ್‌ನಲ್ಲಿ ೪ ಜಿಲ್ಲಾ ಪರಿಷತ್ ಸ್ಥಾನಗಳ ಪೈಕಿ ನಾವು ಒಂದನ್ನು ಮಾತ್ರ ಪಡೆದುಕೊಳ್ಳಲು ಸಾಧ್ಯವಾಯಿತು. ಆಗ ಅನೇಕ ನಮ್ಮ ಕಾರ್ಯಕರ್ತರು ನನ್ನ ಬಳಿ ಬಂದು ಏನು ಹೇಳಿದರೆಂದರೆ, ನಿಮ್ಮ ಮಾತನ್ನು ಕೇಳಿಕೊಂಡು ನಾವು ಜನರಿಗೆ ಹಣ ಮತ್ತು ಹೆಂಡವನ್ನು ಹಂಚಲಿಲ್ಲ. ಇದಕ್ಕಾಗಿ ನಾವು ಸೋಲಬೇಕಾಯಿತು. ಈ ಕಾರಣದಿಂದ ಮಂಡಲ್‌ಪಂಚಾಯತ್ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಹೇಳಿದರು. ಈ ಮಾತನ್ನು ಹೇಳಲು ನನಗೆ ವ್ಯಸನವಾಗುತ್ತಿದೆ.

ಅಧ್ಯಕ್ಷರು.—ಎಲ್ಲರಿಗೂ ಹತ್ತು ನಿಮಿಷಗಳ ಅವಕಾಶ ಕೊಡಲಾಗುತ್ತಿದೆ. ಆದ್ದರಿಂದ ತಾವು ಮುಕ್ತಾಯ ಮಾಡಿ.

ಶ್ರೀ ಬಿ. ಎ. ಉಪ್ಪಿನ್.—ನನಗೆ ಇನ್ನೂ ಕೆಲವು ವಿಚಾರಗಳನ್ನು ಹೇಳುವ ಬಯಕೆ ಇತ್ತು. ಆದರೆ ಸಮಯಾವಕಾಶ ಇಲ್ಲದಿರುವುದರಿಂದ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ನನ್ನ ಹೃತ್ಪೂರ್ವಕವಾದಂಥ ವಂದನೆಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎ. ಉಮರಬ್ಬ (ವಿಠ್ಠಲ್).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯ ವಿಧಾನ ಮಂಡಲದಲ್ಲಿ ಮಾನ್ಯ ರಾಜ್ಯಪಾಲರು ಮಾಡಿದಂತಹ ಭಾಷಣಕ್ಕೆ ಸಲ್ಲಿಸುವಂತಹ ವಂದನಾ ನಿರ್ಣಯವನ್ನು ನಾನು ವಿರೋಧಮಾಡಿ ಮಾತನಾಡುತ್ತಾ ಇದ್ದೇನೆ, ನಿಜ. ಆದರೆ ನಮ್ಮ ನಾಯಕಿ ಮೊದಲಿಗೆ ಹೇಳಿದಹಾಗೆ, ವಿರೋಧಕ್ಕಾಗಿ ಮಾತ್ರ ವಿರೋಧ ಮಾಡತಕ್ಕಂಥಾ ನೀತಿ ನಮ್ಮದಲ್ಲ. ಆರೀತಿ ಮಾಡುವುದಕ್ಕೆ ಹೋಗುವುದಿಲ್ಲ. ಸ್ವಾಗತಾರ್ಹವಾದುದು ಏನಾದರೂ ಇದ್ದರೆ ಅದನ್ನು ಮುಕ್ತ ಹೃದಯದಿಂದ ಸ್ವಾಗತ ಮಾಡಲಿಕ್ಕೂ ಸಹ ನಾನು ತಯಾರಿದ್ದೇನೆ. ಈ ರಾಜ್ಯಪಾಲರ ಭಾಷಣದಲ್ಲಿ ಪ್ರಥಮವಾಗಿ ನಾನು ಸ್ವಾಗತ ಮಾಡುವಂಥಾ ಒಂದು ಮುಖ್ಯವಾದ ಅಂಶವೇನೆಂದರೆ, ನಾನು ಈ ಸದನದ ಸದಸ್ಯನಾದ ನಂತರ ಬಡ್ಜೆಟ್ ಭಾಷಣ ಮತ್ತು ರಾಜ್ಯಪಾಲರ ಭಾಷಣಗಳನ್ನು ಈ ಸದನದಲ್ಲಿ ನಾನು ಕೇಳಿದ್ದೇನೆ. ಪ್ರತಿ ಸಂದರ್ಭದಲ್ಲೂ ಕೇಂದ್ರದ ಮೇಲೆ ಬೊಟ್ಟುಮಾಡಿ ತೋರಿಸುವಂಥಾದ್ದು, ಕೇಂದ್ರವನ್ನು ತನ್ನ ವೈಫಲ್ಯಕ್ಕೆ ಅಂಗವಾಗಿ ಬಳಸಿಕೊಳ್ಳುವುದು. ಎಲ್ಲ ರೀತಿಯಲ್ಲೂ ಕೇಂದ್ರ ತಪ್ಪುಮಾಡಿದೆ ಎಂದು ತೋರಿಸಿಕೊಳ್ಳುವಂತಹ ಒಂದು ಸತತ ಪ್ರಯತ್ನ ಇದುವರೆಗೆ ನಡೆದುಕೊಂಡು ಬಂದಿದೆ. ಆದರೆ ಇಂದು ನಮ್ಮ ಎದುರಿನಲ್ಲಿ ಇರುವಂತಹ ರಾಜ್ಯಪಾಲರ ಭಾಷಣದಲ್ಲಿ ಕೇಂದ್ರದ ಬಗ್ಗೆ ಅವಹೇಳನ ಮಾಡುವಂಥಾದ್ದಾಗಲಿ, ಅಥವಾ ಟೀಕೆ ಮಾಡುವುದಾಗಲಿ ಪ್ರಯತ್ನ ನಡೆಯದೇ ಇರುವಂಥಾದ್ದು ಅತ್ಯಂತ ಸ್ತುತ್ಯಾರ್ಹವಾದ ಕೆಲಸ ಎಂದು ನಾನು ಭಾವಿಸಿಕೊಂಡಿದ್ದೇನೆ. ಆದರೆ ಅದಕ್ಕೆ ಕಾರಣ ಇರಬಹುದು. ಇತ್ತೀಚಿನ ವಿದ್ಯಮಾನಗಳಲ್ಲಿ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಕೇಂದ್ರದ ಮೇಲೆ ಒಲವನ್ನು ತೋರಿಸುತ್ತಾ ಇರುವುದರಿಂದ ಇನ್ನು ಕೇಂದ್ರವನ್ನು ಎದುರು ಹಾಕಿಕೊಳ್ಳಬಾರದು ಎನ್ನುವಂಥ ಪ್ರಯತ್ನ ಮಾಡಿರಬಹುದು.

ಒಬ್ಬ ಮಾನ್ಯ ಸದಸ್ಯರು.—ಅದು ಭ್ರಮೆ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೆ, ನನಗೆ ಇವತ್ತು ಭ್ರಮೆ ಎನ್ನುವಂತಹ ಮಾತನ್ನು ಅವರು ಹೇಳುತ್ತಾ ಇದ್ದಾರೆ. ಅವರಿಗೆ ಭ್ರಮನಿರಸನ ಆಗುವವರೆಗೆ ಮಾತ್ರವೇ ಎಂದು ಹೇಳಲಾರೆ. ಆ ಸಮಾಧಾನ ನನಗೆ ಇದೆ, ಆ ದಿನ ಹೆಚ್ಚು ದೂರ ಇರಲಿಕ್ಕಿಲ್ಲ. ಹಾಗೆ ನೇರವಾಗಿ ಭಾಷಣದ ವಿಚಾರ ಪ್ರಸ್ತಾಪ ಮಾಡುವಾಗ ನನಗೆ ಬಹಳ ಗಂಭೀರವಾದ ವಿಚಾರವನ್ನು ಇಲ್ಲಿ ಎತ್ತಬೇಕು ಎಂದು ಭಾವಿಸಿದ್ದೇನೆ, ಕಳೆದ ಸಲ ಅವಕಾಶ ಸಿಕ್ಕಲಿಲ್ಲ. ಕಳೆದಬಾರಿ ನಮ್ಮ ರಾಜ್ಯದಲ್ಲಿ ಡಿಸೆಂಬರ್ ೭ನೇ ದಿನಾಂಕದಂದು ನಡೆದಂತಹ ಘಟನೆಗಳು, ಅದಕ್ಕೆ ಪೂರಕವಾಗಿ ಬೆಂಗಳೂರಿನಿಂದ ಮೈಸೂರಿಗೆ, ಮೈಸೂರಿನಿಂದ ತುಮಕೂರಿಗೆ ಹಬ್ಬಿದಂತಹ ಗಲಭೆ ಹಾಗೂ ಪೋಲೀಸರ ಕೃತ್ಯಗಳ ಒಂದು ಕರಾಳಛಾಯೆ ಕರ್ನಾಟಕ ರಾಜ್ಯದ ಜನಜೀವನದ ಮೇಲೆ ಹಾಸಿದೆ. ಇದರ ಬಗ್ಗೆ ಮಾತ್ರ ಪ್ರಸ್ತಾಪವನ್ನು ರಾಜ್ಯಪಾಲರ ಭಾಷಣದ ಮೂಲಕ ಮಾಡಿ, ಈ ಕರಾಳಛಾಯೆ ಏನಿದೆ, ಅದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೋಮು ಗಲಭೆ ಆಗಿರಬಹುದು, ಘರ್ಷಣೆ ಆಗಿರಬಹುದು, ಪೋಲೀಸರ ದೌರ್ಜನ್ಯಗಳು ಆಗಿರ ಬಹುದು, ಅದೆಲ್ಲವನ್ನೂ ಈ ಮೂರು ಘಟನೆಗಳ ಪರದೆಯ ಅಡಿಯಲ್ಲಿ ಮುಚ್ಚಿರುವಂಥ ಒಂದು ವ್ಯವಸ್ಥಿತ ಪ್ರಯತ್ನ ಈ ಭಾಷಣದಲ್ಲಿ ಅಡಗಿದೆ ಎಂದು ನಾನು ಭಾವಿಸಿದ್ದೇನೆ ಸುಮಾರು ಒಂದು ವರ್ಷಕ್ಕೂ ಮಿಗಿಲಾಗಿ ವಿರಾಜಪೇಟೆಯಲ್ಲಿ ಸತತವಾಗಿ ಒಂದು ಜಾತೀಯ ಭಾವನೆ ಹೊಗೆಯಾಡುತ್ತಿದೆ. ಅನೇಕ ಮಂದಿ ಅದರಿಂದ ತೊಂದರೆಗೆ ಈಡಾದದ್ದು ಮಾತ್ರವಲ್ಲ, ಸುಮಾರು ನೂರರಷ್ಟು ಅಲ್ಪ ಸಂಖ್ಯಾತರ ಕೊಮಿಗೆ ಸೇರಿದಂಥ ಕುಟುಂಬಗಳು ಆ ಊರನ್ನೇ ಬಿಟ್ಟು ಹೋಗುವಂಥ ಪರಿಸ್ಥಿತಿ ಇದ್ದಾಗಲೂ. ಇಂತಹ ಪರಿಸ್ಥಿತಿ ಇದೆ ಎಂದು ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದಾಗ ಲೆಲ್ಲಾ ಸರ್ಕಾರ ಪ್ರಾಮಾಣಿಕವಾಗಿ ಈ ಪರಿಸ್ಥಿತಿಯನ್ನು ತಿಳಿಗೊಳಿಸುವಂತಹ ಯಾವುದೇ ಯತ್ನ ಮಾಡಲಿಲ್ಲ. ಬಾಗಲಕೋಟೆಯಲ್ಲಿ ಗಲಾಟೆ ನಡೆದಂತಹ ಸಂದರ್ಭದಲ್ಲಿ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವಂತಹ ಪ್ರಯತ್ನ ಆಗಲಿಲ್ಲ. ಅದೇರೀತಿ ಶಿಕಾರಿಪುರದ ಬಗ್ಗೆ ಹೇಳುವುದಾದರೆ, ಈಗತಾನೆ ಮಾನ್ಯ ಬಸವಣ್ಣಪ್ಪನವರು ಹೊರಗೆ ಹೋಗಿದ್ದಾರೆ. ಅಲ್ಲಿ ಹಸಿ ಹಸಿ ಇಬ್ಬರು ಯುವಕರನ್ನು ನೇರವಾಗಿ ಜನಸಂಚಾರ ಇರುವ ಸಂದರ್ಭದಲ್ಲಿ ಕೊಲ್ಲಲ್ಪಟ್ಟಂಥ ಘಟನೆ ನಡೆಯಿತು. ಕೊಂದ ನಂತರ ಪರಿಹಾರ ಕೊಡುವಂಥಾದ್ದು, ಅದರ ನಂತರ ಜುಡಿಶಿಯಲ್ ಎನ್‌ಕ್ವೈರಿ ಘೋಷಣೆ ಮಾಡುವಂಥಾದ್ದು ಏನಿದೆ, ಇದು ನನಗೆ ಆಶ್ಚರ್ಯ ತರುತ್ತಿದೆ. ಅವರಿಗೆ ಬೇಕಾದ್ದು ರಕ್ಷಣೆಯೇ ವಿನಃ ಬೇಕಾದ್ದು ಕೇವಲ ಪರಿಹಾರ ಅಲ್ಲ, ಬೇಕಾದ್ದು ಜುಡಿಶಿಯಲ್ ಎನ್‌ಕ್ವೈರಿ ಅಲ್ಲ. ಮಾನ್ಯ ಗೃಹ ಸಚಿವರು ಇಲ್ಲಿಲ್ಲ. ಮಾನ್ಯ ಗೃಹ ಸಚಿವರು ಅವರು ಬಂದಿರುವಂತಹ ಗೃಹ ಜಿಲ್ಲೆ ಮೈಸೂರು. ಆ ಜಿಲ್ಲೆಯಲ್ಲಿ ಇವತ್ತು ಅಲ್ಪಸಂಖ್ಯಾತರು ತಮ್ಮ ಗೃಹಗಳಲ್ಲಿ ಶಾಂತಿಯುತವಾಗಿ ಬದುಕಲಿಕ್ಕೆ ಸಾಧ್ಯವಿಲ್ಲ ಎನ್ನುವಂಥ ಸಂದರ್ಭ ಬಂದಾಗ ತಮ್ಮ ಅಸಮರ್ಥತೆಯನ್ನು ಒಪ್ಪಿಕೊಂಡು ಅವರು ಬೇರೆ ಯಾರಿಗಾದರೂ ಸಮರ್ಥರಿಗೆ ಆ ಸ್ಥಾನವನ್ನು ಬಿಟ್ಟು ಕೊಡುವುದು ಒಳ್ಳೆಯದಿತ್ತು, ಅದು ಅವರಿಗೆ ಗೌರವ ತರುತ್ತಿತ್ತು ಎಂದು ನಾನು ಸ್ಪಷ್ಟವಾದ ಮಾತುಗಳಲ್ಲಿ ತಮ್ಮ ಮುಂದೆ ಹೇಳುತ್ತಾ ಇದ್ದೇನೆ. ಮತ್ತೆ ಬೆಂಗಳೂರು, ಮೈಸೂರು ಹಾಗೂ ತುಮಕೂರಿನಲ್ಲಿ ಗೋಲಿಬಾರ್ ಆದಂತಹ ಸಂದರ್ಭದಲ್ಲಿ, ಮುಂದೆ ಆಗಬಹುದಾದಂಥ ವಿಧ್ವಂಸಕಕೃತ್ಯಗಳು ಯಾವ ಮಟ್ಟದಲ್ಲಿ ನಡೆಯಬಹುದೆಂಬುದನ್ನು ಊಹೆ ಮಾಡದಂಥ ರೀತಿಯಲ್ಲಿ ನಡೆದವು ಎಂಬುದನ್ನು ಪ್ರತ್ಯಕ್ಷದರ್ಶಿಗಳು ತಮ್ಮ ಅನುಭವದಿಂದ ಹೇಳಿದ್ದಾರೆ. ಇದಕ್ಕೆ ಆಳವಾದಂಥ ಪಿತೂರಿ ಆಗಿದೆ. ಇದಕ್ಕೆಲ್ಲಾ ಪೋಲೀಸ್ ಇಲಾಖೆಯ ಅವ್ಯವಸ್ಥೆಯೇ ಕಾರಣವಾಗಿದೆ. ಬಿನ್ನಭಿಪ್ರಾಯಗಳು ಇರಬಹುದು. ಆದರೆ, ಓಬಿರಾಯನ ಕಾಲದಲ್ಲಿರುವಂಥ ವ್ಯವಸ್ಥೆ, ಕಡಿಮೆ ಪ್ರಮಾಣದಲ್ಲ ಪೊಲೀಸ್‌ನವರು ಇರುವುದು, ಹಳೇಕಾಲದ ವಾಹನಗಳು, ಒಂದು ಗುಂಪು ಬಂದರೆ, ಅದರಿಂದ ಏನಾಗುತ್ತದೋ ಎನ್ನುವ ಶಂಕೆಯಿಂದ ತಮ್ಮನ್ನು ತಾವು ರಕ್ಷಣೆ ಮಾಡಿ ಕೊಳ್ಳುವುದಕ್ಕಾಗಿ ಕೈಮೀರುವಂಥ ಕೆಲಸವನ್ನು ಪೊಲೀಸ್‌ನವರು ಮಾಡಿದ್ದಾರೆ. ಅವರ ಸಂಖ್ಯೆ ಕಡಿಮೆ ಇರುವುದರಿಂದ ಇದರಿಂದೇನಾಗುತ್ತದೋ ಎಂಬುದನ್ನು ಊಹಿಸಿಕೊಂಡು ಗೋಲಿಬಾರ್ ಮಾಡುತ್ತಾರೆ. ಇಂಥ ಒಂದು ಪರಿಸ್ಥಿತಿಯನ್ನು ತಪ್ಪಿಸಿ, ಜನರು ನೆಮ್ಮದಿಯಿಂದ ಜೀವನ ಮಾಡುವಂಥ ಒಂದು ವ್ಯವಸ್ಥೆಯನ್ನು ತರುವುದಕ್ಕೆ ರಾಜ್ಯಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಅದೇರೀತಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯ್ತಿ ಚುನಾವಣೆಯಲ್ಲಿ ಜನರ ಕೈಗೆ ಅಧಿಕಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರ ಬಗ್ಗೆ ಬಹಳ ಚರ್ಚೆಯಾಗಿದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯ್ತಿ ಸದಸ್ಯರುಗಳನ್ನು ಒಂದು ದಿನ ಬೆಳಿಗ್ಗೆ ಕರೆಸಿ ಮಧ್ಯಾಹ್ನ ಕಳುಹಿಸಿ ಕೊಡಲಾಯಿತು. ಸಮ್ಮೇಳನಕ್ಕೂ, ಸಾರ್ವಜನಿಕ ಭಾಷಣಕ್ಕೂ ಅಪಾರವಾದಂಥ ವ್ಯತ್ಯಾಸ ಇದೆ. ಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಕರೆದು ಉರಿಬಿಸಿಲಿನಲ್ಲಿ ಅವರುಗಳನ್ನು ಕೂರಿಸಿ, ಪ್ರವಾಸ ಮಾಡಿಸುತ್ತೇವೆಂದು ಹೇಳಿದಿರಿ. ಇದಕ್ಕಾಗಿ ಆದಂಥ ಒಟ್ಟು ಖರ್ಚು ಎಷ್ಟು ? ಊಟ ಶಾಮಿಯಾನ, ಮೈಕ್. ಸೆಟ್ಟು, ವಿದ್ಯುತ್ ಅಲಂಕಾರಕ್ಕೆ ಇನ್ನಿತರೆ ಕೆಲಸ ಕಾರ್ಯಗಳಿಗೆ ಖರ್ಚು ಎಷ್ಟೆಷ್ಟು ಆಗಿದೆ ಎನ್ನುವವಿವರವನ್ನು ಸವಿಸ್ತಾರವಾಗಿ ಕೊಡಬೇಕು ಊಟದ ವಿಚಾರದಲ್ಲಿ ಎಷ್ಟು ರಾದ್ಧಾಂತವಾಯಿತು ಎನ್ನುವುದರ ಬಗ್ಗೆ ಮಾನ್ಯ ರಾಮಯ್ಯನವರು ಮಾತನಾಡಿದ್ದಾರೆ. ನಮ್ಮಲ್ಲಿ ಶಾಲಾ ಮಕ್ಕಳನ್ನು ಪ್ರವಾಸಕ್ಕೆ ಕಳುಹಿಸಲಾಗುವುದು. ಪ್ರತಿನಿಧಿಗಳಿಗೆ ಬೆಂಗಳೂರು ಮಾತ್ರವಲ್ಲ, ಇಡೀ ರಾಜ್ಯವನ್ನು ನೋಡಿಬರುವಂಥ ವ್ಯವಸ್ಥೆ ಮಾಡಿ. ಬೆಂಗಳೂರು, ಮೈಸೂರು ಹಾಗೂ ಬಿಜಾಪುರದ ಗೋಲಗುಂಬಜ್ ಕೂಡ ನೋಡಿಕೊಂಡು ಬರಲಿ. ಮಧ್ಯಾಹ್ನ ಸಮ್ಮೇಳನ ಆದ ನಂತರ ಇನ್ನೊಂದು ಪುಟ್ಟ ಸಮ್ಮೇಳನ ಇದ್ದರೂ ಇದಕ್ಕೆ ಬರದಂಥ ರೀತಿಯಲ್ಲಿ ಅವರನ್ನು ಇಡುವುದಕ್ಕೆ ಪ್ರಯತ್ನ ಮಾಡಿದಿರಿ.

ಸ್ವಾಮಿ, ಸಾರ್ಕ್ ಸಮ್ಮೇಳನದ ಬಗ್ಗೆ ಹೇಳಿದ್ದಾರೆ. ಪ್ರಧಾನಮಂತ್ರಿಯವರು ಕೂಡ ಖುಷಿ ಪಟ್ಟಿದ್ದಾರೆಂದು ಹೇಳಿದ್ದಾರೆ. ಸಾರ್ಕ್ ಸಮ್ಮೇಳನಕ್ಕೆ ಕೇಂದ್ರ ಬೆಂಗಳೂರು ನಗರವನ್ನು ಆಯ್ಕೆ ಮಾಡಿ, ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟಿದ್ದರೂ ರಾಜ್ಯಪಾಲರ ಭಾಷಣದಲ್ಲಿ ಪ್ರಧಾನಮಂತ್ರಿಯವರಿಗೆ ಕೃತಜ್ಞತೆ ಸಲ್ಲಿಸುವಂಥ ಒಂದು ಶಬ್ದವನ್ನಾದರೂ ಅಳವಡಿಸ ಬೇಕಾಗಿತ್ತು. ಇವತ್ತು ದೆಹಲಿಯಿಂದ ಬಂದು ಬೆಂಗಳೂರಿನಲ್ಲಿ ಸಮ್ಮೇಳನ ಮಾಡಿದರು. ಆದರೆ ಕರ್ನಾಟಕದ ಬಗ್ಗೆ, ಭಾಷೆಯ ಬಗ್ಗೆ ಸಾಹಿತ್ಯದ ಬಗ್ಗೆ ಮಾತನಾಡುವವರು, ಕರ್ನಾಟಕದ ಸಾಹಿತ್ಯ ಅಕಾಡಮಿಯವರು ಬೆಂಗಳೂರಿನಿಂದ ದೆಹಲಿಗೆ ಹೋಗಿ ಸಮ್ಮೇಳನ ನಡೆಸುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಅದರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಭಾಗವಹಿಸುತ್ತಾರೆ. ಅಂದರೆ ಇವರು ತಮ್ಮ ಪ್ರತಿಭೆಯನ್ನು ವಿಸ್ತರಿಸುವಂಥ, ಇಮೇಜನ್ನು ಬೆಳೆಸಿಕೊಳ್ಳುವಂಥ ಇನ್ನೊಂದು ಸ್ಟಂಟ್ ಇರಬಹುದು. ಕರ್ನಾಟಕ ಸಂಘದವರ ಜೊತೆ ಸಾಹಿತ್ಯ ಆಕಾಡಮಿಯವರು ಸೇರಿ ತಮ್ಮ ಕಡೆ ಯಾರು ಯಾರು ಬುದ್ಧಿ ಜೀವಿಗಳು, ಕವಿಗಳು ಇದ್ದಾರೆ ಅವರಿಗೆಲ್ಲಾ ಅನುಕೂಲವಾಗುವ ರೀತಿಯಲ್ಲಿ ಮಾಡುತ್ತಿದ್ದಾರೆ. ಬೆಳೆಯುವ ಕನ್ನಡ ನಾಡು ಪುಸ್ತಕ ಸಿಂಗಪುರದಲ್ಲಿ ಪ್ರಿಂಟ್ ಮಾಡಲಾಯಿತು. ಕರ್ನಾಟಕ ಸಾಹಿತ್ಯ ಆಕಾಡೆಮಿ ಸಮ್ಮೇಳನವನ್ನು ಡೆಲ್ಲಿಯಲ್ಲಿ ಮಾಡುವಂಥದ್ದು, ಇಲ್ಲಿ ಕೇಂದ್ರಸರ್ಕಾರ ಸಮ್ಮೇಳನ ಮಾಡಿದ ಬಗ್ಗೆ ಚಕಾರದ ಮಾತು ಹೇಳದೇ ಇರುವುದು ಬಹಳ ವಿರೋಧಾಭಾಸ ವಾಗಿದೆ. ಮಾನ್ಯ ಮುಖ್ಯಮಂತ್ರಿಯವರಿಗೆ ರಾಜಕೀಯ ಅಂದ ಕೂಡಲೇ ಸಿಡುಕು, ಕೋಪ ಬರುತ್ತದೆ. ಸಾಹಿತ್ಯ, ಚಲನಚಿತ್ರದಂಥ ಕಾರ್ಯಕ್ರಮಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುವಂಥ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಮುಖ್ಯವಾಗಿ,

೪-೦೦ ಪಿ. ಎಂ.

ಮುಖ್ಯಮಂತ್ರಿಯವರು ಅದರಲ್ಲಿ ತೊಡಗಿರುವಂಥಾದ್ದು ಅಟ್ ದಿ ಕಾಸ್ಟ್ ಆಫ್ ದಿ ಸ್ಟೇಟ್. ಈ ರಾಜ್ಯದ ಬೆಲೆ ತೆತ್ತು ಮಾಡುತ್ತಿರುವುದು ಅವರಿಗಾಗಲಿ ಅಥವಾ ಯಾರಿಗೇ ಆಗಲಿ, ಶೋಭೆ ತರುವುದಿಲ್ಲ. ಇನ್ನು ಕೊಳವೆ ಬಾವಿಗಳನ್ನು ತೋಡಿಸತಕ್ಕ, ಯಾವುದೇ ಒಂದು ಬಾವಿ ತೋಡಿಸತಕ್ಕ ರಿಗ್ ಆಗಲಿ ಅದನ್ನು ಕರ್ನಾಟಕ ಸರ್ಕಾರ ತನ್ನ ಸ್ವಂತದ್ದಾಗಿ ಇಟ್ಟುಕೊಳ್ಳಬೇಕಾಗಿತ್ತು. ಇವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರಿಂದಲೂ ತೆಗೆದುಕೊಳ್ಳುವುದಿಲ್ಲ. ಇವರು ಖಾಸಗಿ ಸಂಸ್ಥೆಗಳವರಿಗೆ ಕೊಡತಕ್ಕದ್ದು. ಅದರಲ್ಲೂ ಸಹ ಹೊರ ರಾಜ್ಯದ ಖಾಸಗಿ ಸಂಸ್ಥೆಯವರಿಗೆ ಕೊಡುವ ಹಿನ್ನೆಲೆ ಏನು ಎಂದು ಬಾವಿ ತೋಡಿಸುವ ಯಂತ್ರಗಳನ್ನು ಕೇಳುತ್ತೇನೆ. ಇದಕ್ಕೆ ಕಾರಣ ಏನು ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು. ಇನ್ನು ಪುಸ್ತಕ ಹಂಚಿದ ಬಗ್ಗೆ ಹೇಳ ಬೇಕೆಂದರೆ, ನಮ್ಮ ಮಿತ್ರರಾದ ಶ್ರೀ ಜಯಕುಮಾರ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡುತ್ತಾ, ನಾವು ಮಕ್ಕಳಿಗೆ ಬುದ್ಧಿ ಕೊಡಲಿಕ್ಕೆ ಮಾಡಿದ್ದೇವೆಂದು ಹೇಳಿದರು. ಬುದ್ಧಿ ತಾವು ೫-೧೦ ರೂಪಾಯಿ ಪುಸ್ತಕ ಕೊಟ್ಟರೆ ಸಿಕ್ಕುವುದಿಲ್ಲ. ಪುಸ್ತಕ ಕೊಡುವುದು ಒಂದರಿಂದಲೇ ಬುದ್ಧಿ ಕೊಡುವ ಮಾಧ್ಯಮ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ತಾವೇನೋ ಪುಸ್ತಕ ಕೊಡುತ್ತೀರಿ, ೨೦೦ ಜನ ಮಕ್ಕಳಿಗೆ ಮೂರು ಜನ ಮಾಸ್ಟರು ಇರುತ್ತಾರೆ. ಆ ಮಾಸ್ಟರು ಈ ಪುಸ್ತಕಗಳನ್ನು ಮೂರು ವರ್ಷ ಕಾಪಾಡಬೇಕು ಆದ್ದರಿಂದ, ಮಾಸ್ಟರು ಏನು ಮಾಡುತ್ತಾರೆ ಎಂದರೆ, ಆ ಪುಸ್ತಕಗಳನ್ನೆಲ್ಲಾ ಒಂದು ಕಡೆ ಕಟ್ಟಿಟ್ಟು, ಅಂಗಿ ಬಿಚ್ಚಿ ಕುರ್ಚಿಯ ಮೇಲೆ ಕುಳಿತುಕೊಂಡಿರುತ್ತಾರೆ. ಮಾಸ್ಟರಿಗೆ ನಿದ್ರೆ ಚೆನ್ನಾಗಿ ಬರುತ್ತದೆ. ಆ ಸಮಯದಲ್ಲಿ ಶಾಲೆಗೆ ಇನ್ಸ್‌ಪೆಕ್ಟರ್ ಬರುತ್ತಾರೆ. ಆಗ ಹುಡುಗರು ಯಾರೋ ಬಂದರೂ, ಯಾರೋ ಬಂದರೂ ಎಂದು ಕೂಗಿಕೊಳ್ಳುತ್ತಾರೆ. ಅಷ್ಟರಲ್ಲಿ ಇನ್ಸ್‌ಪೆಕ್ಟರ್ ಶಾಲೆಗೆ ಬಂದುಬಿಟ್ಟಿರುತ್ತಾರೆ. ತಕ್ಷಣ ಆ ಮಾಸ್ಟರ್ ಎದ್ದುನಿಂತು ಇವು ನಮ್ಮ ದೇಹದ ೧೨ ಜೊತೆ ಪಕ್ಕೆಲುಬುಗಳು ಎಂದು ತೋರಿಸು ತ್ತಾರೆ. ಆ ಇನ್ಸ್‌ಪೆಕ್ಟರಿಗೆ ನಿಜವಾಗಿಯೂ ಮೆಚ್ಚುಗೆ ಆಗುತ್ತದೆ. ಇವರು ಪ್ರಾಕ್ಟಿಕಲ್ ಆಗಿ ಬಟ್ಟೆ ಬಿಚ್ಚಿ ಹೇಳುತ್ತಿದ್ದಾರಲ್ಲ ಎಂದು ಸಂತೋಷವಾಗುತ್ತದೆ. ಆ ಪ್ರೈಮರಿ ಸ್ಕೂಲಿನಲ್ಲಿದ್ದಂಥ ಮಾಸ್ಟರಿಗೆ ಇನ್ಸ್‌ಪೆಕ್ಟರ್ ನಾವು ಕೊಟ್ಟ ಪುಸ್ತಕಗಳೆಲ್ಲಾ ಬಂದಿದೆಯೋ ಎಂದು ಕೇಳುತ್ತಾರೆ. ಉಪಾಧ್ಯಾಯರು ಎಲ್ಲಾ ಬಂದಿದೆ ಸಾರ್ ಅಲ್ಲೇ ಕಟ್ಟಿಟ್ಟಿದ್ದೇನೆಂದು ಹೇಳುತ್ತಾರೆ. ಏಕೆಂದರೆ ಆ ಪುಸ್ತಕಗಳು ಮೂರು ವರ್ಷಗಳ ಕಾಲ ಬಾಳಿಕೆ ಬರಬೇಕು. ಮೂರು ವರ್ಷ ಬಾಳಿಕೆ ಬರಲಿಲ್ಲ ಅಂದರೆ ಅವರನ್ನು ಸಸ್ಪೆಂಡ್ ಮಾಡುತ್ತಾರೆ, ಆಗ ಅವರ ಗತಿ ಏನಾಗಬೇಕು. ಈ ತರಹ ಪರಿಸ್ಥಿತಿ ಇದೆ. ಅನಂತರ ಇನ್ಸ್‌ಪೆಕ್ಟರ್ ಸೀತಾ ಸ್ವಯಂವರ ಪಾಠ ಮಾಡಿದ್ದೀರಾ ಎಂದು ಕೇಳುತ್ತಾರೆ. ಅವರು ಪಾಠ ಮಾಡಿದ್ದೇನೆ ಎಂದು ಹೇಳುತ್ತಾರೆ. ಆಗ ಇನ್ಸ್‌ಪೆಕ್ಟರ್ ಒಬ್ಬ ಹುಡುಗನಿಗೆ ಸೀತಾ ಸ್ವಯಂವರದಲ್ಲಿ ಬಿಲ್ಲು ಮುರಿದಿದ್ದು ಯಾರು ಎಂದು ಕೇಳುತ್ತಾರೆ. ಆಗ ಆ ಹುಡುಗ ನಾನು ಮುರಿದಿಲ್ಲ ಸಾರ್ ಎಂದು ಹೇಳುತ್ತಾನೆ, ಅನಂತರ ಎರಡನೆಯ ಹುಡುಗನಿಗೆ ಕೇಳುತ್ತಾರೆ. ಅವನು ನನಗೆ ಗೊತ್ತಿಲ್ಲ ಸಾರ್ ಎಂದು ಹೇಳುತ್ತಾನೆ.

ಅನಂತರ ಮೂರನೆಯ ಹುಡುಗನಿಗೆ ಕೇಳುತ್ತಾರೆ, ಆಗ ಆ ಹುಡುಗ ಗಾಬರಿಯಾಗಿ ನಾನು ಮುರಿಯಲಿಲ್ಲ ಎಂದು ಹೇಳುತ್ತಾನೆ. ಇನ್ಸ್‌ಪೆಕ್ಟರ್ ಅವರು ಉಪಾಧ್ಯಾಯರಿಗೆ ಏನ್ರಿ ಸರ್ಕಾರ ಮಕ್ಕಳಿಗೋಸ್ಕರ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿರುವಾಗ ಈ ಹುಡುಗರು ಪಾಠ ಕೇಳಿದರೆ ಈ ತರಹ ಉತ್ತರ ಹೇಳುತ್ತಾರೆ ಎಂದು ಕೇಳುತ್ತಾರೆ. ಅದಕ್ಕೆ ಉಪಾಧ್ಯಾಯರು ಬಿಲ್ಲು ಮುರಿಯುವಷ್ಟು ಕೆಟ್ಟ ಹುಡುಗರು, ನಮ್ಮ ಹುಡುಗರು ಅಲ್ಲ ಎಂದು ಹೇಳುತ್ತಾರೆ. ಅನಂತರ ಅವರು ಆ ಉಪಾಧ್ಯಾಯರನ್ನು ಹೆಡ್‌ಮಾಸ್ಟರ್ ಹತ್ತಿರ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಇನ್ಸ್‌ಪೆಕ್ಟರ್ ಅವರ? ಹೆಡ್‌ಮಾಸ್ಟರಿಗೆ ಕೇಳುತ್ತಾರೆ, ಎಲ್ಲರಿಗೂ ಪುಸ್ತಕ ಸಿಕ್ಕಿದೆಯೋ ? ಸೀತಾ ಸ್ವಯಂವರ ಪಾಠ ಆಗಿದೆಯೋ, ಮಕ್ಕಳನ್ನು ಕೇಳಿದರೆ ಅವರು ಹಾಗೆ ಹೇಳುತ್ತಾರೆ, ಮಾಸ್ಟರಿಗೆ ಕೇಳಿದರೆ ಹೀಗೆ ಹೇಳುತ್ತಾರೆ ಎಂದು ಹೇಳಿದಾಗ ಆ ಇನ್ಸ್‌ಪೆಕ್ಟರಿಗೆ ಸಮಾಧಾನ ಮಾಡಿ ಟೀಗೆ ಆರ್ಡರ್ ಮಾಡಿ ಅವರು ಹೇಳಿರುವಂಥ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ ಆ ಬಿಲ್ಲಿಗೆ ಎಷ್ಟು ಖರ್ಚಾಗುತ್ತದೆ ಅದನ್ನು ನಾನು ಕೊಡುತ್ತೇನೆ ಎಂದು ಹೇಳಿದರಂತೆ. ಆದ್ದರಿಂದ ಮಕ್ಕಳಿಗೆ ಪುಸ್ತಕ ಸಿಕ್ಕಿದೆ ಅಂದರೆ ಬುದ್ಧಿ ಸಿಕ್ಕಿದಂತೆ ಆಗುವುದಿಲ್ಲ. ಈಗ ಏನಾಗಿದೆ, ಪುಸ್ತಕ ಇದೆ, ಶಾಲಾ ಕಟ್ಟಡ ಇಲ್ಲ, ಶಾಲಾ ಕಟ್ಟಡ ಇದ್ದರೆ ಮಾಸ್ಟರು ಇಲ್ಲ, ಬುದ್ಧಿ ಸಿಕ್ಕುತ್ತದೆ ಅಂದರೆ ಹೇಗೆ. ಹಿಂದೆ ನಾವು ಪುಸ್ತಕ ಕೊಡದೇ ಇರುವ ಕಾಲದಲ್ಲಿ ವ್ಯಾಸಂಗ ಮಾಡಿರಲಿಲ್ಲವೇ ? ನಿಮಗೆ ಬುದ್ಧಿ ಸಿಕ್ಕಿಲ್ಲವೇ ? ಇನ್ನು ಭೂಸುಧಾರಣೆ ಬಗ್ಗೆ ಹೇಳಬೇಕೆಂದರೆ, ಎಷ್ಟು ಭೂ ನ್ಯಾಯಮಂಡಲಿಗಳು ರಚನೆಯಾಗಿದೆ. ಅಪೆಲೇಟ್ ಟ್ರಿಬ್ಯೂನಲ್ ಮಾಡಿದರೂ ಹೈಕೋರ್ಟಿಗೆ ಬರತಕ್ಕದ್ದು ಇಲ್ಲವೇ ? ಅದು ಇದ್ದಮೇಲೆ ನಿಮ್ಮ ಸಾಧನೆ ಎಷ್ಟು ಆಗಿದೆ ಎಂದು ಹೇಳಬೇಕು. ಇನ್ನು ಕನ್ನಡ ಪಾಪು ಅವರ ಬಗ್ಗೆ ಚರ್ಚೆಯಾಗಿದೆ. ಪಾಪು ಅಂದರೆ ಮಗು. ಮಗು ಚೇಷ್ಟೆ ಮಾಡುತ್ತದೆ ಅಂದರೆ ರಾಕ್ಷಸ ಅವತಾರ ತಾಳಿ ಈ ಪರಿಸ್ಥಿತಿಗೆ ಬಂದಿದೆ. ಈಗ ತಾವು ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಿ. ಆದ್ದರಿಂದ ಅದರ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಅಲ್ಪಸಂಖ್ಯಾತರ ರಕ್ಷಣೆಗಾಗಿ ಒಂದು ಉಪ ಸಮಿತಿ ನೇಮಕವಾಗಿದೆ ಎಂದು ಹೇಳಿದ್ದೀರಿ. ಆ ಸಮಿತಿಯ ಕೆಲಸ ಏನು ? ಅದರ ಕಾರ್ಯ ವ್ಯಾಪ್ತಿ ಏನು ? ಅದರ ಕಾರ್ಯಸಾಧನೆ ಏನು ಎಂಬುದನ್ನು ತಿಳಿಯಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ಅದಕ್ಕೆ ಅಧ್ಯಕ್ಷರಾಗಿದ್ದರೂ ಸಹ ಅಲ್ಪಸಂಖ್ಯಾತರಿಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ರಕ್ಷಣೆ ಸಿಕ್ಕುವುದಿಲ್ಲವೆಂದು ಹೇಳುವುದಾದರೆ ಆ ಸಮಿತಿ ಇರುವುದು ನಿರರ್ಥಕ ಎಂದು ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ಇದರ ಸಂಪೂರ್ಣ ಜವಾಬ್ದಾರಿಯನ್ನು ಅವರೇ ಹೊರಬೇಕು.

ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ heard melodies are sweet. Those unheard are sweeter. ಕೇಳಿದಂಥ ಸಂಗೀತ ಬಹಳ ಚೆನ್ನಾಗಿದೆ ಎನಿಸಬಹುದು. ಆದರೆ ಕೇಳದೇ ಇರುವಂಥ ಸಂಗೀತ ಇನ್ನೂ ಚೆನ್ನ ಅನಿಸುತ್ತದೆ. ಇಷ್ಟರವರೆಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ unheard malodies ಅಂತ ನಾನು ಭಾವಿಸಿಕೊಂಡಿದ್ದೇನೆ. ಇದಕ್ಕೆ ಒಂದು ಅವಕಾಶ ಸಿಕ್ಕಿದಾಗ ಹೇಳುತ್ತೇನೆ. ನಮ್ಮಲ್ಲಿ ಕರ್ನಾಟಕ ಸರ್ಕಾರ ವಹಿಸಿಕೊಂಡಿರತಕ್ಕ ಚಿತ್ರ ಪ್ರಪಂಚದಲ್ಲಿ ಬಹಳಷ್ಟು ವಿಚಿತ್ರಗಳು ನಡೆಯುತ್ತಿವೆ. ಅದು ಆಗಬಾರದು, ಅಲ್ಲಿ ಏನು ವಿಚಿತ್ರಗಳು ನಡೆಯುತ್ತಿವೆ ಎಂಬುದನ್ನು ನಾನು ಸ್ವಲ್ಪದರಲ್ಲೇ ಹೇಳುತ್ತೇನೆ. ಅದು ಬೇರೆ ಬೇರೆ ಇಲಾಖೆಗಳ ಮುಖಾಂತರ ಸಾಕ್ಷ್ಯ ಚಿತ್ರಗಳನ್ನು ತಯಾರು ಮಾಡತಕ್ಕ ಜವಾಬ್ದಾರಿಯನ್ನು ಈ ಸರ್ಕಾರ ಹೊತ್ತುಕೊಳ್ಳುತ್ತದೆ, ಇದನ್ನು ಮಾಡುವಂಥ ಸಂದರ್ಭದಲ್ಲಿ ತನ್ನ ಭರವಸೆಗಳನ್ನು ಗಾಳಿಗೆ ತೂರುವಂಥ ಪ್ರಯತ್ನಗಳಾಗುತ್ತಿವೆ. ಮಾನ್ಯ ಸದಸ್ಯರಾದ ನಾರಾಯಣಕುಮಾರ್‌ರವರು ಅಧ್ಯಕ್ಷರಾಗಿದ್ದಂಥ ಸಮಿತಿಯಲ್ಲಿ ನಮ್ಮ ಶ್ರೀರಂಗರವರು ತೀರಿಕೊಂಡಾಗ ಮಾನ್ಯ ಮುಖ್ಯ ಮಂತ್ರಿಗಳು ಅವರ ಶವವನ್ನು ನೋಡುವುದಕ್ಕೆ ಹೋದಾಗ ಶ್ರೀರಂಗರ ಮೇಲೆ ಒಂದು ಸಾಕ್ಷ್ಯ ಚಿತ್ರವನ್ನು ನಾವು ತೆಗೆಯುತ್ತೇವೆಂದು ಹೇಳಿದರು. ಆದರೆ ಆ ಸಾಕ್ಷ್ಯ ಚಿತ್ರ ಇಷ್ಟರವರೆಗೆ ತಯಾರಾಗಲಿಲ್ಲ. ಅನಂತರ ಇನ್ನೊಂದು ಘೋಷಣೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದರು. ಅದು ಏನೆಂದರೆ. ತಗಡೂರು ರಾಮಚಂದ್ರರಾಯರ ಸಾಕ್ಷ್ಯ ಚಿತ್ರವನ್ನು ತಯಾರಿಸುವುದು. ಆದರೆ ಅದರ ಸಮಾಧಿಯೂ ಕೂಡ ಆಗಿದೆ. ಅದರ ಸಾಕ್ಷ್ಯ ಚಿತ್ರವೂ ಬರುತ್ತಿಲ್ಲ. ಹಣದ ಅಡಚಣೆ ಇದೆಯೆಂದು ಇವರು ಹೇಳುವುದಾದರೆ, ಇವರು ಯಾರ ಸಾಕ್ಷ್ಯ ಚಿತ್ರಗಳನ್ನು ತಯಾರು ಮಾಡುತ್ತೇವೆಂದು ಹೊರಟರೋ ಅವೆಲ್ಲವನ್ನೂ ಬದಿಗಿಟ್ಟು ಅವೆಲ್ಲರಿಗಿಂತ ನಾನೇ ಇದ್ದೇನಲ್ಲಾ ನನ್ನ ಮೇಲೆಯೇ ಏತಕ್ಕೆ ಒಂದು ಸಾಕ್ಷ್ಯ ಚಿತ್ರವನ್ನು ಮಾಡಿಕೊಳ್ಳಬಾರದು ಎಂದು ಮಾನ್ಯ ಮುಖ್ಯ ಮಂತ್ರಿಗಳು "A Day with the C.M." ಎನ್ನುವಂಥ ಸಾಕ್ಷ್ಯ ಚಿತ್ರವನ್ನೂ ಮತ್ತು ಅದರ ಜೊತೆಗೆ ಕರ್ನಾಟಕ ರಾಜ್ಯದ ಅಭಿವೃದ್ಧಿ ಎಂಬುದನ್ನು ನಿರ್ಮಾಣ ಮಾಡುತ್ತಿದ್ದಾರೆ. ಆದರೆ ತಗಡೂರು ರಾಮಚಂದ್ರರಾಯ

ರದ್ದೂ ಸಾಕ್ಷ್ಯ ಚಿತ್ರ ಇಲ್ಲ ಮತ್ತು ಶ್ರೀರಂಗರದ್ದೂ ಸಾಕ್ಷ್ಯ ಚಿತ್ರ ಇಲ್ಲ. ಈ ರೀತಿ ಅವರುಗಳ ಹೆಸರುಗಳು ಹುದುಗಿ ಹೋಗುವಂತಾಯಿತು.

ಇನ್ನು ಕನ್ನಡ ಚಿತ್ರಗಳು ಕಲಾತ್ಮಕವಾಗಿದ್ದರೆ, ಅದರ ಪ್ರತಿಷ್ಠೆಯನ್ನು ಜಾಸ್ತಿ ಮಾಡುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಯಿತು. ನಾನು ಆ ಸಮಿತಿಯ ಬಗ್ಗೆ ಕೇಳಿದಾಗ ನನಗೆ ಒಂದು ಅತ್ಯಂತ ಆಶ್ಚರ್ಯವಾಯಿತು. ಆ ಕನ್ನಡ ಕಲಾತ್ಮಕ ಚಿತ್ರಗಳ ಸಮಿತಿಯಲ್ಲಿ ಇರತಕ್ಕ ಜನರು ಎಂದರೆ ಶಶಿಕಪೂರ್, ಶಬ್ನಾ ಆಜ್ಮಿ, ಅಮೋಲ್ ಪಾಲೇಕರ್, ಇನ್ನೂ ಕೆಲವರು ಸುಮಾರಾಗಿ ಕನ್ನಡ ಗೊತ್ತಿದ್ದವರು. ಇವರು ನಮ್ಮ ಕನ್ನಡ ಚಿತ್ರಗಳ ಬಗ್ಗೆ ತೀರ್ಮಾನವನ್ನು ಮಾಡುವವರು. ಇನ್ನೊಂದು ವಿಚಾರ ಎಂದರೆ, ಬಾಂಬೆ ಫಿಲಂ ಇಂಡಸ್ಟ್ರಿಯಲ್ಲೂ ಸಹ ಪಾರ್ಲಿಮೆಂಟ್ ಸದಸ್ಯರಾದ ಅಮಿತಾಬಚ್ಚನ್‌ರವರ ವಿರುದ್ಧವಾಗಿ ಇನ್ನೊಂದು ಗುಂಪನ್ನು ಕಟ್ಟಬೇಕು ಎನ್ನುವಂಥ ನೇರವಾದ ಪಿತೂರಿಯನ್ನು ಇವರು ಮಾಡಿದ್ದಾರೆಯೇ ವಿನಃ ಬೇರೆ ಏನೂ ಇಲ್ಲ. ಆದರೆ ಇವರಲ್ಲಿ ಏನಾಯಿತು? ಫಿಲಂ ಚೇಂಬರ್‌ನಲ್ಲಿ ವಿರೋಧ ಬಂತು. ಎಲ್ಲರ ವಿರೋಧದಿಂದಾಗಿ ಆ ಸಮಿತಿಯನ್ನು ಅಲ್ಲಿಗೇ ರದ್ದು ಮಾಡಿದ್ದಾಯಿತು. ರಾಜ್ಯದ ಚಲನಚಿತ್ರ ಪ್ರಶಸ್ತಿ ಸಮಿತಿಗೆ ೧೯೮೪–೮೫ರಲ್ಲಿ ಶ್ರೀರಂಗರವರನ್ನು ಅಧ್ಯಕ್ಷರನ್ನಾಗಿ ಮಾಡಿದಾಗ ಡಾ|| ಅನಂತಮೂರ್ತಿ ಎನ್ನುವವರೊಬ್ಬರನ್ನು ಸದಸ್ಯರನ್ನಾಗಿ ಮಾಡಿದರು. ಅವರು ಒಂದು ಸಾರಿಯಾದರೂ ಆ ಮೀಟಿಂಗ್‌ಗೆ ಬರಲೇ ಇಲ್ಲ. ಎರಡನೆಯ ಸಾರಿ ಶ್ರೀ ಪ್ರಕಾಶ್ ಎನ್ನುವವರನ್ನು ನೇಮಕ ಮಾಡಿದರು. ಆ ಪ್ರಕಾಶ್‌ರವರು ಯಾರು ಎಂದು ಇದುವರೆಗೂ ಪತ್ತೆ ಆಗಲಿಲ್ಲ. ಹಿಂದೆ ಬಾಟ್ಲಿಂಗ್ ಪ್ರಕರಣದಲ್ಲಿ ಯಾವರೀತಿ ಅಡ್ರೆಸ್‌ಗಳೇ ಪತ್ತೆ ಯಾಗಲಿಲ್ಲವೋ ಅದೇರೀತಿ ಇಲ್ಲಿಯೂ ಕೂಡ ಬೇನಾಮಿ ಪ್ರಕಾಶ್‌ರವರು ಹೋಗಿ ತೀರ್ಮಾನ ಮಾಡುತ್ತಾರೆ. ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಈ ಸಮಿತಿಯವರು ಪ್ರಶಸ್ತಿಗಳ ಬಗ್ಗೆ ಫಲಿತಾಂಶವನ್ನು ಕೊಟ್ಟರು. ಈ ಫಲಿತಾಂಶ ಬರುವುದಕ್ಕೆ ಮುಂಚಿತವಾಗಿ ಪತ್ರಿಕೆಗಳಲ್ಲಿ ಅದು ಪ್ರಕಟವಾಗುತ್ತದೆ. ಅನಂತರ ಫಲಿತಾಂಶಗಳು ಅಧಿಕೃತವಾಗಿ ಪ್ರಕಟವಾಗತಕ್ಕ ಒಂದು ಪದ್ಧತಿ ಇದೆ. ಮುಖ್ಯವಾಗಿ ೧೯೮೫–೮೬ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ವಹಿಸಿಕೊಂಡಂಥ ಸಂದರ್ಭದಲ್ಲಿ ಇನ್ನೊಂದು ಸಮಿತಿಯನ್ನು ನೇಮಕ ಮಾಡಿದರು. ಅದಕ್ಕೆ ಗಿರೀಶ್ ಕಾರ್ನಾಡ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದಿದ್ದಾಗ ಎಲ್ಲರೂ ಬ್ರಾಹ್ಮಣರಾದರೆ ಅದು ಸರಿಹೋಗುವುದಿಲ್ಲ. ಆದ್ದರಿಂದ ಬೇರೆ ಯಾರನ್ನಾದರೂ ನೇಮಕ ಮಾಡಬೇಕೆಂದು ಹೇಳಿದರಂತೆ. ಆಗ ಆ ಸಮಿತಿಗೆ ಶ್ರೀಮತಿ ಬಿ. ಸರೋಜಾದೇವಿಯವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದರು. ಅನಂತರ ಉಳಿದವರು ಬಿ. ಎಸ್. ರಂಗ. ಅನಂತಸ್ವಾಮಿ, ಶೈಲೇಶ್ ಯಾರು ಯಾರೋ ಉಳಿದುಕೊಂಡರು. ಈ ಮೂರು ಜನ ರಾಜೀನಾಮೆಯನ್ನು ಕೊಟ್ಟು ಖಾಲಿಯಾದ ಜಾಗಗಳಿಗೆ ನೇಮಕಾತಿ ಆಗುವ ಬದಲು ಅವಸರ ಅವಸರದಲ್ಲಿ ಚಿತ್ರಗಳನ್ನು ನೋಡಿಕೊಂಡು ತೀರ್ಮಾನ ಬರೆಯಲಿಕ್ಕೆ ಶುರು ಮಾಡಿದರು ಅವಸರ ಅವಸರದಲ್ಲಿ ತೀರ್ಮಾನ ತೆಗೆದುಕೊಂಡರೂ ಸಹ ಮಾನ್ಯ ಮುಖ್ಯಮಂತ್ರಿಗಳ ಟೇಬಲ್‌ಗೆ ಕೊನೆಯ ತೀರ್ಮಾನಕ್ಕೋಸ್ಕರವಾಗಿ, ಘೋಷಣೆಗಾಗಿ ಹೋಗಿ ಸುಮಾರು ೩೫ ದಿವಸಗಳ ಕಾಲ ಫಲಿತಾಂಶ ಪ್ರಕಟಣೆಯಾಗಲಿಲ್ಲ. ಡಿಸೆಂಬರ್ ೧೦ನೇ ತಾರೀಖಿನಿಂದ ಜನವರಿ ೧೫ನೇ ತಾರೀಖಿನವರೆಗೆ ಪ್ರಶಸ್ತಿ ಪ್ರಕಟಣೆಯಾಗಲಿಲ್ಲ. ಆಮೇಲೆ ಚುನಾವಣೆಗಳು ನಡೆಯಿತು ಆ ಚುನಾವಣೆಯಲ್ಲಿ ಪ್ರಚಾರಕ್ಕೆ ಚಲನಚಿತ್ರರಂಗದಲ್ಲಿ ಯಾರು ಯಾರು ಹೋಗಿದ್ದರು ಎನ್ನುವುದೆಲ್ಲ ನಮಗೆ ಗೊತ್ತಿದೆ. ಅವರು ವಾಪಸ್ ಬಂದ ಕೂಡಲೇ ಅವರಿಗೆ ಒಂದು ಕಾಣಿಕೆಯ ರೂಪದಲ್ಲಿ ಕೊಡಲು ಮಾನ್ಯ ಶ್ರೀ ಅನಂತನಾಗ್ ಅವರನ್ನು ಒಬ್ಬ ಶ್ರೇಷ್ಠ ನಟ ಎಂದು ಘೋಷಣೆ ಆಯಿತು. ಏತಕ್ಕೆಂದು ಹೇಳುವುದಿಲ್ಲ, ನಟರ ಬಗ್ಗೆ ತೀರ್ಮಾನ ಮಾಡುವುದು ನಾನಲ್ಲ. ಆದರೆ ಸಮಿತಿಯ ವರದಿಯಲ್ಲಿ ಡಾ|| ರಾಜಕುಮಾರ್‌ರವರು ಶ್ರೇಷ್ಠ ನಟ ಎಂದು ಆಗಬೇಕಾಗಿತ್ತು. ಆದರೆ ಅವರು ಮೂರು ವರ್ಷ ಪ್ರಶಸ್ತಿಯನ್ನು ಪಡೆದಿದ್ದರಿಂದ ಮತ್ತೆ ಅವರಿಗೆ ಕೊಡಬಾರದು ಎನ್ನುವ ಕಾರಣದಿಂದ ಅವರಿಗೆ ಪ್ರಶಸ್ತಿಯನ್ನು ಕೊಡುವಂತಿಲ್ಲವೆಂದು ಹೇಳಿ ಉಳಿದ ನಟರಿಗೆ ಕೊಡಬೇಕು ಎಂದು ಶ್ರೀಮಾನ್ ಜಿ. ವಿ. ಐಯರ್‌ರವರು ಅಧ್ಯಕ್ಷರಾಗಿದ್ದಂಥ ಕಾಲದಲ್ಲಿ ಪ್ರಥಮ ಪ್ರಶಸ್ತಿಗೆ ಅವಕಾಶವಿಲ್ಲವೆಂದು ಹೇಳಿ ಯಾವುದೇ ಚಿತ್ರಕ್ಕೆ ಪ್ರಥಮ ಪ್ರಶಸ್ತಿಯನ್ನು ಕೊಡದೆ ಎರಡನೇ ಚಿತ್ರ ಶ್ರೀಮಾನ್ ಬರಗೂರ್‌ರವರ ಚಿತ್ರಕ್ಕೆ ಎರಡನೇ ಪ್ರಶಸ್ತಿಯನ್ನು ಕೊಟ್ಟರು. ಡಾ|| ರಾಜಕುಮಾರ್‌ರವರಿಗೆ ಎರಡನೇ ಪ್ರಶಸ್ತಿಯನ್ನು ಕೊಡಬಾರದು, ಏತಕ್ಕೆಂದರೆ ಟೆಕ್ನಿಕಲ್ ಪ್ರಾಬ್ಲಮ್ಸ್ ಬರುತ್ತದೆ ಎಂದು ಭಾವಿಸಿದಾಗ ಪ್ರಥಮ ಸ್ಥಾನ ಕೊಡದೆ ಎರಡನೇ ಸ್ಥಾನವನ್ನು ಘೋಷಣೆ ಮಾಡಿದರು. ಅಲ್ಲಿ ಮಾಡಿದ್ದು ಏನು. ಒಂದು ಪ್ರಮುಖ ಪಾತ್ರವನ್ನು ಮಾಡಿದಂಥ ಅಂಬರೀಶ್‌ರವರಿಗೆ ಪೋಷಕ ನಟ ಎಂದು ಪ್ರಶಸ್ತಿಯನ್ನು ಕೊಟ್ಟು ಘೋಷಿಸಿದರು. ಅವರು ಪ್ರಶಸ್ತಿಯನ್ನು ತೆಗೆದುಕೊಳ್ಳುವಾಗ

ಒಂದು ಮಾತನ್ನು ಹೇಳಿದ್ದರು. ಅವರು ಹೇಳಿರುವುದೆಲ್ಲ ಪತ್ರಿಕೆಗಳಲ್ಲಿ ಬಂದಿದೆ. ನನ್ನಲ್ಲಿ ಎಲ್ಲ ಪತ್ರಿಕೆಗಳು ಇದೆ. ಅವರು ಹೇಳಿದ್ದೇನೆಂದರೆ ಜನತಾಪಕ್ಷದ ಪ್ರಶಸ್ತಿಯನ್ನು ತೆಗೆದುಕೊಳ್ಳಲಿಕ್ಕೆ ನನಗೆ ಮನಸ್ಸಿಲ್ಲ, ಆದರೆ ಮಾನ್ಯ ಪುಟ್ಟಣ್ಣನವರ ಚಿತ್ರವಾದುದರಿಂದ ಅವರಿಗೆ ಗೌರವ ಕೊಡುವ ಸಲುವಾಗಿ ಪ್ರಶಸ್ತಿಯನ್ನು ಸ್ವೀಕಾರ ಮಾಡುತ್ತಿದ್ದೇವೆಂದು ಹೇಳಿದರು. ಆದರೆ ಅವರಿಗೆ ಕೊಡುವುದನ್ನು ನೋಡಿ ಅನಂತ್‌ನಾಗ್‌ರವರಿಗೆ ಪ್ರಶಸ್ತಿಯನ್ನು ಕೊಡುವ ಬಗ್ಗೆ ಅಸೂಯೆ ಏನೂ ಇಲ್ಲ. ಅನಂತ್ ನಾಗ್‌ರವರಿಗೆ ಪ್ರಶಸ್ತಿಯನ್ನು ಕೊಡುವಾಗ ನಾನು ಒಂದು ಮಾತನ್ನು ಹೇಳುತ್ತೇನೆ. ಪ್ರಶಸ್ತಿಯನ್ನು ಕೊಡುವಾಗ ಕೆಲವು ನಿಯಮಾವಳಿಗಳಿಗಾಗಿ ವಿರುದ್ಧವಾಗಿ ಹೋಗುವಂಥ ವ್ಯಕ್ತಿಗಳಿಗೆ ಪ್ರಶಸ್ತಿಯನ್ನು ಕೊಡಬಾರದು ಎಂದು ಇದೆ. ಮತ್ತೊಂದು ನಿಯಮವೇನೆಂದರೆ ಪ್ರಶಸ್ತಿಗೆ ಕಳುಹಿಸಿಕೊಟ್ಟ ಯಾವುದೇ ವ್ಯಕ್ತಿ ಇರಲಿ, ಅದಕ್ಕೆ ಸಂಬಂಧಪಟ್ಟ ಯಾವುದೇ ವ್ಯಕ್ತಿ ಇರಲಿ ಪ್ರಶಸ್ತಿ ಘೋಷಣೆಯಾಗುವ ಮೊದಲು ಸ್ವಯಂ ಪ್ರಚಾರ ಮಾಡಿಕೊಳ್ಳಬಾರದೆಂದು ಇದೆ. ಆದರೆ ಶ್ರೀಮಾನ್ ಅನಂತ್‌ನಾಗ್‌ರವರು ತಮ್ಮದೇ ಆದ ಗಾಂಧಿ ಪ್ರಚಾರ ಮಾಡಿಕೊಂಡಿದ್ದಾರೆ. ೧೧ನೇ ತಾರೀಖು ಅಭಿನಂದನೆಗಳನ್ನು ಹಾಕಿಕೊಂಡು ಪ್ರಚಾರ ಮಾಡಿಕೊಂಡರು. ೧೪ನೇ ತಾರೀಖು ಅಧಿಕೃತ ಪ್ರಶಸ್ತಿ ಘೋಷಣೆಯಾಗುವುದಿದ್ದರೂ ಅನಂತನಾಗ್ ಎನ್ನತಕ್ಕಂಥ ವ್ಯಕ್ತಿ ಪ್ರಶಸ್ತಿಯನ್ನು ಪಡೆಯಲಿಕ್ಕೆ ಪ್ರಚಾರ ಮಾಡಿಕೊಂಡ ಕಾರಣಕ್ಕಾಗಿ ಸಂಪೂರ್ಣವಾಗಿ ಅನರ್ಹರಾಗಿದ್ದಾರೆ. ಇದು ಕೂಡ ಸರಿಯಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಚುನಾವಣೆ ಮಾಡುವುದರಲ್ಲಿ ಯಾರಿಗಾದರೂ ಪ್ರಶಸ್ತಿಯನ್ನು ಕೊಡುವುದಾದರೆ ಒಂದಲ್ಲ ಹತ್ತು ಪ್ರಶಸ್ತಿಗಳನ್ನು ಕೊಡಿ, ಬೇಡವೆಂದು ಹೇಳುವುದಿಲ್ಲ. ಅನಂತನಾಗ್ ಸಹೋದರರಿಗೆ ಕೊಡಬೇಡಿ ಎಂದು ಹೇಳುವುದಿಲ್ಲ. ಶಂಖನಾದ ಎನ್ನುವ ಒಂದು ಚಿತ್ರ ಬಂದಿತ್ತು. ಬಹಳ ಕಾಳಜಿಯಿಂದ ಹೇಳುತ್ತೇನೆ, ಸಾಮಾಜಿಕ ಚೌಕಟ್ಟಿನಲ್ಲಿ ಎಂತೆಂಥ ಪರಿಣಾಮವಾಯಿತು ಎಂಬುದಕ್ಕೆ ಹೇಳುತ್ತೇನೆ. ಎಲ್ಲೋ ಒಂದು ಚಿತ್ರವನ್ನು ತೆಗೆದುಬಿಟ್ಟು ಅದರಲ್ಲಿ ಪೋಲೀಸ್‌ನವರ ಮೇಲೆ ಆಗುವಂಥ ದೌರ್ಜನ್ಯದ ಬಗ್ಗೆ ಚಿಂತನೆ ಮಾಡುವಂಥ ಒಬ್ಬ ವ್ಯಕ್ತಿ ಇದ್ದುದರಿಂದ ಶ್ರೀಹರ್ಷ ಎಂಟರ್‌ಪ್ರೈಸಸ್‌ನಲ್ಲಿ ತುಮಕೂರು ಜಿಲ್ಲೆ. ತುರುವೇಕೆರೆ ತಾಲ್ಲೂಕು ಸಂಪಿಗನ ಹಳ್ಳಿಯಲ್ಲಿ ಶ್ರೀಹರ್ಷ ಆಶ್ರಮದಲ್ಲಿ ಉದ್ಘಾಟನೆ ಮಾಡುವಾಗ ಆ ಚಿತ್ರ ೧೦ ದಿನಗಳು ನಡೆಯಬೇಕಾದರೆ ಅಲ್ಲಿಯ ಪ್ರಬಲ ಕೋಮಿನವರು ಚಿತ್ರದ ವಿರುದ್ಧವಾಗಿ ಪ್ರತಿಭಟಿಸಿದರು. ದಲಿತ ಒಕ್ಕೂಟ ಸಮಿತಿಯವರು ಈ ರೀತಿ ಮಾಡಬಾರದೆಂದು ಪ್ರತಿಭಟನೆ ಮಾಡಿದರು. ಆದರೆ ಮಾನ್ಯ ಜಿಲ್ಲಾಧಿಕಾರಿಗಳು ಆ ಚಿತ್ರವನ್ನು ಮುಂದೆ ಬರದ ರೀತಿಯಲ್ಲಿ ತಡೆ ಹಿಡಿದರು. ಪ್ರಶಸ್ತಿಯಲ್ಲಿ ನಿರ್ಲಕ್ಷ್ಯವಾದರೂ, ಜನರ ಮುಂದೆ ಬಂದಾಗ ಆ ಚಿತ್ರವನ್ನು ನೋಡಿ ಸಾಮಾಜಿಕ ಪರಿಣಾಮವಾಗುತ್ತದೆಂದು ಹೇಳಿ ತಡೆ ಹಿಡಿದು, ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಬಹಳವಾಗಿ ಹೇಳುವವರು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ರಕ್ಷಣೆ ಸಿಗುವುದಿಲ್ಲವೆಂದು ಹೇಳಿದರೆ ನಾಚಿಕೆಗೇಡಿನ ಪ್ರಸಂಗವೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. '' ಬೆರಳ್‌ಗೆ ಕೊರಳ್ '' ರಾಷ್ಟ್ರ ಪ್ರಶಸ್ತಿಯನ್ನು ಪಡೆದಂಥ ಮಾನ್ಯ ಕೆ. ವಿ. ಪುಟ್ಟಪ್ಪನವರ ನಾಟಕ ಆಧಾರಿತವಾಗಿ ತೆಗೆದ ಒಂದು ಚಿತ್ರ ಅದು ವಿಶೇಷ ಪ್ರಶಸ್ತಿಯನ್ನು ಪಡೆದರೂ ಸಹ ಅದು ಸುಮಾರು ೨೨ ತಿಂಗಳ ಕಾಲ ಕರ್ನಾಟಕ ರಾಜ್ಯ ಸರ್ಕಾರ ತೆರಿಗೆ ವಿನಾಯಿತಿಯನ್ನು ಪಡೆಯಲಿಲ್ಲ. ಕಾರಣವೇನೆಂದರೆ ಬೆರಳ್‌ಗೆ ಕೊರಳ್ ಹಳೆಗನ್ನಡದಲ್ಲಿ ಇದೆ ಹಳೆಗನ್ನಡ ಕನ್ನಡ ಹೌದೋ ಅಲ್ಲವೋ ಎನ್ನುವ ಜಿಜ್ಞಾಸೆಯಿಂದ ೨೨ ತಿಂಗಳಕಾಲ ಚಿತ್ರವನ್ನು ಮಾರ್ಕೆಟ್‌ಗೆ ತರಲಾಗಲಿಲ್ಲ. ಚಿತ್ರವನ್ನು ತಡೆಹಿಡಿಯಲಾಯಿತು. ಕೊನೆಗೆ ತೀರ್ಮಾನವಾಗಿ ಮಾನ್ಯ ಕೆ. ವಿ. ಪುಟ್ಟಪ್ಪನವರ ಹಳೆಗನ್ನಡವು ಕನ್ನಡವೆಂದು ತೀರ್ಮಾನವಾದ ಮೇಲೆ ಚಿತ್ರ ಪ್ರದರ್ಶನವಾಯಿತು. ಒಬ್ಬ ರಾಷ್ಟ್ರ ಕವಿ, ನಮ್ಮ ನೆಲದ ಸುಪುತ್ರರು ರಚಿಸಿದಂಥ ನಾಟಕ ಆಧಾರಿತ ಚಿತ್ರಕ್ಕೆ ಇಂಥ ಪರಿಸ್ಥಿತಿ. ಇದನ್ನು ತೀರ್ಮಾನ ಮಾಡುವಂಥ ಜನರ ಪರಿಸ್ಥಿತಿ ಹೀಗಾದರೆ, ಇವರು ಅಂಥ ಒಂದು ಜವಾಬ್ದಾರಿ ಸ್ಥಾನದಲ್ಲಿ ಇರಲಿಕ್ಕೆ ಅರ್ಹರಲ್ಲವೆಂದು, ನಾನಾದರೂ ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ೧೯ ಜಿಲ್ಲೆಗಳ ಮೇಲೆ ಸಾಕ್ಷ್ಯ ಚಿತ್ರವನ್ನು ತೆಗೆಯಬೇಕೆಂದು ಹೇಳಿ ಒಂದು ಜಿಲ್ಲೆಗೆ ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳನ್ನು ಫಿಕ್ಸ್ ಮಾಡಿ ಅನಂತನಾಗ್‌ರವರಿಗೆ ಕಾಂಟ್ರಾಕ್ಟ್ ಕೊಟ್ಟರು. ಅದಕ್ಕೆ ಬೇರೆ ಯಾರೂ ಅಲ್ಲ ಪ್ರತಿಭಟನೆ ಮಾಡಿದ್ದು, ಬಿ. ಎಸ್. ರಂಗರವರು ಪ್ರತಿಭಟನೆ ಮಾಡಿದಾಗ ಅದನ್ನು ವಾಪಸ್ ತೆಗೆದುಕೊಂಡರು. ಒಂದೊಂದು ಜಿಲ್ಲೆಗೂ ಒಬ್ಬೊಬ್ಬ ಪ್ರೊಡ್ಯೂಸರ್‌ನ್ನು ಕಳುಹಿಸಿಕೊಟ್ಟು ಮತ್ತೆ ಸಾಕ್ಷ್ಯಚಿತ್ರವನ್ನು ತೆಗೆಯಬೇಕೆಂದು ಕಳುಹಿಸಿಕೊಡಲಾಯಿತು. ಹಣದ ಕೊರತೆ ಇದೆ ಎಂದು ಸಬ್ಸಿಡಿಗಳನ್ನು ಕಂತುಗಳನ್ನು ಕೊಡುವುದು ಇದೆ. ಆದರೆ ಎಲ್ಲೆಲ್ಲಿ ಹಣ ಪೋಲಾಗುತ್ತದೆ ಅದನ್ನು ತಡೆಗಟ್ಟುವ ಹಾಗೆ ಇಲ್ಲ. ಇನ್ನೊಂದು ವಿಚಾರ ಹೇಳುತ್ತೇನೆ. 'ಕರ್ನಾಟಕದಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ' ಎಂಬ ಕಾರ್ಯಕ್ರಮದ ಬಗ್ಗೆ ಒಂದು ಸಾಕ್ಷ್ಯ ಚಿತ್ರವನ್ನು ತೆಗೆಯಬೇಕೆಂದು ಇತ್ತೀಚೆಗೆ ಸರ್ಕಾರಕ್ಕೆ ಮನಸ್ಸಾಯಿತು. ಆದ ಕೂಡಲೇ

ಒಬ್ಬ ವ್ಯಕ್ತಿ ಮುಂಚಿತವಾಗಿಯೇ ಗೊತ್ತಾದರು. ಅವರ ಹೆಸರು ರಹಮದ್ ಜಮೇಲ ಎಂದು. ಅವರ ಪ್ರವಾಸ ಕಾರ್ಯಕ್ರಮವನ್ನೆಲ್ಲಾ ಗುಲ್ಬರ್ಗದ ಡಿ.ಸಿ.ಯವರು ಹಾಕುತ್ತಿದ್ದಾರೆ. ಇಷ್ಟು ದೊಡ್ಡ ಪ್ರಾಜೆಕ್ಟ್ ಮಾಡಿ ಚಿತ್ರ ತೆಗೆಯಲು ಕರ್ನಾಟಕ ರಾಜ್ಯದಲ್ಲಿ ಕನ್ನಡ ಬಲ್ಲವರು ಯಾರೂ ಇರಲಿಲ್ಲವೇ? ಕನ್ನಡ ಬಲ್ಲವರು ಹಾಗೂ ಸಾಕ್ಷ್ಯ ಚಿತ್ರಗಳನ್ನು ನಿರ್ಮಾಣ ಮಾಡಿದ ಅನೇಕ ಜನ ನಿರ್ದೇಶಕರು ಇರುವಾಗ ಕನ್ನಡ ಬಾರದೆ ಇರುವ ವ್ಯಕ್ತಿ ಗ್ರಾಮೀಣ ಜನತೆಯ ಜೊತೆ ಎಷ್ಟರ ಮಟ್ಟಿಗೆ ಸಂಭಾಷಣೆ ಮಾಡಿಯಾರು? ಇದು ಎಲ್ಲಿಯವರೆಗೆ ಬಂದಿದೆ ಎಂದರೆ ಚಿತ್ರಕ್ಕಾಗಿ ಕಾಂಟ್ರಾಕ್ಟ್ ಕೊಟ್ಟು ೩೫ MM ನಲ್ಲಿ ಚಿತ್ರ ತೆಗೆದರು. ಆ ಚಿತ್ರ ಫ್ಲಾಫ್ ಆಯಿತು. ನಂತರ ವಿಡಿಯೋ ಸೆಟ್ಟಿಂಗನ್ನು ಅವರ ಹತ್ತಿರವೇ ಮಾಡಿಸುತ್ತಿದ್ದಾರೆ. ಇದಕ್ಕೆಲ್ಲಾ ಎಷ್ಟು ಹಣ ಖರ್ಚಾಗಿದೆ? ರಹಮದ್ ಜಮೇಲ ಎಂಬ ವ್ಯಕ್ತಿಗೂ, ಚಲನಚಿತ್ರಕ್ಕೂ ಸರ್ಕಾರ ಏಕಾಏಕಿ ಹಣ ಕೊಡುವುದಾದರೆ ನಮ್ಮಂಥವರು ಯಾವ ರೀತಿ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕು. Who is this R hmat Jamal? "I am Rahmat Jamal speaking". "Who are you, Madam?" "Nonsense. You don't know who I am?" ಆಮೇಲೆ ಮಂತ್ರಿಗಳಿಗೆ ನೇರವಾಗಿ ಫೋನ್ ಹೋಗುತ್ತದೆ. He will introduce her to the Dept. ಇಂಥ ಪರಿಸ್ಥಿತಿ ಬಂದಿದೆ. ಇದೇ ರೀತಿಯಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಏನಿದೆ ಅಲ್ಲಿ ಇನ್ನೊಂದು ಸಾಕ್ಷ್ಯ ಚಿತ್ರವನ್ನು ತೆಗೆಯಲು ಪ್ರಾರಂಭಿಸಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ಇವರು ಹೇಳುವುದರಲ್ಲಿ ಎಷ್ಟು ಪರ್ಸೆಂಟ್ ಸತ್ಯ ಇದೆ?

ಶ್ರೀ ಬಿ.ಎ. ಉಮರಬ್ಬ.—ನೀವೇ ಹೇಳಿ ಉತ್ತರದಲ್ಲಿ. Rahmat Jamal ಎಂಬುವವರಿಗೆ ಸರ್ಕಾರದ ವತಿಯಿಂದ ಮುಂಗಡ ಹಣ ಕೊಟ್ಟು ಎಲ್ಲಾ ವ್ಯವಸ್ಥೆ ಮಾಡಿದ್ದಾರೆ. ಆದರೆ ರಹಮದ್ ಜಮಾಲ್ ಅವರು ಚಿತ್ರ ತೆಗೆಯುತ್ತೇನೆಂದು ರಿಜಿಸ್ಟರ್ ಮಾಡಿಸಿಕೊಳ್ಳಬೇಕಾಗಿತ್ತು. ಆ ರಿಜಿಸ್ಟ್ರೇಷನ್ ಕೂಡ ಆಗಿಲ್ಲ. ಈ ಮಾತುಗಳು ಸುಳ್ಳಾದರೆ ಕ್ಷಮೆ ಯಾಚಿಸಿ ನನ್ನ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಲಿಕ್ಕೆ ತಯಾರಿದ್ದೇನೆ. ಪ್ರವಾಸೋದ್ಯಮ ಇಲಾಖೆಯಲ್ಲಿ ೧೪ ಲಕ್ಷ ರೂಪಾಯಿನ ಒಂದು ಪ್ರಾಜೆಕ್ಟ್ ಮಾಡಿ ಡೆಲ್ಲಿಯ ದೂರದರ್ಶನದಲ್ಲಿ ನ್ಯೂಸ್ ಓದುವ ಮಿನು ತಲ್ವಾರ್ ಎಂಬುವವರನ್ನು ಎರವಲು ತಂದು ಚಿತ್ರ ತೆಗೆಯಿರಿ ಎಂದು ಅವರಿಗೆ ಮುಂಗಡವಾಗಿ ೪ ಲಕ್ಷ ರೂಪಾಯಿಗಳನ್ನು ಕೊಟ್ಟು ಅನೇಕ ತಿಂಗಳಾದರೂ ಚಿತ್ರ ಪ್ರಾರಂಭವಾಗಲಿಲ್ಲ. ಡೆಲ್ಲಿ ದೂರದರ್ಶನದಲ್ಲಿ ಸುದ್ದಿ ಓದುವ ಮಿನು ತಲ್ವಾರ್ ಅವರಿಗೂ ಕರ್ನಾಟಕದ ಪ್ರವಾಸೋದ್ಯಮ ಇಲಾಖೆಗೂ ಯಾವ ಸಂಬಂಧ? ಆ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಬಾಂಧವ್ಯ ಕಲ್ಪಿಸುವ ವ್ಯವಸ್ಥೆ ಆಗಿದೆ ಎಂದು ಭಾವಿಸೋಣವೇ? ಆ ರೀತಿ ಪ್ರಭಾವ ಬೀರಿ ಟಿ.ವಿ.ಯ ೨ನೇ ಚಾನಲ್ ಗಳಿಸುವ ಸಾಧನೆ ಮಾಡಿದ್ದೀರಾ? ಅವರಿಗೆ ಏಕೆ ಈ ಟ್ರೀಟ್‌ಮೆಂಟ್?

ಶ್ರೀ ಡಿ.ಟಿ. ಜಯಕುಮಾರ್.—ತಾವು ಪಕ್ಷಪಾತ ಮಾಡುತ್ತಿದ್ದೀರಿ. ನಮಗೆ ಹತ್ತು ನಿಮಿಷ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಟ್ಟು ಅವರಿಗೆ ಅರ್ಧ ಗಂಟೆ ಕೊಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಬೇಗ ಮುಕ್ತಾಯ ಮಾಡಿ.

ಶ್ರೀ ಬಿ.ಎ. ಉಮರಬ್ಬ.—ಅಲ್ಲಿ ಫೋನ್ ಮಾಡಿಕೊಂಡು. ನಾನು ಮಿನು ಮಾತನಾಡುತ್ತಿರುವುದು ಎಂದು ಹೇಳುತ್ತಾರೆ. ಮಿನು ಯಾರು ಎಂದು ವಾರ್ತಾ ಇಲಾಖೆಗೆ ಗೊತ್ತಿಲ್ಲ. ಅಲ್ಲಿ ಭಯದ ವಾತಾವರಣ ಮೂಡಿಸಿದ್ದೀರಿ.

ಅಧ್ಯಕ್ಷರು.—ತಾವು ಮುಕ್ತಾಯ ಮಾಡುತ್ತೀರೋ ಇಲ್ಲವೋ?

ಶ್ರೀ ಬಿ.ಎ. ಉಮರಬ್ಬ.—ಲಾಸ್ಟ್...

ಅಧ್ಯಕ್ಷರು.—ಲಾಸ್ಟ್ ಅಂದರೆ ಎಷ್ಟು, ಎಷ್ಟು ಸಾರಿ ಲಾಸ್ಟ್ ಎಂದು ಹೇಳುತ್ತಿರುವುದು?

ಒಬ್ಬ ಮಾನ್ಯ ಸದಸ್ಯರು.—ಅವರು ಕಥೆ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎ. ಉಮರಬ್ಬ.—ವಾರ್ತಾ ಇಲಾಖೆಯಲ್ಲಿ ಇದ್ದ ಪಿ.ಎನ್.ಎಸ್. ರೆಡ್ಡಿ ಅವರನ್ನು ಕ್ಷಣ ಮಾತ್ರದಲ್ಲಿ ಬೆಳಗಾಗೆ ವರ್ಗ ಮಾಡಿದ ಜನ ಯಾರು ಎಂಬುದನ್ನು ಕೇಳಿಕೊಂಡು ಬನ್ನಿ ರಾಜವರ್ಧನ್‌ರವರೆ. ಈ ಮಿನು ತಲ್‌ವಾರ್‌ಗೆ ಫೋನ್ ಕೊಟ್ಟು, ಎಲ್ಲಾ ಕೊಟ್ಟು ಅವರನ್ನು ಕಂಡರೆ ಎಲ್ಲ ಹೆದರುವಂಥದ್ದು ಇದೆ. ಈ ಮೀನು ತಲವಾರ್, ರಹಮತ್ ಜಮಾಲ್ ಈ ಮಹಿಳೆಯರು ಬಂದಾಗ...ಒಂದು ಕಾಲದಲ್ಲಿ ಒಂದು ಹೆಸರು ಕೇಳುತ್ತಿದ್ದೆ. ರಾಜಕೀಯದಲ್ಲಿ ಎಲ್ಲವೂ ಮಾಡುವಂಥ ಒಬ್ಬ ರುಕ್ಸಾನ ಸುಲ್ತಾನ ಎಂದು ಕೇಳಿದ್ದೆ. ಇಲ್ಲಿ ಅನೇಕ ರುಕ್ಸಾನ ಸುಲ್ತಾನರನ್ನು ಸೃಷ್ಟಿ ಮಾಡಿ ಅವರು ಕರ್ನಾಟಕದಲ್ಲಿ ತಿಗಣೆಗಳ ತರಹ ಸಂಚರಿಸುತ್ತಿದ್ದಾರೆ. ಇವು ಭೂತಾಕಾರದಲ್ಲಿ ಕರ್ನಾಟಕ ಬೊಕ್ಕಸದ ಹಣವನ್ನು ನುಂಗುತ್ತಿವೆ. ಯಾವ ಸಾರ್ಥಕತೆಯನ್ನು ಮಾಡದೆ ಈ ರೀತಿ ಹಣ ಪೋಲು ಮಾಡುತ್ತಿರುವುದು ಕರ್ನಾಟಕ ರಾಜ್ಯದ ಜನತೆಗೆ ಎಸಗುವ ಬಹಳ ದೊಡ್ಡ ದ್ರೋಹ. ಇದರ ಬಗ್ಗೆ ಸಂಪೂರ್ಣವಾದಂಥ ತನಿಖೆಯನ್ನು ನಡೆಸಿ. ಇನ್ನೂ ಅನೇಕ ವಿಚಾರಗಳನ್ನು, ಯಾರು ಯಾರಿಗೆ ಏನೇನು ಕೊಟ್ಟಿದ್ದಾರೆ ಎಂಬುದನ್ನು ತಮ್ಮ ಸರ್ಕಾರಕ್ಕೆ ಒಪ್ಪಿಸುವುದಕ್ಕೆ ತಯಾರಾಗಿದ್ದೇನೆ. ಅದನ್ನು ಸವಾಲಾಗಿ ಸ್ವೀಕಾರ ಮಾಡುವುದಕ್ಕೆ ತಯಾರಾಗಿದ್ದೇನೆ. ಇದು ಮಾಡಿಲ್ಲ, ಇದು ಮಾಡಿದ್ದೇವೆ ಎಂಬುದು ನಮಗೆ ನಿಮಗೆ ಮಾತ್ರವಲ್ಲ ಕರ್ನಾಟಕ ರಾಜ್ಯದ ಜನತೆಗೆ ಸ್ಪಷ್ಟವಾಗಬೇಕು. ಏಕೆಂದರೆ ಪ್ರತಿಯೊಂದು ಪೈಸೆಯೂ ಸಹ ಅವರ ಶ್ರಮದಿಂದ ಸಂಗ್ರಹಿಸಿರತಕ್ಕದ್ದು. ಅವರ ಬೆವರು ರಕ್ತದಿಂದ ಪಡೆದಂಥ ಹಣ. ಈ ಹಣವನ್ನು ಒಂದು ಮೀನು ತಲವಾರ್, ಒಂದು ರಹಮತ್ ಜಮೀಲ, ಒಂದು ಅನಂತನಾಗ್, ಒಂದು ಶಂಕರ್‌ನಾಗ್ ನುಂಗುವಂಥದ್ದು ಸಾಧ್ಯ ಇಲ್ಲ ಎಂದು ಸ್ಪಷ್ಟವಾಗಿ ಹೇಳಿ ಇಷ್ಟು ಅವಕಾಶ ಮಾಡಿಕೊಟ್ಟಿದ್ದಕ್ಕೆ ಕೊನೆಯದಾಗಿ ತಮಗೆ ವಂದಿಸಿ...

ಅಧ್ಯಕ್ಷರು.—ಉಮರಬ್ಬನವರೇ, ಕೇಳ್ರಿ ಇಲ್ಲಿ.

ಶ್ರೀ ಬಿ.ಎ. ಉಮರಬ್ಬ.—ಮುಂದಿನ ವರ್ಷ 'ಅವಸ್ಥೆ' ಎಂಬ ಚಲನಚಿತ್ರವನ್ನು ಮಾಡುತ್ತಿದ್ದಾರೆ. ಉತ್ತಮ ಬರಹಗಾರ ಡಾ|| ಅನಂತ ಮೂರ್ತಿ, ಉತ್ತಮ ನಟ, ಅನಂತ್ ನಾಗ್. ಉತ್ತಮ ಪೋಷಕ ನಟ ಮಾನ್ಯ ಶ್ರೀ ಜೆ.ಹೆಚ್. ಪಟೇಲ್ ಅವರು ಸಾಹಿತ್ಯದ ಬಗ್ಗೆ ಮಾತನಾಡುವ...

(ಗೊಂದಲ)

ಅಧ್ಯಕ್ಷರು.—ಮುಗಿಸುತ್ತೀರೋ ಇಲ್ಲವೋ ನೀವು?

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ನಿಮ್ಮ ಒಳ್ಳೆಯತನವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು.—ಉಮರಬ್ಬನವರೇ,...... ಎಂದು ಹೇಳಬೇಕಾಗುತ್ತದೆ ಈಗ.

(ಗೊಂದಲ)

ಶ್ರೀ ಬಿ.ಎ. ಉಮರಬ್ಬ.—ಜಾನಪದ ಕಲೆ ಬೆಳೆಯಬೇಕಾದರೆ ಹತ್ತು ವರ್ಷಗಳ...

(ಗೊಂದಲ)

ಅಧ್ಯಕ್ಷರು.—ನೀವು ಹೇಳುವುದೇನೂ ರೆಕಾರ್ಡ್ ಆಗುವುದಿಲ್ಲ.

(ಗೊಂದಲ)

MR. SPEAKER.—It will not be recorded.

(Interruptions)

MR. SPEAKER.—Nothing will go on record.

(Not recorded as ordered by the Chair)

(ಗೊಂದಲ)

ಅಧ್ಯಕ್ಷರು ...ನವರೇ ನೀವು ಛೇರ್‌ಗೆ ಅಡ್ರಸ್ ಮಾಡಿ ಮಾತನಾಡಿ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ.—ಹೀಗಾದರೆ ಈ ಮನೆಯನ್ನು ದೇವರೇ ಕಾಪಾಡಬೇಕು?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ.—ಲಂಚ ಕೊಟ್ಟು ಗೆದ್ದುಕೊಂಡು ಬಂದವರು. ಅದೂ ಲೋನ್ ಮೇಳಾ ಲಂಚ.

(ಗೊಂದಲ)

ಶ್ರೀ ಎಂ. ರಘುಪತಿ.—ನನ್ನದೊಂದು ಮನವಿ. ಈ ಮನೆಯಲ್ಲಿ ಯಾರೇ ಸದಸ್ಯರು ಯಾವುದೇ ರೀತಿಯ ಆರೋಪ ಮಾಡಲಿ. ಆದರೆ ಅಭಿನಯ ಬೇಡ. ಅಭಿನಯದಿಂದ ಏನೂ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ರಘುಪತಿ.—ಈ ಸಭೆಗೆ ಕ್ಷೋಭೆ ಬರತಕ್ಕ ರೀತಿಯಲ್ಲಿ ಯಾರಾದರೂ ವರ್ತನೆ ಮಾಡಲಿ. ಅದನ್ನು ಬಿಟ್ಟು ಹೀಗೆ ಮಾಡಿದರೆ ಹೇಗೆ? ಶ್ರೀಮಾನ್ ಬಸವಲಿಂಗಪ್ಪನವರು ಭಾಷಣ ಮಾಡುತ್ತಾರೆ, ಶ್ರೀಮಾನ್ ಕೆ.ಹೆಚ್. ಪಾಟೀಲ್‌ರವರು ಭಾಷಣ ಮಾಡುತ್ತಾರೆ, ಅವರ ಭಾಷಣ ವನ್ನು ನಾವು ಕೇಳುತ್ತೇವೆ. ಅವರು ಅಷ್ಟು ಚೆನ್ನಾಗಿ ವಿಷಯಪೂರಿತವಾದ ಭಾಷಣವನ್ನು ಮಾಡುತ್ತಾರೆ. ಅದನ್ನು ಬಿಟ್ಟು ವಿಷಯಾಂತರ ಮಾಡಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಬಿ.ಎ. ಉಪ್ಪಿನ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ಕೊಡಿ.

ಶ್ರೀ ಬಿ.ಎ. ಉಪ್ಪಿನ್.—ಪಾಯಿಂಟ್ ಆಫ್ ಆರ್ಡರ್ ಇದೆ, ಏಕೆ ಕೊಡಬೇಕು?

ಶ್ರೀ ಎಂ. ರಘುಪತಿ.—ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರಿಗೆ ೫ ನಿಮಿಷ ಹೆಚ್ಚು ಅವಕಾಶವನ್ನು ಕೊಡಲಿಲ್ಲ...

ಶ್ರೀ ಆರ್.ಎಲ್. ಜಾಲಪ್ಪ.—ಅವರು ಒಂದು ಪಕ್ಷದ ಮುಖಂಡರೇನಲ್ಲ, ಅಥವಾ ಪಕ್ಷದ ನಾಯಕರೂ ಅಲ್ಲ. ಅವರಿಗೆ ಏಕೆ ಇಷ್ಟೊಂದು ಅವಕಾಶ ಕೊಟ್ಟಿದ್ದು?

ಶ್ರೀ ಎಂ. ರಘುಪತಿ.—ಶ್ರೀಮಾನ್ ಎಂ.ಎಸ್. ಕೃಷ್ಣನ್‌ರವರು ಮಾತನಾಡಿದರೆ ಈ ಸದನಕ್ಕೇ ಬೆಳಕು ಚೆಲ್ಲುತ್ತಾರೆ. ಸರ್ಕಾರದ ಲೋಪದೋಷಗಳನ್ನು ಎತ್ತಿ ತೋರಿಸುತ್ತಾರೆ. ಸರ್ಕಾರವನ್ನು ಟೀಕೆ ಮಾಡುವುದರಲ್ಲೂ ಗುರುತರವಾದ ರೀತಿಯಲ್ಲಿ ಮಾಡುತ್ತಾರೆ. ಅದನ್ನು ಬಿಟ್ಟು ಈ ತರಹ ಮಾತನಾಡುವಂತಹವರನ್ನು ತಾವು ನಿಯಂತ್ರಣ ಮಾಡಬೇಕು.

ಅಧ್ಯಕ್ಷರು.—ಅದಕ್ಕೋಸ್ಕರವಾಗಿಯೇ ನತಿಂಗ್ ವಿಲ್‌ಬಿ ರೆಕಾರ್ಡೆಡ್ ಅಂತ ಹೇಳಿದ್ದೇನೆ. ಅವರ ಭಾಷಣ ಮುಗಿದಿದೆ, ಶ್ರೀಮಾನ್ ರೇವಣ್ಣ ಸಿದ್ದಯ್ಯನವರನ್ನು ನಾನು ಕರೆದಿದ್ದೇನೆ. ನಿಮ್ಮ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ, ಕೂಡ್ರಿ.

ಶ್ರೀ ಡಿ. ಟಿ. ಜಯಕುಮಾರ್.—ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅವರಿಗೆ ಏಕೆ ಅವಕಾಶ ಕೊಡುವುದಿಲ್ಲ?

(ಗೊಂದಲ)

ಅಧ್ಯಕ್ಷರು.—ಅವರು ಎಷ್ಟು ಟೈಮನ್ನು ತೆಗೆದುಕೊಂಡಿದ್ದಾರೋ ಅಷ್ಟೇ ಸಮಯವನ್ನು ನಿಮಗೂ ಕೊಡುತ್ತೇನೆ.

ಶ್ರೀ ಬಿ. ಎ. ಉಪ್ಪಿನ್.—ಮಾನ್ಯ ಅಧ್ಯಕ್ಷರೆ,......

ಶ್ರೀ ಆರ್. ಎಲ್. ಜಾಲಪ್ಪ.—ಈ ರೀತಿ ಸಭೆ ನಡೆದರೆ ಇದು ಯಾವ ದಿವಸ ಪೂರ್ತಿಯಾಗ ಬೇಕು? ಅವರು ಎಷ್ಟು ಸಮಯ ತೆಗೆದುಕೊಂಡರೋ ನಿಮಗೂ ಅಷ್ಟೇ ಸಮಯವನ್ನು ಕೊಡುತ್ತೇನೆಂದು ಹೇಳಿದರೆ ಹೇಗೆ? ಇದನ್ನು ಯಾವಾಗ ಮುಗಿಸುವುದು ಇನ್ನೂ ಬೇರೆ ವಿಷಯಗಳು ಇವೆ.

ಶ್ರೀ ಬಿ. ಎ. ಉಪ್ಪಿನ್.—ಅಧ್ಯಕ್ಷರೇ, ನಾನು ಮಾತನಾಡುವ ಸಮಯದಲ್ಲಿ ತಾವು ೧೨ ನಿಮಿಷಗಳಾದಮೇಲೆ ಬೆಲ್ ಹಾಕಿದ ತಕ್ಷಣ ಮಾತನಾಡಲು ಎಷ್ಟೋ ಮಹತ್ವದ ವಿಷಯಗಳು ಇದ್ದರೂ ತಮಗೆ ಗೌರವ ಕೊಟ್ಟು ಭಾಷಣ ಮುಕ್ತಾಯ ಮಾಡಿದೆ. ಆದರೆ ಉಮರಬ್ಬ ಅವರು ಘನತೆ ಗೌರವಗಳನ್ನು ಗಾಳಿಗೆ ತೂರಿ ನಾಟಕೀಯವಾಗಿ ನಿಮ್ಮ ಆದೇಶವನ್ನು ಪಾಲಿಸದವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇಲ್ಲದಿದ್ದರೆ ಈ ಸಭೆಯ ಘನತೆ ಗೌರವ ಉಳಿಯುವುದಿಲ್ಲ ವೆಂಬುದೇ ನನ್ನ ಕ್ರಿಯಾಲೋಪ.

ಅಧ್ಯಕ್ಷರು.—ಅದಕ್ಕೆ ಅವರು ಕೊನೆಯಲ್ಲಿ ಏನು ಮಾತನಾಡಿದರು ಅದೆಲ್ಲಾ ರೆಕಾರ್ಡ್ ಆಗುವುದಿಲ್ಲವೆಂದು ನಾನು ಹೇಳಿದೆನಲ್ಲಾ. ಅವರು ಎಷ್ಟು ಮಾತನಾಡಿದರು ಅಷ್ಟು ಅವಕಾಶ ನಿಮಗೂ (ಶ್ರೀ ರೇವಣಸಿದ್ಧಯ್ಯ) ಕೊಡುತ್ತೇನೆ. ತಾವು ಮಾತನಾಡಿ.

ಶ್ರೀ ರಾಜವರ್ಧನ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿ. ತಾವು ಸದಸ್ಯರಿಗೆ ೧೦ ನಿಮಿಷಗಳು ಎಂದು ಟೈಮ್ ನಿಗಧಿ ಮಾಡಿದ್ದೀರಿ. ಅದನ್ನು ಮೀರಿ *** ಮಾಡುವುದಕ್ಕೆ ತಾವು ಅವಕಾಶ ಕೊಡಬಾರದು.

(ವಿರೋಧ ಪಕ್ಷದ ಸದಸ್ಯರು ಎದ್ದು ನಿಂತು ಪ್ರತಿಭಟಿಸಿದರು)

ಅಧ್ಯಕ್ಷರು.—ಆ ರೀತಿ ಮಾಡುವುದಕ್ಕೆ ಅವರೂ ಬಂದಿಲ್ಲ, ಇವರೂ ಬಂದಿಲ್ಲ. ಎಲ್ಲರೂ ಒಳ್ಳೆಯ ಭಾಷಣ ಮಾಡುತ್ತಾರೆ. ಅವರು ಏನು ಪದ ಉಪಯೋಗಿಸಿದರು ಅದನ್ನು ಎಕ್ಸ್‌ಪಂಜ್ ಮಾಡಿದ್ದೇನೆ. I have expunged that.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಎಂದು *** ಏನು ಅವರು ಹೇಳಿದರು ಅದನ್ನು ತೆಗೆದುಬಿಡಬೇಕು.

ಅಧ್ಯಕ್ಷರು.—ಹೌದು. ನಾನು ಅದನ್ನು ಆಗಲೇ ಕಡತದಿಂದ ತೆಗೆದುಹಾಕಿದ್ದೇನೆ. ಇನ್ನು ರೇವಣಸಿದ್ಧಯ್ಯನವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಬಹುದು.

ಶ್ರೀ ಸಿ. ಎಂ. ರೇವಣಸಿದ್ಧಯ್ಯ.—(ಸಿರಗುಪ್ಪ) ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ನಾನು ಪ್ರಸ್ತಾಪಿಸುತ್ತೇನೆ. ಈ ಸಂದರ್ಭದಲ್ಲಿ ಹೇಳಬೇಕೆಂದರೆ ನಮ್ಮ ರಾಜ್ಯ ೧೯೮೩ರವರೆಗೆ ಸತತವಾಗಿ ಕಾಂಗ್ರೆಸ್ ಅಧಿಪತ್ಯದಲ್ಲಿತ್ತು. ೧೯೮೦ರಿಂದ ರೈತರ ಚಳುವಳಿ ಆರಂಭವಾಯಿತು. ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಮೇಲೆ ಕಾಂಗ್ರೆಸ್ ಸರ್ಕಾರ ಅದಕ್ಕೆ ಉತ್ತರವಾಗಿ ಗುಂಡಿಟ್ಟು ಅನೇಕ ರೈತರನ್ನು ಹತ ಮಾಡಿತು. ಆದರೆ ೧೯೮೩ರ ನಂತರ ಬಂದ ಹೆಗಡೆಯವರ ಜನತಾ ಸರ್ಕಾರ ರೈತರ ಬೇಡಿಕೆಗಳನ್ನು ವಿಚಾರ ಮಾಡಿ ಅನೇಕ ರಿಯಾಯಿತಿಗಳನ್ನು ರೈತರಿಗೆ ಕೊಟ್ಟಿತು. ನಾನು ಹೇಳುತ್ತಾ ಇರುವುದು ವಾಸ್ತವಿಕ ಹಾಗೂ ನಿಷ್ಪಕ್ಷಪಾತವಾದ ವಿಚಾರ. ರೈತರು ತಮ್ಮ ಬೇಡಿಕೆಗಳನ್ನು ಇಟ್ಟಾಗ ಅದಕ್ಕೆ ಉತ್ತರವಾಗಿ ಕಾಂಗ್ರೆಸ್ ಸರ್ಕಾರ ಚಳುವಳಿಗಾರರ ಮೇಲೆ ಗುಂಡಿಕ್ಕಿದ ಕೀರ್ತಿ ೧೯೮೩ರವರೆಗೆ ನಡೆಯಿತು. ನಾನೂ ಕೂಡಾ ರಾಜ್ಯರೈತ ಸಂಘದ ಉಪಾಧ್ಯಕ್ಷನಾಗಿದ್ದೆ. ಆದುದರಿಂದ ನನಗೆ ಆ ವಿಚಾರ ಚೆನ್ನಾಗಿ ಗೊತ್ತಿದೆ. ಆದರೆ ೧೯೮೩ರಲ್ಲಿ ಈ ಸರ್ಕಾರ ಬಂದ ನಂತರ ಅದೇ ವಿಚಾರಗಳನ್ನು ವಿಮರ್ಶೆ ಮಾಡಿ ರೈತರಿಗೆ ಅನೇಕ ರಿಯಾಯಿತಿಗಳನ್ನು ಕೊಟ್ಟಿದ್ದು ನಮ್ಮೆಲ್ಲರ ಕಣ್ಣ ಮುಂದೆ ಇದೆ. ಈ ಸರ್ಕಾರ ಬಡ್ಡಿ ರಿಯಾಯಿತಿಯನ್ನು ಕೊಟ್ಟಾಗ ಕೇಂದ್ರದ ವ್ಯವಸಾಯ ಮಂತ್ರಿಗಳು ಕೇಂದ್ರದ ಕೋ-ಆಪರೇಷನ್ ಮಂತ್ರಿಗಳು ವಿರೋಧಿಸಿದರು. ನೀವು ಸಾಲದ ಮೇಲಿನ ಬಡ್ಡಿ ರಿಯಾಯಿತಿ ಮಾಡಿದ್ದೇ ಆದರೆ ನಿಮ್ಮ ರಾಜ್ಯವನ್ನು ಬ್ಲಾಕ್‌ಲಿಸ್ಟ್ ಮಾಡುತ್ತೇವೆಂದು ಹೇಳಿದ್ದಾರೆ ಕೇಂದ್ರದ ನಬಾರ್ಡ್ ಸಂಸ್ಥೆಯವರು ಇದನ್ನು ವಿರೋಧಿಸಿದರು ಅವರು ಇಲ್ಲಿಗೆ ಬಂದಾಗ ನಮ್ಮ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಜಾಲಪ್ಪನವರು ಅವರಿಗೆ ಸಮಾಧಾನ ಮಾಡಿ ಈ ರಿಯಾಯಿತಿಯನ್ನು ಅನಿವಾರ್ಯವಾಗಿ ಕೊಟ್ಟಿದ್ದೇವೆ ಅದಕ್ಕೆ ಒಪ್ಪಿಗೆಕೊಡಬೇಕೆಂದು ಹೇಳಿ ಅವರಿಗೆ ಒಪ್ಪಿಸಬೇಕಾದ ವಿಚಾರ ನಡೆದಿರುವಂತಹದ್ದು. ಇದೇ ರೀತಿ ಅನೇಕ ವಿಚಾರಗಳಲ್ಲಿ ಕಳೆದ ೩೫ ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ಏನೆಲ್ಲ ಕೆಲಸಗಳನ್ನು ಮಾಡಿವೋ, ಅಂತಹ ಅನೇಕ ಕೆಲಸಗಳನ್ನು ಈ ಸರ್ಕಾರದವರು ಮಾಡಿ ಸಾಬೀತುಪಡಿಸಿ ತೋರಿಸಿದ್ದಾರೆ. ೩೫ ವರ್ಷಗಳ ಕಾಲ ಆಡಳಿತ ಮಾಡಿದ್ದೀರಿ ಅನೇಕ ಹಳ್ಳಿಗಳಿಗೆ ಕುಡಿಯಲಿಕ್ಕೆ ನೀರು ಕೊಡಲಿಲ್ಲ. ಕುಡಿ

*** Expunged as order by the chair.

ಯುವ ನೀರಿಗೆ ಬಹಳ ಕಷ್ಟವಿತ್ತು. ಹೆಣ್ಣು ಮಕ್ಕಳು ಕುಡಿಯುವ ನೀರನ್ನು ಬಹಳ ಕಷ್ಟದಿಂದ ದೂರ ಪ್ರದೇಶಗಳಿಂದ ತರುತ್ತಿದ್ದರು. ಅವರ ಬವಣೆ ಏನಿತ್ತು ಎಂಬುದು ಪಟ್ಟಣಗಳಲ್ಲಿರತಕ್ಕ ನಿಮಗೇನು ಗೊತ್ತು ? ಅನೇಕ ಮೈಲಿಗಳ ದೂರದಿಂದ ನೀರನ್ನು ತರುತ್ತಿದ್ದರು. ಇವತ್ತು ನಾಲ್ಕು ಗುಡಿಸಲು ಇರುವ ಕಡೆ ಬೋರ್‌ವೆಲ್ ಇದೆ. ಒಂದು ಊರಿಗೆ ೮–೧೦ ಕಡೆ ಬೋರ್‌ವೆಲ್‌ಗಳು ಇವೆ. ಇವತ್ತು ಹಳ್ಳಿಗಾಡುಗಳಲ್ಲಿ ಹೋಗಿ ನೋಡಿ ಎಲ್ಲಿ ನೋಡಿದರೂ ಕೂಡ ಮಾನ್ಯ ನಜೀರ್‌ಸಾಬ್‌ರವರ ಹೆಸರನ್ನು ನೀರುಸಾಬರು ಎಂದು ಹೇಳುತ್ತಾರೆ. ಅವರ ಹೆಸರು ಎಲ್ಲಾ ಜನಗಳಿಗೂ ಗೊತ್ತಿದೆ. ಯಾರೂ ನೀರು ಕೊಡಲಿಲ್ಲ, ಯಾರು ಕೊಟ್ಟರು ಎಂಬುದು ಜನಗಳಿಗೆ ಗೊತ್ತಿದೆ. ಬಡಜನರಿಗೆ ೨ ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಆಂಧ್ರದವರು ಕೊಡುತ್ತಿದ್ದಾರೆ, ನಾವು ಏತಕ್ಕೆ ಕೊಡಬಾರದೆಂದು ರೈತಸಂಘಕ್ಕೆ ನಾವು ಸಲಹೆ ಮಾಡಿದೆವು. ಆ ಪ್ರಕಾರ ಪ್ರತಿ ಕುಟುಂಬಕ್ಕೆ ತಿಂಗಳೊಂದಕ್ಕೆ ೧೦ ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದಾರೆ. ಈ ಕೆಲಸ ಮಾಡುವುದು ನಿಮಗೆ ಬೇಡವೇ ? ಈ ಸರ್ಕಾರದ ಮೇಲೆ ಜನತೆಗೆ ಮಮತೆ ಬರುತ್ತಿದೆ ಎಂದು ಹೇಳಿ ವಂಚಿತ ಬುದ್ಧಿ. ನಿಮ್ಮದು ನಾಟಕ ಅಲ್ಲವೇ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಚಿನ್ನಪ್ಪನವರು ಏನೇ ಮಾತನಾಡಿದರೂ ರೆಕಾರ್ಡ್ ಆಗುವುದಿಲ್ಲ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಮೂಲಕ ಗ್ರಾಮಗಳಿಗೆ ಸ್ವಾಯತ್ತತೆಯನ್ನು ಕೊಡತಕ್ಕ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ನಾನು ೩೦ ವರ್ಷಗಳ ಕಾಲ ಟೌನ್ ಪಂಚಾಯತಿಯ ಅಧ್ಯಕ್ಷನಾಗಿದ್ದೆ. ಮದ್ರಾಸ್ ಸರ್ಕಾರದಲ್ಲಿ ನಮ್ಮ ಬಳ್ಳಾರಿ ಜಿಲ್ಲೆ ಇದ್ದಾಗಿನಿಂದ ಆಗ ಪಂಚಾಯಿತಿಗೆ ಕೇವಲ ವರ್ಷಕ್ಕೆ ೨೦ ಸಾವಿರ ರೂಪಾಯಿಯೂ ಸಿಗುತ್ತಿರಲಿಲ್ಲ. ಇವತ್ತು ಮಂಡಲ ಪಂಚಾಯತಿಗಳಿಗೆ ಕನಿಷ್ಟ ಪಕ್ಷ ನಾಲ್ಕೈದು ಲಕ್ಷ ರೂಪಾಯಿ ಹಣ ಸಿಗತಕ್ಕ ವ್ಯವಸ್ಥೆಯಾಗುತ್ತದೆ. ನಾನು ಪಂಚಾಯತಿ ಅಧ್ಯಕ್ಷನಾಗಿದ್ದಾಗ ನಾನು ೧೯೬೨ರಿಂದ ೧೯೬೭ರವರೆಗೆ ಈ ಮನೆಯ ಸದಸ್ಯನಾಗಿದ್ದಾಗ ತಲಾಕ್ಕೆ ೧೦ ರೂಪಾಯಿ ಕೊಡಿಯೆಂದು ಕೇಳಿದ್ದೇನೆ. ಆದರೆ ಕೊಡಲಾಗಲಿಲ್ಲ ನಾನು ಸತ್ಯವನ್ನೇ ಹೇಳುತ್ತಿದ್ದೇನೆ ಸತ್ಯವನ್ನು ಬಿಟ್ಟು ಬೇರೆ ಏನನ್ನು ಹೇಳುವುದಿಲ್ಲ. ೫ ಸಾವಿರ ಜನಕ್ಕೆ ೫೦ ಸಾವಿರ, ೧೦ ಸಾವಿರ ಜನಕ್ಕೆ ೧ ಲಕ್ಷ ಬರುತ್ತಿತ್ತು. ಯಾರು ಕೊಟ್ಟರು ? ಯಾರು ಕೊಡಲಿಲ್ಲ ? ಈಗ ಬರತಕ್ಕ ವ್ಯವಸ್ಥೆಯಿಂದ ಹಳ್ಳಿಗಳ ಅಭಿವೃದ್ಧಿಗೆ ಅಂದರೆ ಅಲ್ಲಿ ರಸ್ತೆ ಮಾಡಲಿಕ್ಕೆ ಮರ ಬೆಳೆಸಲಿಕ್ಕೆ ನೀರಿನ ವ್ಯವಸ್ಥೆ ಮಾಡಲಿಕ್ಕೆ ಈಗ ವ್ಯವಸ್ಥೆಯಾಗಿದೆ. ಹಿಂದೆ ಕುಡಿಯುವ ನೀರು ಸರಿಯಾಗಿ ಸಿಗುತ್ತಿರಲಿಲ್ಲ. ಹಳ್ಳಿಗಳ ಕಡೆಗೆ ನಮ್ಮ ಸರ್ಕಾರ ಲಕ್ಷ್ಯ ಹರಿಸಿರುವ ಬಗ್ಗೆ ನೀವು ಪ್ರಶಂಸೆ ಮಾಡಬೇಕಾಗಿತ್ತು ನಾನು ಇಷ್ಟು ಹೇಳಬೇಕಾಗಿರಲಿಲ್ಲ. ನನ್ನ ಸ್ನೇಹಿತರು ಏನೂ ಮಾಡಲಿಲ್ಲ ಎಂದು ಹೇಳಿದ್ದಕ್ಕಾಗಿ ಎಲ್ಲವನ್ನೂ ಹೇಳಬೇಕಾಗಿದೆ. ಬರಗಾಲ ನಾಲ್ಕು ವರ್ಷಗಳ ಕಾಲ ಬಂದಿದೆ. ಮಾನ್ಯ ರಾಜ್ಯಪಾಲರು ಸಹ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ರಾಜ್ಯದಲ್ಲಿ ಬರಗಾಲ ಬಂದಾಗ ಕಾಮಗಾರಿ ಕೆಲಸಗಳನ್ನು ಕೈಗೆತ್ತಿಕೊಂಡು ದುಡಿಯುವಂತಹ ಜನರಿಗೆ ಕೆಲಸವನ್ನು ಕೊಟ್ಟಿದ್ದಾರೆ. ನಾನು ಮುಖ್ಯವಾದ ಅಂಶವನ್ನು ಹೇಳುವುದಕ್ಕೆ ಬಯಸುತ್ತೇನೆ, ಈ ದೇಶದಲ್ಲಿ ನೂರಕ್ಕೆ ಎಪ್ಪತ್ತರಷ್ಟು ಜನ ರೈತರು ಇದ್ದಾರೆ. ಇವರುಗಳೆಲ್ಲ ಹೊಲವನ್ನು ಉತ್ತಿ, ಬೀಜವನ್ನು ಬಿತ್ತಿ, ವ್ಯವಸಾಯ ಮಾಡಿದ ಬೆಳೆಗೆ ಬೆಲೆ ಕಟ್ಟುತ್ತದೆ. ಸರ್ಕಾರದ ಬೆಲೆಯನ್ನು ತೆಗೆದುಕೊಂಡಾಗ ರೈತನಿಗೆ ಬೆಳೆ ಖರ್ಚಿಗೂ ಸಾಲದು ರೈತನಿಗೆ ನೀವೇನು ಮಾಡಿದ್ದೀರಿ ? ತಾವು ನನ್ನ ಕಡೆ ಸ್ವಲ್ಪ ಕೇಳಿ ಮಾತನಾಡಬೇಕೆಂದು ನಾನು ಮಾತನಾಡುತ್ತಿಲ್ಲ.

(ಗೊಂದಲ)

ನೀವೇನು ಮಾಡಿಲ್ಲವೆಂದು ಅವರು ಹೇಳಿದ್ದಕ್ಕೆ ನಾನು ಇಷ್ಟೆಲ್ಲ ಹೇಳಬೇಕಾಯಿತು. ನೀವೇನು ಮಾಡೇ ಇಲ್ಲ ಅಂದರೆ ೩೫ ವರ್ಷಗಳ ಕಾಲ ಅಧಿಕಾರದಲ್ಲಿದ್ದ ನೀವು ಏನೂ ಮಾಡಿಲ್ಲ ಈ ಸರ್ಕಾರ ಏನು ಮಾಡಿದೆ ಎಂದು ಕೇಳುವುದು ಹಾಸ್ಯಾಸ್ಪದ. ನನ್ನ ವಿಚಾರ ಬೇರೆ ಇತ್ತು ಈಗ ಆ ವಿಚಾರಕ್ಕೆ ಬರುತ್ತಿದ್ದೇನೆ. ರೈತರು ಹೊಲ

೪–೩೦ ಪಿ.ಎಂ.

ಹದ ಮಾಡಿ ಬಿತ್ತಿ ಕಳೆದುಕೊಂಡರು ಸರ್ವನಾಶವಾಯಿತು ಸಂಪೂರ್ಣವಾಗಿ ನಾಶವಾಯಿತು ಮತ್ತೆ ಉತ್ತಿ ಬಿತ್ತಬೇಕಾದರೆ ರೊಕ್ಕ ಬೇಕು ಬೀಜಕ್ಕೆ ರೊಕ್ಕ ಬೇಕು. ಹದ ಮಾಡಲಿಕ್ಕೆ ರೊಕ್ಕ ಬೇಕು. ಸರ್ಕಾರದವರು ರೈತನಿಗೆ ಏನು ಮಾಡಿದ್ದಾರೆ ? This is not the question of a State but it is

the question for the whole nation ಇದು ಎಲ್ಲಾ ಕಡೆಯೂ ನಡೆಯುತ್ತಿರುವುದು. ಈ ಪ್ರಶ್ನೆಯನ್ನು ಈ ಸರ್ಕಾರದ ಮುಂದೆ ಮಾತ್ರ ಇಡುವುದೊಂದೇ ಅಲ್ಲ. ಬರಗಾಲದ ಕಾರಣ ವರ್ಷ ವರ್ಷ ಇಡುಗಂಟನ್ನು ಕಳೆದುಕೊಂಡ ರೈತ ಏನು ಮಾಡಬೇಕು ? ಈ ದೇಶದಲ್ಲಿ ಮಾನವ ಆದಾಯ ಗಳಲ್ಲಿ ದಿನಕೂಲಿ ಮಾಡಿ ಆದಾಯ ತೆಗೆದುಕೊಳ್ಳುತ್ತಾರೆ, ವರ್ಷದ ಆದಾಯ ಬರತಕ್ಕವರು, ತಿಂಗಳ ಆದಾಯ ಬರತಕ್ಕವರು ಅನೇಕರು. ಆದರೆ ಇಡುಗಂಟುಗಳನ್ನೇ ಕಳೆದುಕೊಂಡಿರುವ ರೈತರಿಗೆ ಸರ್ಕಾರ ಏನು ಮಾಡಿದೆ ? ಸತತವಾಗಿ ಬರಗಾಲವನ್ನು ಅನುಭವಿಸಿ, ಇಡುಗಂಟನ್ನೇ ಕಳೆದುಕೊಂಡಿರುವ ರೈತರಿಗೆ ಈ ಸರ್ಕಾರ ಏನು ಮಾಡಿದೆ ಎಂಬುದು ಪ್ರಶ್ನೆ. ಈ ರಾಜ್ಯ ಸರ್ಕಾರ ಮಾತ್ರವಲ್ಲ, ಈ ದೇಶವನ್ನು ಆಳತಕ್ಕಂಥ ಸರ್ಕಾರದಲ್ಲೂ ಈ ವ್ಯವಸ್ಥೆ ಇಲ್ಲ. ಈ ಬರಗಾಲ ಎನ್ನತಕ್ಕದ್ದು ಬರೇ ಕರ್ನಾಟಕಕ್ಕೆ ಅಷ್ಟೇ ಸೀಮಿತವಲ್ಲ. ಇದು ಇಡೀ ದೇಶಕ್ಕೇ ಸೀಮಿತವಾಗಿದೆ. ದೇಶದಲ್ಲಿಯೇ ಈ ವ್ಯವಸ್ಥೆಯನ್ನು ತೆಗೆದುಕೊಂಡು ಹೋಗುವಾಗ ಕರ್ನಾಟಕದ ಮಾತು ಏಕೆ ? ಇದರಿಂದ ಇವತ್ತು ರೈತನ ಗತಿ ಏನಾಗಿದೆ ? ಅವನ ಹೆಣ್ಣು ಮಕ್ಕಳ ಮದುವೆ, ಮಗನ ವಿದ್ಯಾಭ್ಯಾಸ, ದನಕರುಗಳ ಯೋಗಕ್ಷೇಮ ಹೇಗೆ ಆಗಬೇಕು ? ಇದರ ಬಗ್ಗೆ ಯಾರೂ ಕೂಡ ಚಿಂತನೆ ಮಾಡಿಲ್ಲ. ಪ್ರತಿಯೊಬ್ಬರೂ ಸ್ವಾರ್ಥಿಗಳು ನೌಕರರ ಸಂಬಳ ನಿಂತಿಲ್ಲ. ಅಧಿಕಾರಿಗಳ ಸಂಬಳ ನಿಂತಿಲ್ಲ. ಕಾರ್ಖಾನೆ ಕಾರ್ಮಿಕರ ಉದ್ಯೋಗ ನಿಂತಿಲ್ಲ. ಆದರೆ ಪಾಪ ರೈತ ಕಷ್ಟಪಟ್ಟು ಉತ್ತು ಬಿತ್ತು ಬೆಳೆಯುತ್ತಾನೆ. ಅವನು ಬೆಳೆಸಿದ್ದನ್ನು ನಾವು ತಿಂದು ಬದುಕುತ್ತಿದ್ದೇವೆ ಆದರೆ ಅವನ ಗತಿ ಏನಾಗಿದೆ ಎಂದು ನೋಡತಕ್ಕ ವ್ಯವಸ್ಥೆ ಈ ರಾಜ್ಯದಲ್ಲಿ ಆಗಲಿ, ದೇಶದಲ್ಲಿ ಆಗಲಿ ಇಲ್ಲವೆಂಬ ಮಾತನ್ನು ನಾನು ಹೇಳಬೇಕಾಗುತ್ತದೆ. ಇನ್ನು ಬರಗಾಲದ ಬಗ್ಗೆ ಹೇಳುವುದಾದರೆ, ಬರಗಾಲ ಪರಿಹಾರಕ್ಕೆ ನೀರಾವರಿ ಒಂದು ಮುಖ್ಯವಾದ ಅಸ್ತ್ರ. ಹಣದ ಅಭಾವದಿಂದ ಈ ನೀರಾವರಿ ಯೋಜನೆಗಳನ್ನು ಸಂಪೂರ್ಣವಾಗಿ ಮಾಡಲಾಗಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಈ ಕೃಷ್ಣಾ ಯೋಜನೆ ಪ್ರಾರಂಭವಾಯಿತಾದರೂ, ಅದು ಈಗಲೂ ಮುಗಿಯಲಿಕ್ಕೆ ಆಗಿಲ್ಲ. ಇದಕ್ಕೆ ಕಾರಣವೆಂದರೆ ಹಣದ ಅಭಾವ. ಈ ದೇಶದಲ್ಲಿ ಹಣ ಇಲ್ಲವೇನು ? ಹಣ ದೇಶದಲ್ಲಿ ಬೇಕಾದಷ್ಟು ಇದೆ. ನನಗೆ ತಿಳಿದ ಪ್ರಕಾರ ೧೯೬೭ರಲ್ಲಿ ವಾಂಛೂ ರಿಪೋರ್ಟ್ ಪ್ರಕಾರ ೭೦ ಸಾವಿರ ಕೋಟಿ ರೂಪಾಯಿ ಕಪ್ಪುಹಣ ಈ ದೇಶದಲ್ಲಿತ್ತು. ಇಪ್ಪತ್ತು ವರ್ಷಗಳಾಯಿತು, ನನಗನ್ನಿಸುತ್ತದೆ, ಆಗ ಇದ್ದ ೭ ಸಾವಿರ ಈಗ ೨೦ ರಷ್ಟು ಆಗಿರಬಹುದು. ಇದು ಒಂದು ಲಕ್ಷ ಕೋಟಿಗೂ ಮೀರಿ ಹೋಗಿರಬಹುದು. ಈ ಕಪ್ಪು ಹಣ ಯಾರಲ್ಲಿದೆ ? ರೈತನ ಹತ್ತಿರ ಇದೆಯೇ ? ನಾನು ಹೇಳುತ್ತೇನೆ, ರೈತರ ಹತ್ತಿರ ಈ ಹಣ ಇಲ್ಲ, ರಾಜಕಾರಣಿಗಳ ಹತ್ತಿರ ಈ ಕಪ್ಪು ಹಣ ಇದೆ. ಉದ್ಯಮಿಗಳ ಹತ್ತಿರ ಈ ಹಣ ಖಂಡಿತ ಇದೆ. ಅದನ್ನು ಹೊರತೆಗೆಯತಕ್ಕಂಥ ಮನಸ್ಸು ಈ ದೇಶದ ಸರ್ಕಾರದಲ್ಲಿ ಇಲ್ಲ, ರಾಜ್ಯ ಸರ್ಕಾರದಲ್ಲಿಯೂ ಇಲ್ಲ. ಇದನ್ನು ಹೊರಗೆ ಏತಕ್ಕೆ ತೆಗೆಯಬಾರದು? ಅಭಿವೃದ್ಧಿ ಕಾರ್ಯಗಳಿಗೆ ಹಣ ಅಗತ್ಯವಿದ್ದಾಗ ಈ ಕಪ್ಪು ಹಣವನ್ನು ಬಿಟ್ಟು ಬಿಟ್ಟರೆ, ಬೇರೆ ಎಲ್ಲಿ ಹುಡುಕಿದರೆ ಸಿಗುತ್ತದೆ ? ಶ್ರೀ ದೇವೇಗೌಡರು ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಈ ನೀರಾವರಿ ಯೋಜನೆಗಳಿಗೆ ಸಂಪನ್ಮೂಲಗಳನ್ನು ಒದಗಿಸಲಿಕ್ಕೆ ಯೋಜನೆ ಹಾಕಿಕೊಂಡಿದ್ದಾರೆ. ನಾನು ಸಲಹೆ ಮಾಡುವುದೇನೆಂದರೆ, ಇದಕ್ಕೆ ಒಂದು ಉಗ್ರವಾದ ಕಾಯಿದೆಯನ್ನು ಹಾಕಿರಿ. ಈ ಕಪ್ಪುಹಣವನ್ನು ಹೊರಕ್ಕೆ ತೆಗೆಯಿರಿ ಎಂದು ಈ ರಾಜ್ಯಕ್ಕೆ ಮಾತ್ರವಲ್ಲ, ಇಡೀ ದೇಶಕ್ಕೆ ಸಲಹೆ ಮಾಡಬಯಸುತ್ತೇನೆ. ಆಮೇಲೆ ಒಂದು ವಿಚಾರ. ಹಿನೇ ವೇತನ ಆಯೋಗದ ವರದಿಯ ಅನುಷ್ಠಾನದಿಂದ ಅನೇಕ ನೌಕರರಿಗೆ ಹೆಚ್ಚುವರಿ ಸಂಬಳ ಸಿಗುತ್ತದೆ. ಈ ಸಂದರ್ಭದಲ್ಲಿ ಅಂದರೆ ದೇಶ ಬರಗಾಲವನ್ನು ಅನುಭವಿಸಿ ಹಣದ ಕೊರತೆಯಲ್ಲಿರುವಾಗ, ಈ ಹಿನೇ ವೇತನ ಆಯೋಗದ ವರದಿಗೆ ಒಪ್ಪಿಗೆ ಕೊಡುವ ಅವಶ್ಯಕತೆ ಏನಿತ್ತು ? ಇದನ್ನು ಇನ್ನೂ ಸ್ವಲ್ಪ ದಿವಸ ತಡೆಹಿಡಿಯಬಹುದಿತ್ತು. ರೈತರ ಕಷ್ಟನಷ್ಟಗಳಿಗೆ ಪರಿಹಾರ ಸೂಚಿಸಲು ಮಾನ್ಯ ಬೊಮ್ಮಾಯಿಯವರ ಕಮಿಟಿ ಮಾಡಿದರು, ನಂತರ ಮಾನ್ಯ ಬಂಗಾರಪ್ಪನವರ ಕಮಿಟಿ ಮಾಡಿದರು ಅನಂತರ ಮೂರನೆಯದು ಶಂಕರಿಕೊಪ್ಪ ಅವರ ಕಮಿಟಿ ಮಾಡಿದರು. ಈ ಮೂರು ಕಮಿಟಿಗಳೂ ರಿಪೋರ್ಟ್ ಕೊಟ್ಟಿದ್ದಾರೆ. ಆದರೂ ಕೂಡ ಇವು ಕಾರ್ಯರೂಪದಲ್ಲಿ ಬಂದಿಲ್ಲ. ರೈತರ ಕಷ್ಟ ನಿವಾರಣೆಯಾಗಬೇಕು. ಇವುಗಳನ್ನು ಅನುಷ್ಠಾನಕ್ಕೆ ತರದಿರುವಾಗ, ಈ ಹಿನೇ ವೇತನ ಆಯೋಗದ ಸಿಫಾರಸ್ಸನ್ನು ಅನುಷ್ಠಾನ ಮಾಡಿದ್ದರಿಂದ, ಈ ರಾಜ್ಯಕ್ಕೆ ಕನಿಷ್ಟ ಒಂದು ವರ್ಷಕ್ಕೆ ೧೫೦ ಕೋಟಿ ರೂಪಾಯಿಗಳು ಹೆಚ್ಚುವರಿಯಾಗಿ ಬೇಕಾಗುತ್ತದೆಂದು ನಮ್ಮ ಲೆಕ್ಕಾಚಾರ. ಈಗ ಇದರ ಅಗತ್ಯ ಇತ್ತೆ ? ಅಗತ್ಯ ಇರಬಹುದು, ಆದರೆ ಇನ್ನೂ ಕೆಲವು ದಿನ ಸುಧಾರಿಸಬಹುದಾಗಿತ್ತು. ಇವತ್ತಿನ ದಿವಸ ರೈತನ ಕೊರತೆಗಳು ಏನಿವೆ ಅವುಗಳ ಕಡೆ ಗಮನ ಕೊಡಬೇಕಾಗಿತ್ತು. ರೈತನ ಬೆಳೆಯುವ ಬೆಳೆಗಳಿಗೆ ರೋಗಗಳು ಬರುತ್ತಿವೆ. ಮತ್ತು ಇವತ್ತು ರೋಗ ಇಲ್ಲದ ಬೆಳೆಯೇ ಇಲ್ಲ. ನಮಗೆ ರಾಗಿ ಬೇಕು, ಭತ್ತ ಬೇಕು, ಎಣ್ಣೆ ಬೇಕು, ಅಕ್ಕಿ ಬೇಕು. ಈ ಬೆಳೆಗಳಿಗೆ ಬರುತ್ತಿರುವ ರೋಗಗಳನ್ನು

ಸಂರಕ್ಷಣೆ ಮಾಡದೇ ಹೋದರೆ ರೈತ ಯಾವರೀತಿಯಾಗಿ ಬೆಳೆ ಬೆಳೆಯಲು ಸಾಧ್ಯವಾಗುತ್ತದೆ. ಈ ಬೆಳೆ ಎನ್ನುವುದು ರೈತನಿಗೇ ಅಲ್ಲ, ನೀರಾವರಿ ರೈತನಿಗೇ ಅಲ್ಲ, ಇಡಿ, ದೇಶಕ್ಕೇ ಬೇಕಾದ ವಿಚಾರ. ಈ ಬೆಳೆಗಳ ಸಂರಕ್ಷಣೆಗೆ ಇವತ್ತು ಸರ್ಕಾರ ಏನು ಕಾರ್ಯಕ್ರಮ ಹಾಕಿದೆ. ಬೆಳೆಗಳ ಸಂರಕ್ಷಣಾ ಕಾರ್ಯವನ್ನು ಸರ್ಕಾರವೇ ತೆಗೆದುಕೊಳ್ಳಬೇಕು. ಒಬ್ಬ ರೈತ ಬೆಳೆಗಳಿಗೆ ಔಷಧಿ ಹೊಡೆಯುತ್ತಾನೆ ಇನ್ನೊಬ್ಬ ರೈತ ಅಸಕ್ತಿ ಇದರಿಂದ ಆದರೆ ಹುಳುಗಳು ಮಾತ್ರ ನಾಶ ಆಗುವುದಿಲ್ಲ. ಇದರಿಂದ ಏನಾಯಿತು, ನಷ್ಟವಾಯಿತು. ಬೆಳೆ ಕಡಿಮೆಯಾಯಿತು, ಇವತ್ತು ಇದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇಲ್ಲದೇ ಹೋದರೆ ನಾವು ಬೇರೆ ದೇಶದಿಂದ ಎಣ್ಣೆ, ಕಾಳು, ಅಕ್ಕಿ ಮುಂತಾದ ಧವಸಗಳನ್ನು ತರಬೇಕಾಗುತ್ತದೆ. ಇದರ ವೆಚ್ಚವನ್ನೇ ಬೆಳೆ ರಕ್ಷಣೆಗೆ ಬೇಕಾದ ಉಚಿತ ಔಷಧಿ ಸಾಮಗ್ರಿ ರೈತನಿಗೆ ಉಚಿತವಾಗಿ ಒದಗಿಸುವುದು ಉಚಿತ. ಯಾವ ರೀತಿಯಾಗಿ ಕಾಲರ ಖಾಯಿಲೆ ಬಂದಾಗ. ಮನುಷ್ಯರಿಗೆ ಉಚಿತ ಚುಚ್ಚುಮದ್ದನ್ನು ಹಾಕಿ ಮನುಷ್ಯರನ್ನು ರಕ್ಷಿಸಲಾಗುವುದೋ ಹಾಗೆಯೇ ಇವತ್ತು ರೈತನ ಬೆಳೆಯನ್ನು ಉಚಿತ ಔಷಧಿ ನೀಡಿ ಸಂರಕ್ಷಣೆ ಮಾಡಬೇಕಾಗಿದೆ. ಸರ್ಕಾರಕ್ಕೆ ಈ ಬೆಳೆಗಳ ಅವಶ್ಯಕತೆ ಇದೆ. ಅನಿವಾರ್ಯವಾಗಿ ರೋಗಗಳು ಬರುತ್ತವೆ. ಆದ್ದರಿಂದ ಈ ರೋಗಗಳ ನಿವಾರಣೆಗೆ ಸರ್ಕಾರರ ಏಕೆ ಹೊಣೆ ಹೊತ್ತು ಒಂದು ಯೋಜನೆ ಹಾಕಬಾರದು ? ಎಲ್ಲಾ ಬೆಳೆಗಳ ಸಂರಕ್ಷಣಕರ್ತ ಈ ಸರ್ಕಾರ. ಈ ದೇಶದಲ್ಲಿ ಉತ್ತಮ ಬೆಳೆ ಕಾಣಬೇಕಾದರೆ ಈ ಒಂದು ಸಂರಕ್ಷಣಾ ಕಾರ್ಯಕ್ರಮವನ್ನು ದೇಶದ ಸರ್ಕಾರವಾಗಲೀ, ರಾಜ್ಯದ ಸರ್ಕಾರವಾಗಲೀ ಹಾಕತಕ್ಕಥಾದ್ದು ಅತ್ಯಂತ ಸ್ವಾರಸ್ಯವಾದುದು ಮತ್ತು ನೀತಿಯುತವಾದುದು. ಅಧ್ಯಕ್ಷರೇ, ನಾನು ಇನ್ನು ಹೆಚ್ಚು ಸಮಯವನ್ನು ತೆಗೆದುಕೊಂಡು ನಿಮ್ಮ ಮಾತನ್ನು ಉಲ್ಲಂಘಿಸುವ ಇಚ್ಛೆಗೆ ಹೋಗುವುದಿಲ್ಲ. ಇನ್ನು ಆಡಳಿತ ವಿಚಾರದ ಬಗ್ಗೆ ಹೇಳಬೇಕೆಂದರೆ, ಭ್ರಷ್ಟಾಚಾರ ಸ್ವಲ್ಪ ಕಡಿಮೆಯಾಗಿದ್ದರೂ, ಪೂರ್ತಿಯಾಗಿ ಹೋಗಿಲ್ಲ. ಕನಿಕರ ದೃಷ್ಟಿಯಿಂದ ಅಧಿಕಾರಿಗಳನ್ನು ನಮ್ಮ ಸರ್ಕಾರ ನೋಡುತ್ತಿರುವುದು ಸರಿಯಲ್ಲವೆಂದು ನನ್ನ ಭಾವನೆ. ಇವತ್ತು ಅವರಿಂದ ಆಗುತ್ತಿರತಕ್ಕ ತೊಂದರೆಗಳು ಬಹಳಷ್ಟು ಇವೆ. ಇವರುಗಳನ್ನು ಬಸ್ತಿನಲ್ಲಿಡಬೇಕಾದರೆ ಸರ್ಕಾರ ನಿರ್ದಿಷ್ಟ ಕಠಿಣ ಶಿಕ್ಷೆ ಕಾರ್ಯಕ್ರಮವನ್ನು ತೆಗೆದುಕೊಳ್ಳಲೇಬೇಕು. ಈ ದೇಶದಲ್ಲಿ ಇದುವರೆಗೆ ಯಾವ ದೊಡ್ಡ ಅಧಿಕಾರಿಯನ್ನೂ ಮಾಡಿದ ತಪ್ಪಿಗೆ ಡಿಸ್‌ಮಿಸ್ ಮಾಡುವುದಕ್ಕಾಗಿಲ್ಲ. ಹಾಗಾದರೆ ಎಲ್ಲಾ ಅಧಿಕಾರಿಗಳೂ ಶುದ್ಧರಾಗಿದ್ದಾರೆಯೇ ? ಅಧಿಕಾರಿಗಳು ಮಾಡತಕ್ಕ ಕಾರ್ಯಗಳು ಕಾಲಕ್ಕೆ ಸರಿಯಾಗಿ ಸಾಮಾನ್ಯ ಜನರಿಗೆ ಲಂಚವಿಲ್ಲದೆ ನಡೆಯುಂತಹ ಆಡಳಿತವನ್ನು ಆಚರಣೆಗೆ ತರಬೇಕು. ಆದ್ದರಿಂದ ಈ ಸರ್ಕಾರ ಅದಕ್ಷ ಅಧಿಕಾರಿಗಳ ಮೇಲೆ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನು ಹೆಚ್ಚು ಹೊತ್ತು ತೆಗೆದುಕೊಳ್ಳುವ ಮನಸ್ಸಿಲ್ಲದೆ ಇರುವುದರಿಂದ, ಇಷ್ಟು ಸಮಯ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಜಯಕುಮಾರ್ ಅವರು ೨೩ ಮಿನಿಟ್ ಮಾತನಾಡಿದ್ದಾರೆ, ಶ್ರೀಮತಿ ಮುಖ್ತರುನ್ನಿಸಾರವರು ೨೩ ನಿಮಿಷ, ರಾಮಯ್ಯನವರು ೧೩ ನಿಮಿಷ, ಉಪ್ಪಿನ್‌ರವರು ೧೦ ನಿಮಿಷ, ಉಮರಬ್ಬನವರು ೩೨ ನಿಮಿಷ ಮಾತನಾಡಿದ್ದಾರೆ. ಇವರು ಇನ್ನು ಸ್ವಲ್ಪ ಕಾಲ ತೆಗೆದುಕೊಂಡಿದ್ದರೆ ಕೊಡುತ್ತಿದ್ದೆ. ಇನ್ನು ಮುಂದಕ್ಕೆ ಮಾತನಾಡುವ ಸದಸ್ಯರು ೧೦ ಮಿನಿಟ್‌ಗಿಂತ ಹೆಚ್ಚು ಕಾಲ ಮಾತನಾಡುವುದು ಬೇಡ. ಈ ಕಡೆಯವರಿಗೆ ೨೦ ನಿಮಿಷ ಕೊಟ್ಟರೆ, ನಿಮಗೂ ೨೦ ನಿಮಿಷ ಕೊಡುತ್ತೇನೆ. ಯಾರಿಗೂ ತಾರತಮ್ಯ ಮಾಡುವುದಿಲ್ಲ. ಈಗ ಮಾನ್ಯ ಜಿ. ಎಸ್. ಆಚಾರ್ ಅವರು ಮಾತನಾಡಿ.

ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಾ...

ಶ್ರೀ ಪ್ರತಾಪಚಂದ್ರಶೆಟ್ಟಿ.—ಅಧ್ಯಕ್ಷರೇ, ನಮಗೆ ಅವಕಾಶ ಕೊಡುವುದಿಲ್ಲ ಎಂದು ಹೇಳಿಬಿಡಿ...

ಅಧ್ಯಕ್ಷರು.—ನಿಮ್ಮ ಬದಲಿಗೆ ಉಮರಬ್ಬ ಅವರಿಗೆ ಅವಕಾಶ ಕೊಡಿ ಎಂದು ಹೇಳಿದಿರಿ, ಅವರಿಗೆ ಕೊಟ್ಟಿದ್ದೆ, ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವುದಕ್ಕೆ ಸಾಂಪ್ರದಾಯಕವಾಗಿ ವಿರೋಧ ಇಲ್ಲದಿದ್ದರೂ ಅದರಲ್ಲಿರುವ ಅಭಾಸಗಳನ್ನು ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಕೆಲವು ಮಾತುಗಳನ್ನಾಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ನಾಲ್ಕು ವರ್ಷಗಳ ನಿರಂತರ ಕ್ಷಾಮ ಎಂಬ ಢಮರು ನಿನಾದದೊಂದಿಗೆ ರಾಜ್ಯ ಸರ್ಕಾರದ ಕಾರ್ಯ ಆರಂಭವಾಯಿತು ಅದೇ ಢಮರು ನಿನಾದದೊಂದಿಗೆ ರಾಜ್ಯಪಾಲರ ಭಾಷಣವೂ ಆರಂಭವಾಗಿದೆ.

ಕ್ಷಾಮ ಹಿಂದೂ ಇತ್ತು, ಕ್ಷಾಮ ನಿವಾರಣೆ ಕಾರ್ಯಕ್ರಮ ಹಿಂದೂ ಇತ್ತು. ನಾಲ್ಕು ವರ್ಷದಲ್ಲಿ ಯಾವ ರೀತಿ ಪರಿಹಾರ ಕಾರ್ಯ ನಡೆದಿದೆ, ಏನು ಕಾರ್ಯಕ್ರಮ ಆಗಿದೆ ಎಂಬುದರ ಬಗ್ಗೆ ಟೀಕೆ ಇಷ್ಟು ಉಗ್ರವಾಗಿ ಹಿಂದೆಂದೂ ಬಂದಿರಲಿಲ್ಲ ಎಂಬುದನ್ನು ಗಮನಿಸಬೇಕು. ಕೃಷಿ ವಿಚಾರ ಇದೆ, ಪ್ರಾದೇಶಿಕವಾಗಿ ಮಳೆಯ ವಿತರಣೆ ಏಕರೀತಿಯಾಗಿರಲಿಲ್ಲ ಎಂದು ರಾಜ್ಯಪಾಲರು ಹೇಳಿದ್ದಾರೆ. ಅದೃಷ್ಟವಶಾತ್ ಇದಕ್ಕಾಗಿ ಕೇಂದ್ರ ಸರಕಾರವನ್ನು ದೂರಲಿಲ್ಲ, ಇದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅನೇಕ ಕಾರ್ಯಕ್ರಮಗಳು ಆಗಿದೆ ಎಂಬ ಮಾತು ಬಂದಿದೆ. ನಮ್ಮ ರಾಜ್ಯದಲ್ಲಿ ಬೆಳೆ ವಿಮೆ ಕಾರ್ಯಕ್ರಮ ಆರಂಭವಾಗಿದೆ, ಬೆಳೆ ವಿಮೆ ಕೆಲವು ಸಹಕಾರಿ ಸಂಸ್ಥೆಗಳ ಮೂಲಕ ಮಾತ್ರ ವಸೂಲಾಗುತ್ತಿದೆ. ಆದರೆ ರಾಷ್ಟ್ರೀಕೃತ ಬ್ಯಾಂಕುಗಳಿಗೆ, ಗ್ರಾಮ ಪಂಚಾಯಿತಿಗಳಿಗೆ ಬೆಳೆ ವಿಮೆಯನ್ನು ಮಾಡುವ ಅಧಿಕಾರವನ್ನು ಕೊಟ್ಟಿರುವುದಿಲ್ಲ. ಕಳೆದ ವರ್ಷ ನಾನು ಇದರ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಕೇವಲ ಸಹಕಾರಿ ಸಂಸ್ಥೆಗಳಲ್ಲಿ ಅದೂ ಕೆಲವು ಜಿಲ್ಲೆಗಳಲ್ಲಿ ಮಾತ್ರ ಬೆಳೆ ವಿಮೆಯನ್ನು ಅನುಸರಿಸಲಾಗುತ್ತಿದೆ. ಈ ರೀತಿ ತಾರತಮ್ಯ ಮಾಡತಕ್ಕದ್ದು ಸರಿಯಲ್ಲ. ಕರ್ನಾಟಕವು ಶಾಂತಿ ನೆಮ್ಮದಿಗಳಿಗಾಗಿ ಹಾಗೂ ಮತೀಯ ಸಾಮರಸ್ಯಕ್ಕಾಗಿ ಯಾವಾಗಲೂ ಪ್ರಸಿದ್ಧವಾಗಿದೆ. ಆದರೂ ಕೂಡಾ ಅನೇಕ ದುರಾದೃಷ್ಟಕರ ಘಟನೆಗಳು ಆಗಿವೆ ಎನ್ನುವುದನ್ನು ಕೂಡಾ ಒಪ್ಪಿಕೊಂಡಿದ್ದಾರೆ. ಅಂದರೆ ಒಂದು ವಿರೋಧಭಾಸದ ಚಿತ್ರ ಭಾಷಣದಲ್ಲಿ ಬರುತ್ತಿದೆ. ರಾಜ್ಯದಲ್ಲಿ ಯಾವ ಬೆಳವಣಿಗೆಯಾಗಿದೆ ಅದರ ಮತ್ತೊಂದು ಚಿತ್ರ ಕೂಡಾ ಇದರಲ್ಲಿ ಕಾಣುತ್ತಿದೆ. ಇದನ್ನು ಸರಕಾರ ನ್ಯಾಯವಾಗಿ ಒಪ್ಪಿಕೊಳ್ಳಬೇಕಾಗಿದೆ. ಈ ಪ್ರಸಂಗ ಕೂಡಾ ದುರಾದೃಷ್ಟಕರವಾದುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಈಡೇರಿಸುವಲ್ಲಿ ನಮ್ಮ ಸರಕಾರ ತನ್ನ ವಚನವನ್ನು ಪಾಲಿಸಿದೆ ಎಂಬ ಮಾತೂ ಬಂದಿದೆ, ಇದು ಹೊಸದಾಗಿ ಆದದ್ದೇನೂ ಅಲ್ಲ. ಜನತೆಗೆ ಅಧಿಕಾರ ಕೊಡುತ್ತಿದ್ದೇವೆ ಎಂಬ ಹೊಸ ಮಾತು ಬಂದಿದೆ. ಮೂರು ವರ್ಷಗಳ ಹಿಂದೆ ಇದ್ದ ಇದೇ ವ್ಯವಸ್ಥೆಯನ್ನು ವಿಸರ್ಜನೆ ಮಾಡಿ ಜನತೆಯ ಅಧಿಕಾರವನ್ನೆಲ್ಲಾ ಅಧಿಕಾರಿಗಳ ಕೈಗೆ ಕೊಡತಕ್ಕ ವ್ಯವಸ್ಥೆ ಮಾಡಿ ಈಗ ಹೊಸದಾಗಿ ಜನತೆಯ ಕೈಗೆ ಅಧಿಕಾರ ತಂದು ಕೊಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಚುನಾವಣೆಯಲ್ಲಿ ಏನೆಲ್ಲಾ ನಡೆದಿದೆ ಎಂದು ತಮಗೆಲ್ಲಾ ಗೊತ್ತಿದೆ. ಲೋಕನಾಯಕ ಜಯಪ್ರಕಾಶ ನಾರಾಯಣರ ವಿಕೇಂದ್ರೀಕೃತ ಪ್ರಜಾಸತ್ತೆಯ ಕಲ್ಪನೆಯಿಂದ ಸ್ಫೂರ್ತಿ ಪಡೆದಿದೆ ಎಂಬ ಮಾತು ಉಲ್ಲೇಖವಾಗಿದೆ. ಪಂಚಾಯಿತಿ ರಾಜ್ಯ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವರು ಮಾತು ಮಾತಿಗೆ ಮಹಾತ್ಮಗಾಂಧಿಯವರ ಕಲ್ಪನೆಯ ಬಗ್ಗೆ ಹೇಳುತ್ತಿರುತ್ತಾರೆ, ಆದರೆ ಇದರಲ್ಲಿ ಪೂಜ್ಯ ಮಹಾತ್ಮಗಾಂಧೀಜಿಯವರ ಹೆಸರು ಬರಲಿಲ್ಲ. ಇದು ದುರಾದೃಷ್ಟಕರವಾದುದು ಮಂಡಲ ಪಂಚಾಯತ್‌ಗಳು, ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬರುವುದರೊಂದಿಗೆ ಯೋಜನಾ ಕಾರ್ಯ ವಿಧಾನವು ಹೊಸ ರೂಪ ತಳೆಯಲಿದೆ ಎಂಬ ಮಾತು ಬಂದಿದೆ. ಜಿಲ್ಲಾ ಮಟ್ಟದಲ್ಲಿ ಯಾವ ಯೋಜನೆ ಇದೆ, ಆ ಯೋಜನೆಗಳಲ್ಲಿ ಹಣವನ್ನು ಹಂಚಿದ ನಂತರ, ಅದು ಮಂಡಲ ಪಂಚಾಯಿತಿಗೆ ಬರುತ್ತದೆ. ಚುನಾಯಿತ ಪ್ರತಿನಿಧಿಗಳು ಯಾರು ಆರಿಸಿ ಬಂದಿದ್ದಾರೆ, ನಾಳೆ ಅವರಿಗೆ ನಿರಾಶೆಯಾಗುತ್ತದೆ ಎಂಬ ವಿಚಾರವನ್ನು ನಾನು ಹೇಳುತ್ತೇನೆ. ಇನ್ನು ಸಾರ್ಕ್ ಸಮ್ಮೇಳನದ ಬಗ್ಗೆ ಉಲ್ಲೇಖವಾಗಿದೆ. ನಮ್ಮ ಪ್ರಧಾನ ಮಂತ್ರಿಗಳು ಹಾಗೂ ಭೇಟಿ ನೀಡಿದ ಇತರ ಗಣ್ಯ ವ್ಯಕ್ತಿಗಳು ರಾಜ್ಯ ಸರಕಾರ ಮಾಡಿದ ವ್ಯವಸ್ಥೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ, ಅದಕ್ಕೆ ನಾವು ಕೃತಜ್ಞರಾಗಿದ್ದೇವೆ ಈ ಘಟನೆಯಿಂದಾಗಿ, ಅಂತರರಾಷ್ಟ್ರೀಯ ವಿಶೇಷ ಸಂದರ್ಭಗಳಿಗಾಗಿ ಬೆಂಗಳೂರನ್ನು ಕೇಂದ್ರ ಸ್ಥಳವಾಗಿ ಆಯ್ಕೆ ಮಾಡಬಹುದು ಎಂಬ ಭರವಸೆ ಇದೆ ಎಂದು ಸರಕಾರದವರು ಹೇಳಿದ್ದಾರೆ. ಆದರೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಯಲ್ಲಿ ಆರಿಸಿ ಬಂದ ಜನತಾ ಪ್ರತಿನಿಧಿಗಳಿಗೆ ಎಂತಹ ಆದರಾದಿತಿಥ್ಯ ಸಿಕ್ಕಿತು ಎಂಬುದನ್ನು ನೆನಪು ಮಾಡಿಕೊಂಡರೆ ಯಾವ ರೀತಿಯಲ್ಲಿ ನಮ್ಮ ಸರಕಾರದಿಂದ ಜನತಾ ಪ್ರತಿನಿಧಿಗಳನ್ನು ನೋಡಲಾಗುತ್ತಿದೆ ಎಂಬುದನ್ನು ನೆನಪು ಮಾಡಿಕೊಳ್ಳಬಹುದು. ೨೦ ಅಂಶಗಳ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಒಂದೆರಡು ಯೋಜನೆಗಳಿಗೆ ಸಂಬಂಧಿಸಿದಂತೆ ಮಾತ್ರ ಪ್ರಗತಿ ಮಂದಗತಿಯಲ್ಲಿದೆ ಎಂಬ ವಿಚಾರ ಇದೆ. ಕಳೆದ ವರ್ಷದ ಬಜೆಟ್ಟನ್ನು ನಮ್ಮ ಮುಂದಿಟ್ಟಾಗ ಆರು ವಿಚಾರಗಳಲ್ಲಿ ಮಾತ್ರ ಮುಂದಿದ್ದು ಇನ್ನು ೧೪ ಅಂಶಗಳಲ್ಲಿ ನಿಧಾನವಾಗಿದೆ ಎಂದು ಇತ್ತು, ಈಗ ಅದರ ಜೊತೆಗೆ ಎರಡು ವಿಚಾರ ಬಂತು ಎನ್ನುವುದು ದುರಾದೃಷ್ಟಕರವಾದುದು ಎಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇದು ಸಮರ್ಪಕವಾದುದಲ್ಲ. ಕುಡಿಯುವ ನೀರಿನ ವಿಚಾರದಲ್ಲಿ, ಬೋರ್ ವೆಲ್ ವಿಚಾರದಲ್ಲಿ ಪ್ರಗತಿಯಾಗಿರಬಹುದು, ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಮಾತನಾಡುತ್ತಾ, ಕರಾವಳಿ ಪ್ರದೇಶದಲ್ಲಿ ತೆರೆದ ಬಾವಿಗಳ ಅವಶ್ಯಕತೆ ಇದೆ, ಅಲ್ಲಿ ಬೋರ್‌ವೆಲ್ ಹಾಕುವುದಕ್ಕೆ

ಸಾಧ್ಯ ಇಲ್ಲ ಎಂದು ಹೇಳಿದರು. ಎನ್. ಆರ್. ಡಬ್ಲ್ಯೂ. ಎಸ್. ಸ್ಕೀಮ್ ಪ್ರಕಾರ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಾಗಿದೆ. ಅದನ್ನು ಮಾಡಿಲ್ಲ. ಅಲ್ಲಿ ತೆರೆದ ಬಾವಿಗಳ ವ್ಯವಸ್ಥೆ ಇಲ್ಲ. ಹಿಂದೆ ಮಾಡಿದ ಬಾವಿಗಳಿಗೆ ಹಣವನ್ನು ಪೂರ್ತಿಯಾಗಿ ಕೊಡಲಿಲ್ಲ. ಆದುದರಿಂದ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ಕರಾವಳಿ ಜಿಲ್ಲೆಗಳಿಗೆ ವಿಶಿಷ್ಟವಾದ ವ್ಯವಸ್ಥೆ ಮಾಡಬೇಕು. ಮಾನ್ಯ ಸಚಿವರಾದ ಅಬ್ದುಲ್ ನಜೀರ್ ಸಾಬ್‌ರವರು ನಮ್ಮ ಜಿಲ್ಲೆಗೆ ಬಂದಿದ್ದಾಗ ಈ ವಿಷಯ ಹೇಳಿದ್ದೇವೆ. ಮಾಡುತ್ತೇವೆಂದು ಆಶ್ವಾಸನೆ ಕೂಡಾ ಕೊಟ್ಟಿದ್ದರು. ಆದರೂ ಇದನ್ನು ಮಾಡಿಸಲಿಲ್ಲ. ಇದು ದುರಾದೃಷ್ಟಕರವಾದ ವಿಚಾರ. ಕಳೆದ ಸಾಲಿನಲ್ಲಿ ಬಡ್ಜೆಟ್‌ನ್ನು ಖಂಡನೆ ಮಾಡಿದಂಥ ಕಾಲದಲ್ಲಿ ನಮ್ಮ ಮುಂದೆ ೧೪ ಅಂಶಗಳ ಕಾರ್ಯಕ್ರಮವೊಂದನ್ನು ಉಲ್ಲೇಖ ಮಾಡಿದ್ದರು. ಆದರೆ ಈಗ ಎರಡೇ ಎರಡು ಅಂಶಗಳಿಗೆ ಇವರು ಬಂದಿದ್ದಾರೆ. ಇದೊಂದು ದುರಾದೃಷ್ಟಕರವಾದುದು, ಸಮಂಜಸವಾದುದು ಅಲ್ಲವೆಂದು ನಾನು ಹೇಳಲು ಅಪೇಕ್ಷೆ ಪಡುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ, ನಿನ್ನೆಯ ದಿವಸ ಮಾನ್ಯ ಸದಸ್ಯಣಿಯವರಾದ ಶ್ರೀಮತಿ ಮನೋರಮಾಮಧ್ವರಾಜ್ ರವರು, ನಮ್ಮ ಕರಾವಳಿ ಭಾಗದಲ್ಲಿ ಕೊಳವೆ ಬಾವಿಗಳು ಪ್ರಯೋಜನವಾಗುವುದಿಲ್ಲ, ನಮ್ಮ ಭಾಗದಲ್ಲಿ ತೆರೆದ ಭಾವಿಗಳನ್ನು ಮಾಡಿಸಿದರೆ ಅನುಕೂಲವಾಗುತ್ತದೆ, ಆದ್ದರಿಂದ ನಮ್ಮ ಭಾಗದಲ್ಲಿ ತೆರೆದ ಭಾವಿಗಳನ್ನು ಮಾಡಿಸಿ ಎಂದು ಹೇಳಿದರು. ಅದೇ ಮಾತನ್ನು ನಾನು ಸಹ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಭಾಗದಲ್ಲಿ ಕೊಳವೆ ಬಾವಿಗಳನ್ನು ತೋಡಿಸಿದರೆ ನೆರೆ ಬಂದು ಮುಳುಗಡೆಯಾಗುತ್ತವೆ. ಆದ್ದರಿಂದ ತೆರೆದ ಬಾವಿಗಳನ್ನು ಮಾಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಕೆಲವು ಕಡೆ ಹಾಕಿಕೊಂಡಂತಹ ಯೋಜನೆಗಳಿಗೆ ಸರ್ಕಾರ ಪೂರ್ತಿಯಾಗಿ ಹಣ ಕೊಟ್ಟಿಲ್ಲ. ಕರಾವಳಿ ಪ್ರದೇಶದಲ್ಲಿ ಇರತಕ್ಕಂಥ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಬೇಕು. ನಮ್ಮ ಜಿಲ್ಲಾ ಮಂತ್ರಿಗಳಾದಂಥ ಶ್ರೀಮಾನ್ ಅಬ್ದುಲ್‌ನಜೀರ್ ಸಾಬ್‌ರವರು ಬಂದಿದ್ದಾಗ ನಾವು ಈ ವಿಚಾರವನ್ನು ಅವರಿಗೆ ಹೇಳಿದ್ದೇವೆ. ಆಗ ಮಾನ್ಯ ಮಂತ್ರಿಗಳು ಮಾಡಿಸುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದರು, ಆದರೆ ಇದುವರೆವಿಗೂ ಅದು ಸಾಧನೆಯಾಗಿಲ್ಲ. ಇದು ಬಹಳ ದುರಾದೃಷ್ಟಕರವಾದಂಥ ಸಂಗತಿ. ಈ ಬಗ್ಗೆ ಸರ್ಕಾರ ಒಂದು ಯೋಜನೆಯನ್ನು ರೂಪಿಸಬೇಕಾಗಿವೆ. ಇನ್ನು ಪಠ್ಯಪುಸ್ತಕಗಳ ವಿತರಣೆ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈ ಬಗ್ಗೆ ಈ ಸದನದಲ್ಲಿ ದೊಡ್ಡ ಮಾತುಗಳು ಬಂದಿವೆ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಉಮರಬ್ಬರವರು ಹೇಳಿದ ಶಿವಧನಸ್ಸು ಕಥೆಯನ್ನು ನಾನು ಸಹ ಸ್ವಲ್ಪ ಮುಂದುವರಿಸಿ ಹೇಳಬೇಕಾಗಿದೆ. ಕಾರಣ ಅವರು ಆ ಕಥೆಯನ್ನು ಅರ್ಧದಲ್ಲಿಯೇ ನಿಲ್ಲಿಸಿಬಿಟ್ಟರು. ಪುಸ್ತಕ ಏತಕ್ಕೆ ಬರಲಿಲ್ಲ ಎಂದು ಹೋಗಿ ಶಾಲೆಯಲ್ಲಿ ಕೇಳಿದರೆ ಅಲ್ಲಿನ ಉಪಾಧ್ಯಾಯರು ನೀವು ಡಿ.ಡಿ.ಪಿ.ಐ. ಯವರನ್ನು ಹೋಗಿ ಕೇಳಿ ಎಂದರಂತೆ. ಅಲ್ಲಿಂದ ಡಿ.ಡಿ.ಪಿ.ಐ. ಯನ್ನು ಬಂದು ಕೇಳಿದರೆ ಪುಸ್ತಕ ಏತಕ್ಕೆ ಬರಲಿಲ್ಲ ಎಂದು ಇನ್ಸ್‌ಪೆಕ್ಟರ್‌ಗೆ ಎ.ಇ.ಒ.ಗೆ ಸರ್ಕ್ಯುಲರ್ ಕೊಟ್ಟರಂತೆ. ಹಾಗೆಯೇ ಶಿವಧನಸ್ಸು ಕಥೆಯಲ್ಲಿ ಇನ್ಸ್‌ಪೆಕ್ಟರ್ ಶಾಲೆಗೆ ಹೋಗಿ ಹೆಡ್‌ಮಾಸ್ಟರ್‌ಗೆ ನೋಟೀಸ್ ಕೊಟ್ಟರಂತೆ. ಏನೆಂದರೆ ಶಿವಧನಸ್ಸು ಯಾವ ಆಧಾರದ ಮೇಲೆ ಕ್ರಯ ಮಾಡಿದಿರಿ ? ಅದಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ ? ಅದನ್ನು ಏತಕ್ಕೆ ಜೋಪಾನವಾಗಿಟ್ಟಿದ್ದೀರಿ ? ಇತ್ಯಾದಿಗಳನ್ನೆಲ್ಲಾ ಕೇಳಿ ಸಮಜಾಯಿಸಿ ಕೇಳಿದ್ದರಂತೆ. ಹಾಗೆ ನಾವು ಇಲ್ಲಿ ಆದ್ಯತೆಗಳ ಮೇಲೆ ವಿಚಾರ ಮಾಡಬೇಕು. ನಾವು ೨೧ನೇ ಶತಮಾನಕ್ಕೆ ಹೋದರೂ ಸಹ ಕೃಷ್ಣಾ ಕಾವೇರಿ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ವರಾಹಿ ಯೋಜನೆ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಆಶ್ವಾಸನೆಯನ್ನು ಕೊಟ್ಟಿದ್ದರೂ ಸಹ ಅದು ಇನ್ನೂ ಕಾರ್ಯಗತ ಮಾಡುವ ಹಂತದಲ್ಲಿ ಇಲ್ಲ. ನಾವು ನಮ್ಮ ಅಗತ್ಯಗಳನ್ನು ವಿಚಾರ ಮಾಡತಕ್ಕಂಥ ಕಾಲದಲ್ಲಿ ರೈತರ ಆಗತ್ಯಗಳನ್ನು, ನೀರಾವರಿ ಬಗ್ಗೆ, ವಿದ್ಯುಚ್ಛಕ್ತಿ ಬಗ್ಗೆ ಮರು ಚಿಂತನೆಯನ್ನು ಮಾಡಬೇಕಾಗುತ್ತದೆ. ಇನ್ನು ಭೂಸುಧಾರಣೆ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ, ನಮ್ಮ ಜಿಲ್ಲೆಯಲ್ಲಿ ಈ ಭೂಸುಧಾರಣೆ ಕೇಸ್‌ಗಳನ್ನು ಇತ್ಯರ್ಥ ಮಾಡಲು ಒಂದು ಅಪಿಲೇಟ್ ಟ್ರಿಬ್ಯುನಲ್‌ನ್ನು ಮಾಡಿದರು. ಅವರು ನಮ್ಮ ಜಿಲ್ಲೆಯಲ್ಲಿ ಘೋರ ಅನ್ಯಾಯವನ್ನು ಮಾಡಿದ್ದಾರೆ. ಮಂಡಲ ಪಂಚಾಯಿತಿ ಚುನಾವಣೆಗಳಲ್ಲಿ ಬಹಳ ಜನರು ಅವರು ಬೆಂಬಲಿಗರು. ಆಳುವ ಪಕ್ಷದ ಕಡೆಯಿಂದ ಗೆದ್ದು ಬಂದಿರುವವರೆಲ್ಲರೂ ಅವರೇ. ಅವರು ಗೆದ್ದು ಬಂದ ತಕ್ಷಣ ಅವರ ಭೂಮಿ ಅವರಿಗೆ ಕೊಡುವ ಆಶ್ವಾಸನೆ ಕೊಟ್ಟಿದ್ದಾರೆ. ಇನ್ನೂ ಕೆಲವು ಕಡೆ ಬೆದರಿಕೆಗಳು ಸಹ ನಡೆದಿವೆ. ಈ ಅನ್ಯಾಯ ಅವರಿಗೆ ಶಾಪವಾಗಿ ಪರಿಣಮಿಸಲಿದೆ ಎಂದು ನಾನು ಹೇಳಲು ಅಪೇಕ್ಷೆ ಪಡುತ್ತೇನೆ. ಇನ್ನು ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಬೆಟರ್‌ಮೆಂಟ್ ಕಮಿಟಿ ಎಂದು ಮಾಡಿದ್ದಾರೆ. ಆ ಕಮಿಟಿಯವರು ಏನಾದರೂ ಸಲಹೆ ಮಾಡಿ ಕಳುಹಿಸಿಕೊಟ್ಟರೆ ೬ ತಿಂಗಳಾದರೂ ಅದು ಮಂಜೂರಾಗಿ ಬರುವುದಿಲ್ಲ. ಇದು ಈ ಸರ್ಕಾರದಲ್ಲಿ ನಡೆಯುವಂತಹ ಕ್ರಮ, ಈ ಸರ್ಕಾರದಲ್ಲಿ ಅಧಿಕಾರಿಗಳು

ಮಾಡುವಂತಹ ಕೆಲಸ. ಯಾವುದಾದರೂ ವಾರ್ಷಿಕ ಸಮಾರಂಭಗಳನ್ನು ಮಾಡಿದರೆ ಆ ಸಮಾರಂಭ, ಪತ್ರಿಕೆಗಳಲ್ಲಿ ಹಳೆಯ ಕಮಿಟಿ ಅಧ್ಯಕ್ಷರ ಹೆಸರನ್ನು ಹಾಕುವುದು. ಇದು ಶಾಸಕರಿಗೆ ಅಪಮಾನ ಮಾಡಿದಂತಾಗುವುದಿಲ್ಲವೇ ? ಈ ಕಮಿಟಿಗಳು ಇರಬೇಕೇ ಅಥವಾ ಬೇಡವೇ ? ಅದನ್ನು ತೀರ್ಮಾನ ಮಾಡಿ. ಇನ್ನು ಆಸ್ಪತ್ರೆಗಳಲ್ಲಿ ಸಂದರ್ಶನ ಸಮಿತಿಗಳೆಂದು ಮಾಡಿದ್ದೀರಿ. ಅವರು ಸಭೆ ಮೀಟಿಂಗ್ ನಡೆಸಿ ಡಾಕ್ಟರ್ಸ್ ಇಲ್ಲ. ಔಷಧಿಗಳು ಇಲ್ಲ. ಮಂದ್ದೂ ಇಲ್ಲ ಎಂದು ತಿಳಿಸಿದರೂ ಅಲ್ಲಿ ಡಾಕ್ಟರನ್ನು ಕೊಡುವ ವ್ಯವಸ್ಥೆ ಮಾಡುವುದಿಲ್ಲ. ಕಳೆದ ಎರಡು ವರ್ಷಗಳಿಂದ ಮದ್ದು ಕಳುಹಿಸಿ

೫–೦೦ ಪಿ.ಎಂ.

ಕೊಡದೇ ಇರುವ ನಿದರ್ಶನಗಳು ಇವೆ. ಹಿಂದುಳಿದ ವರ್ಗದ ಎರಡನೇ ಆಯೋಗವು ಒಂದು ವರದಿಯನ್ನು ಸಲ್ಲಿಸಿದೆ. ಕಾರಣಾಂತರದಿಂದ ಆ ವರದಿ ಅಂಗೀಕಾರ ಆಗಿಲ್ಲವೆಂದು ಹೇಳಿದ್ದಾರೆ: ಅಂಗೀಕಾರ ಮಾಡುವಾ ಅಥವಾ ಮಾಡದೇ ಇರುವ ಬಗ್ಗೆ ಆ ವರದಿಯನ್ನು ಮೊದಲು ಶಾಸನ ಸಭೆಯ ಮುಂದೆ ಇಡಬಹುದಾಗಿತ್ತು. ಶಾಸನ ಸಭೆಯಲ್ಲಿ ಅದನ್ನು ಇಟ್ಟು ಅದರ ಮೇಲೆ ಚರ್ಚೆ ಮಾಡಬಹುದಾಗಿತ್ತು. ಆದರೆ ಸರ್ಕಾರವೇ ತೀರ್ಮಾನ ತೆಗೆದುಕೊಂಡು ಅದನ್ನು ಅಂಗೀಕಾರ ಮಾಡಿಲ್ಲ. ಯಾರು ನಿಜವಾಗಿ ಹಿಂದುಳಿದಿದ್ದಾರೆ ಅವರಿಗೆ ಅನ್ಯಾಯವನ್ನು ಯಾಡಿದ್ದಾರೆಂದು ನಾನು ತಮ್ಮ ಮೂಲಕ ಹೇಳ ಬಯಸುತ್ತೇನೆ. ಉದ್ದಿಮೆಗಳು ಸಾಕಷ್ಟು ವಿದ್ಯುತ್ ಪೋಲುವನ್ನು ಅನುಭವಿಸಿ ಉತ್ಪಾದನೆಯಲ್ಲಿ ಬಹಳ ಕಡಿಮೆಯಾಗಿದೆ. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ಕನ್ನಡ ಕಾವಲು ಸಮಿತಿಯ ಬಗ್ಗೆ ಹೇಳಬೇಕಾದರೆ, ಅದಕ್ಕೆ ನೇಮಿಸಿರುವ ಅಧ್ಯಕ್ಷರು ಸ್ವಪ್ರತಿಷ್ಠೆಯಿಂದ ಕೆಲಸ ಮಾಡುತ್ತಿದ್ದಾರೆ. ಕನ್ನಡದ ಬಗ್ಗೆ ಎಲ್ಲರಿಗೂ ಅಭಿಮಾನ ಇದೆ. ಕನ್ನಡವನ್ನು ಮುಂದೆ ತೆಗೆದುಕೊಂಡು ಹೋಗಬೇಕೆಂದು ಎಲ್ಲಾ ಪಕ್ಷದವರಿಗೂ ಅಭಿಲಾಷೆ ಇದೆ, ಎಲ್ಲಾ ಜನತೆಗೂ ಸಹ ಇದೆ. ಆದ್ದರಿಂದ ಕನ್ನಡ ಕಾವಲು ಸಮಿತಿಯು ಕರ್ನಾಟಕಕ್ಕೆ ಬೇಡವೆಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ನೌಕರರ ಯೋಗ ಕ್ಷೇಮದ ಬಗ್ಗೆ ಸಾಕಷ್ಟು ಮಾತನ್ನು ಮಾನ್ಯ ಸದಸ್ಯರು ಆಡಿದ್ದಾರೆ. ಸೀನಿಯಾರಿಟಿ ಕುರಿತು, ಪೇಸ್ಕೇಲ್ ಕುರಿತು ಹೇಳಿದ್ದರೂ ಆ ವಿಷಯ ಇನ್ನೂ ನೆನೆಗುದ್ದಿಗೆ ಬಿದ್ದಿದೆ. ತಿರುಗಿ ಆಯೋಗ ರಚನೆ ಮಾಡುವುದು, ತಿರುಗಿ ಸಮಿತಿ ರಚನೆ ಮಾಡುವುದು, ಅವುಗಳ ಶಿಫಾರಸ್ಸನ್ನು ಕಡೆಗಣಿಸುವುದು ನಡೆಯುತ್ತಿದೆ. ಇಷ್ಟು ಹೇಳಿ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಯಾವ ವಿಚಾರವನ್ನು ಹೇಳಿದ್ದಾರೋ ಆ ವಿಚಾರಗಳು ಒಳ್ಳೆಯ ರೀತಿಯಲ್ಲಿ ಆಗಿಲ್ಲವೆಂದು ಹೇಳಿ, ನನ್ನ ಮಾತನ್ನು ಮುಗಿಸಿ, ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

†ಶ್ರೀ ಹೆಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ರಾಜ್ಯಪಾಲರ ಭಾಷಣದ ಮೇಲೆ ಆಗಿರತಕ್ಕಂಥ ಭಾಷಣವನ್ನು ನಾವು ಕುಳಿತು ಕೇಳಿದ್ದೇವೆ. ಆದರೆ, ಬರೀ ಘೋಷಣೆಗಳ ಭಾಷಣವಾಗಿದೆಯೇ ಹೊರತು ವಾಸ್ತವಾಂಶಗಳು ಏನು ಎನ್ನತಕ್ಕ ಬಗ್ಗೆ ಚರ್ಚೆ ಆಗಿಲ್ಲವೆಂದು ಹೇಳಿದರೆ ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ. ಇಲ್ಲಿಯವರೆಗೆ ನಡೆದಂಥ ಭಾಷಣಗಳಲ್ಲಿ ಮಂಡಲ ಪಂಚಾಯಿತಿ ಯಾವ ರೀತಿ ನಡೆಯಿತು, ಅದರ ಔಚಿತ್ಯ ಏನು ಎನ್ನುವುದರ ಬಗ್ಗೆ ಹೇಳಿದ್ದಾರೆ. ನಾನೂ ಸಹ ಆದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ, ಹೆಚ್ಚಿಗೆ ಲಂಬಿಸುವುದಕ್ಕೆ ಹೋಗುವುದಿಲ್ಲ. ಮಂಡಲ ಪಂಚಾಯಿತಿ ಚುನಾವಣೆಯನ್ನು ನೀವು ಮಾಡಿದ್ದೀರಿ, ಹಿಂದೆ ತಾಲ್ಲೂಕು ಬೋರ್ಡ್ ಇರಲಿಲ್ಲವೇ ಎಂದು ಆ ಕಡೆಯ ಅನೇಕ ಮಾನ್ಯ ಸದಸ್ಯರು ಕೇಳಿದ್ದಾರೆ. ಮೊದಲು ಇದೇ ರೀತಿ ಚುನಾವಣೆಗಳು ಇದ್ದವು, ಎರಡು ಮೂರು ವರ್ಷಗಳಿಂದ ಮಾತ್ರ ಅದಕ್ಕೆ ಚುನಾವಣೆಗಳು ನಡೆದಿರಲಿಲ್ಲ. ಆ ತಾಲ್ಲೂಕು ಬೋರ್ಡ್‌ಗಳನ್ನೆಲ್ಲ ಸೂಪರ್‌ಸೀಡ್ ಮಾಡಿ ತಿರುಗಿ ಅದೇ ತರದ ಚುನಾವಣೆಗಳನ್ನು ತಂದಿದ್ದೀರಿ ಎನ್ನತಕ್ಕ ಮಾತುಗಳು ಆ ಕಡೆ ಸದಸ್ಯರಿಂದ ಕೇಳಿ ಬರುತ್ತಿದ್ದವು. ಮಾನ್ಯ ಅಧ್ಯಕ್ಷರೇ, ನಾನೂ ಸಹ ಈ ಹಿಂದೆ ೧೪ ವರ್ಷಗಳ ಕಾಲ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದೆ. ಅವತ್ತು ತಾಲ್ಲೂಕು ಬೋರ್ಡ್‌ಗಳಿಗೆ ಯಾವ ಅಧಿಕಾರವನ್ನು ಕೊಟ್ಟಿರಲಿಲ್ಲ, ತಾಲ್ಲೂಕು ಬೋರ್ಡುಗಳಿಗೆ ಹಣದ ವ್ಯವಸ್ಥೆಯೂ ಇರಲಿಲ್ಲ. ಆಗಿನ ಪಂಚಾಯಿತಿ ಹೇಗೆ ಇತ್ತು ಎಂದರೆ ಒಬ್ಬ ಮನುಷ್ಯನ ಸ್ಕೆಲಿಟನ್ ಚಿತ್ರ ಇದ್ದ ಹಾಗೆ ಇತ್ತು. ಪಂಚಾಯಿತಿಗಳಿಗೆ ೩೦ ಪರ್‌ಸೆಂಟ್ ಲ್ಯಾಂಡ್ ರೆವಿನ್ಯೂ ಕೊಡುತ್ತೇವೆ, ನೀವೇ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡು ಹೋಗಿ ಎಂದು ಹೇಳುವ ಕಾಲ ಆದಾಗಿತ್ತು. ಒಂದು ಗ್ರೂಪ್ ಪಂಚಾಯಿತಿಗೆ ನಾಲ್ಕು ನೂರು ರೂಪಾಯಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗಳಿಂದ ಎರಡು ಸಾವಿರ ಅಥವಾ ಮೂರು ಸಾವಿರ ರೂಪಾಯಿಗಳವರೆಗೆ ಮಾತ್ರ ಆದಾಯ ಇತ್ತು. ಆ ಹಣದಲ್ಲಿ ಯಾವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಪಂಚಾಯತಿಗಳಿಗೆ ಯಾವುದೇ ಅಧಿಕಾರವೂ ಕೂಡ ಇರಲಿಲ್ಲ. ಒಂದು ತಾಲ್ಲೂಕು ಬೋರ್ಡಿಗೆ ಲ್ಯಾಂಡ್ ರೆವಿನ್ಯೂ ಇಂದ ಕೇವಲ ೩೦ ಪರ್‌ಸೆಂಟ್ ಮಾತ್ರ ಕೊಡುತ್ತಿದ್ದರು. ಒಂದು ತಾಲ್ಲೂಕು ಬೋರ್ಡಿಗೆ ಇದರಿಂದ ಒಂದು ಲಕ್ಷ ಅಥವಾ ಒಂದೂವರೆ ಲಕ್ಷ ರೂಪಾಯಿ ಮಾತ್ರ ಬರುತ್ತಿತ್ತು. ನನ್ನ ತಾಲ್ಲೂಕಿನದು ಹೇಳಬೇಕಾದರೆ, ಒಂದು ವರ್ಷಕ್ಕೆ ಒಂದು ಲಕ್ಷದ ೨೫ ಸಾವಿರ ರೂಪಾಯಿಗಳು ಬರುತ್ತಿತ್ತು. ಅವರಲ್ಲಿ ೬೦ ಸಾವಿರ ರೂಪಾಯಿಗಳು ಸಿಬ್ಬಂದಿ ವೇತನಕ್ಕೆ ಹೋಗುತ್ತಿತು. ಇನ್ನು ಉಳಿದ ೬೦ ಅಥವಾ ೬೫ ಸಾವಿರದಲ್ಲಿ ಇಡೀ ತಾಲ್ಲೂಕಿನಲ್ಲಿ ಅಭಿವೃದ್ಧಿ ಕೆಲಸಗಳನನ್ನು ಮಾಡಿಸಬೇಕಾಗುತ್ತಿತ್ತು. ಇಷ್ಟು ಕಡಿಮೆ ಹಣದಲ್ಲಿ ಯಾವ ರೀತಿ ಕೆಲಸ ಮಾಡಿಸುವುದು ? ಹಾವು ಸಾಯಬೇಕು ಕೋಲು ಮುರಿಯಬಾರದು ಎನ್ನುವ ಪರಿಸ್ಥಿತಿಯಲ್ಲಿ ಕೆಲಸಗಳು ನಡೆದುಕೊಂಡು ಹೋಗುತ್ತಿತು. ಇಂಥ ತಾಲ್ಲೂಕು ಬೋರ್ಡ್‌ಗಳು ಇಲ್ಲದಿದ್ದರೇ ಒಳ್ಳೆಯದೆಂದು ಅನಿಸುತ್ತಿತ್ತು. ಆಗ ಇಂತಹ ಒಂದು ವ್ಯವಸ್ಥೆ ಇಲ್ಲದಿದ್ದರೇ ಚೆನ್ನಾಗಿ ಇರುತ್ತಿತ್ತು ಎನ್ನಿಸುತ್ತಿತ್ತು. ಕುಡಿಯುವ ನೀರಿನ ಬಾವಿಗಳು ಇಲ್ಲ, ಚರಂಡಿ ವ್ಯವಸ್ಥೆ ಇಲ್ಲ, ರಸ್ತೆಗಳು ಇಲ್ಲ ಎಂದು ಎಲ್ಲೆಲ್ಲೂ ಅರ್ತನಾದ ಕೇಳಿಬರುತ್ತಾ ಇತ್ತು. ಆದರೆ ಈಗ ಆ ಪರಿಸ್ಥಿತಿಯು ಇಲ್ಲ. ಇದನ್ನು ಮನಗಂಡು ಮಹಾತ್ಮಗಾಂಧಿ ಜಿಯವರು ಹೇಳುತ್ತಿದ್ದರು ''ಡೆಲ್ಲಿಯಲ್ಲಿರತಕ್ಕ ಅಧಿಕಾರ. ಹಳ್ಳಿಗೆ ಹೋಗಬೇಕು, ಹಳ್ಳಿಯ ಜನರಿಗೆ ತಮ್ಮ ಸ್ವಇಚ್ಛೆಯಿಂದ ಯಾವುದೇ ಕೆಲಸವನ್ನು ಮಾಡಿಕೊಳ್ಳುವ ಅವಕಾಶ ಎಂದು ಸಿಗುತ್ತದೋ ಆಗ ಮಾತ್ರ ರಾಮರಾಜ್ಯ ಬಂದಂತಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳುತ್ತಿದ್ದರು. ಆ ದಿನಗಳಲ್ಲಿ ನಮಗೆ ಹಳ್ಳಿಗಳಲ್ಲಿ ಚರಂಡಿ ವ್ಯವಸ್ಥೆ ಮಾಡಬೇಕಾದರೆ, ರಸ್ತೆಗಳನ್ನು ಮಾಡಬೇಕಾದರೆ, ಬಿ. ಡಿ. ಓ. ದವರ, ತಾಲ್ಲೂಕು ಬೋರ್ಡ್‌ನವರ ಅನುಮತಿ ಪಡೆಯ ಬೇಕಾಗಿತ್ತು. ಆದರೆ ಇವೊತ್ತು ಆ ಪರಿಸ್ಥಿತಿ ಇಲ್ಲ. ಜನಗಳಿಗೆ ನಿಮ್ಮ ಅಧಿಕಾರಗಳನ್ನು ನಿಮಗೇ ಕೊಟ್ಟಿದ್ದೇವೆ. ಎನ್ನತಕ್ಕಂಥಾದ್ದರ ಬಗ್ಗೆ ಬಹಳ ಟೀಕೆಗಳು ಬಂದವು ಜನಗಳಿಗೆ ಅಧಿಕಾರವನ್ನು ಕೊಟ್ಟಿದ್ದರ ಉದ್ದೇಶ, ಸದುದ್ದೇಶವಾಗಿದೆ. ಅವರು ಸಂಪಾದನೆ ಮಾಡಿದ ಹಣವನ್ನು ಅವರೇಖರ್ಚು ಮಾಡುವಂತಹ ಮತ್ತು ತನ್ಮೂಲಕ ಅಭಿವೃದ್ಧಿ ಹೊಂದುವಂತಹ ಒಂದು ವ್ಯವಸ್ಥೆ ಈಗ ಆಗಿದೆ. ಆ ವ್ಯವಸ್ಥೆಯೇ ಮಂಡಲ ಪಂಚಾಯತ್ ವ್ಯವಸ್ಥೆಯಾಗಿದೆ. ಇವೊತ್ತು ೧೦ ಲಕ್ಷ ರೂಪಾಯಿಗಳನ್ನು ಒಂದು ಮಂಡಲಪಂಚಾಯತಿಗೆ ಕೊಡುತ್ತೇವೆ ಎಂದು ಹೇಳಿರ ತಕ್ಕಂಥಾದ್ದು ಇದೆ. ೧೦ ಲಕ್ಷರೂಪಾಯಿಗಳು ಅಲ್ಲದಿದ್ದರೂ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಕು. ಹಳ್ಳಿಗಳಲ್ಲಿನ ಎಲ್ಲಾ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಸಣ್ಣಸಣ್ಣ ನೀರಾವರಿ ಕೆಲಸಗಳನ್ನು ರಸ್ತೆಗಳನ್ನು ಚರಂಡಿ ವ್ಯವಸ್ಥೆಗಳನ್ನು, ಊರಿಂದ ಊರಿಗೆ ಸಂಪರ್ಕ ಮಾರ್ಗವನ್ನು ಮಾಡಿಕೊಳ್ಳುವುದಕ್ಕೆ ಒಂದು ಅವಕಾಶ ಆಗುತ್ತದೆ ಇಂತಹ ಒಂದು ಅವಕಾಶ ವಾಗಲೀ, ಒಂದು ಅಧಿಕಾರವಾಗಲೀ ಹಳ್ಳಿಗಳ ಮಟ್ಟದಲ್ಲಿ ಇರಲಿಲ್ಲ, ಈಗ ಅದು ಒದಗಿ ಬಂದಿದೆ. ಅಂತೆಯೇ ಆರು ತಿಂಗಳುಗಳಿಗೆ ಒಮ್ಮೆ ಗ್ರಾಮಸಭೆಯನ್ನು ಕರೆದು, ಎಲ್ಲಾ ಮತದಾರರ ಅನುಮತಿ ಯನ್ನು ಪಡೆದು, ಅವರು ಸೂಚನೆ ಕೊಡುವ ಕೆಲಸಕಾರ್ಯಗಳನ್ನು ಪರಿಶೀಲನೆ ಮಾಡಿ ಮಂಜೂರಾತಿ ಕೊಟ್ಟು ಮಾಡುವ ವ್ಯವಸ್ಥೆ ಮಂಡಲಪಂಚಾಯತ್‌ನಲ್ಲಿ ಆಗಿದೆ. ಈ ಒಂದು ವ್ಯವಸ್ಥೆ ಹಿಂದೆ ಇರಲಿಲ್ಲ. ಹಿಂದಿನ ವ್ಯವಸ್ಥೆಗೂ, ಇಂದಿನ ವ್ಯವಸ್ಥೆಗೂ, ಕತ್ತೆ ಮತ್ತು ಕುದುರೆಯ ವ್ಯತ್ಯಾಸ ಇದೆ. ಆ ಒಂದು ತಾರತಮ್ಯ ಇತ್ತು. ಇವೊತ್ತಿನ ಒಂದು ವ್ಯವಸ್ಥೆಯು ಬಹಳ ಅರ್ಥಪೂರ್ಣವಾದ ವ್ಯವಸ್ಥೆಯಾಗಿದೆ. ಆಯಾಯ ಮಂಡಲ ಪಂಚಾಯಿತಿಯವರು ತಮ್ಮ ಅಭಿವೃದ್ಧಿಕಾರ್ಯಗಳನ್ನು ಸ್ವಇಚ್ಛೆಯಿಂದ ಮಾಡಬಹುದಾಗಿದೆ.

ಕೆಲವು ಮಾನ್ಯ ಸದಸ್ಯರು ಹಣ ದುರುಪಯೋಗ ಆಗುತ್ತಿದೆ ಎಂದು ಹೇಳಿದರು. ಇದು ಹೊಸದೇನಲ್ಲ. ಹಿಂದೆಯೂ ಆಗುತ್ತಿತ್ತು. ಹಿಂದೆ ಮುಖ್ಯಮಂತ್ರಿಗಳಾಗಿದ್ದವರು ಹೆಲಿಕಾಪ್ಟರ್‌ನಲ್ಲಿ ಹಾರಾಡುತ್ತಾ ಇದ್ದರು. ರಾಮನಗರಕ್ಕೆ, ಚನ್ನಪಟ್ಟಣಕ್ಕೆ, ಆನೇಕಲ್ಲಿಗೆ ಹೀಗೆ ಎಲ್ಲಿಗೆ ಹೋಗ ಬೇಕಾದರೂ ಹೆಲಿಕಾಪ್ಟರ್ ಬಳಸುತ್ತಿದ್ದರು. ಕಾರಿನಲ್ಲಿ ಹೋಗುವ ಖರ್ಚಿಗೂ, ಹೆಲಿಕಾಪ್ಟರ್‌ನಲ್ಲಿ ಹೋಗುವ ಖರ್ಚಿಗೂ ವ್ಯತ್ಯಾಸವನ್ನು ನೋಡಿದರೆ ತಿಳಿಯುವುದಿಲ್ಲವೇ ? ಹಣದ ದುರುಪಯೋಗದ ರೀತಿನೀತಿ ? ಇವೊತ್ತು ಕೂಡ ಅಲ್ಪ ಸ್ವಲ್ಪ ಆಗಿರಬಹುದು. ಆದರೆ ಸಣ್ಣ ವಿಷಯಗಳನ್ನು ತೆಗೆದು ಕೊಂಡು, ಇಲ್ಲಸಲ್ಲದ ಆರೋಪಣೆಗಳನ್ನು ಮಾಡುವುದು ಸರಿಯಲ್ಲ. ಹಿಂದೆ ಆದುದನ್ನು ಮರೆತು ಈಗ ಹೀಗೆ ಮಾಡುತ್ತಿದ್ದಾರೆಂದು ದೂಷಿಸುವುದು ಸರಿಯಲ್ಲ. ತನ್ನ ಎಲೆಯಲ್ಲಿ ಕತ್ತೆ ಬಿದ್ದು ನಾರುತ್ತಿದ್ದರೂ ಕೂಡ, ಇತರರ ಎಲೆಯಲ್ಲಿ ಬಿದ್ದ ನೊಣದ ಬಗ್ಗೆ ಹೇಳುವ ಪ್ರವೃತ್ತಿ ಸಾಧುವಾದುದಲ್ಲ. ಇದು ಅನ್ಯಾಯವಾಗುತ್ತದೆ.

ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ವಿಶೇಷವಾಗಿ ಬಂತು. ಇಂತಹ ಒಂದು ಕಠಿಣ ಪರಿಸ್ಥಿತಿಯನ್ನು ಎದುರಿಸ ಬೇಕಾಗಿ ಬಂತು. ಸುಮಾರು ೬೦ವರ್ಷಗಳ ಹಿಂದೆ ಕತ್ತಾಳೆ ಬರಗಾಲ ಬಂದ ಪರಿಸ್ಥಿತಿಯನ್ನು ನಮ್ಮ ಹಿರಿಯರು ಹೇಳುತ್ತಾ ಇದ್ದರು. ಪ್ಲೇಗ್, ಇನ್‌ಫ್ಲೂಯೆಂಜಾ, ಮತ್ತಿತರ ಭೀಕರ ರೋಗಗಳು ಬಂದ ಕಾರಣ ಹಳ್ಳಿಗೆ ಹಳ್ಳಿಗಳೇ ಖಾಲಿಯಾಗುತ್ತಿದ್ದ ಪರಿಸ್ಥಿತಿ ಬಂತು. ಸತ್ತವರ ಹೆಣಗಳನ್ನು ಹೊರುವವರೇ ಇರುತ್ತಿರಲಿಲ್ಲ. ಅಂತಹ ಒಂದು ಕಠಿಣ ಪರಿಸ್ಥಿತಿ ಇತ್ತು ಎಂದು ಹೇಳುತ್ತಿದ್ದರು. ಕರ್ನಾಟಕದಲ್ಲಿ ನಾಲ್ಕು ವರ್ಷಗಳು ಬರಗಾಲ ಪರಿಸ್ಥಿತಿಗೆ ಒಳಗಾಗುವಂತಾಯಿತು. ಇಂತಹ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಬಾವಿಗಳು, ಆಹಾರಧಾನ್ಯಗಳು, ಜಾನುವಾರುಗಳಿಗೆ ಮೇವು. ಇತ್ಯಾದಿಗಳನ್ನು ಸರಕಾರ ಸಕಾಲದಲ್ಲಿ ಒದಗಿಸಿ ಜನ ಮತ್ತು ಜಾನುವಾರಗಳು ರಕ್ಷಣೆಯಲ್ಲಿ ಮಹತ್ವದ ಪಾತ್ರವನ್ನು ಕಷ್ಟ ಕಾಲದಲ್ಲಿಯೂ ಯಶಸ್ವಿಯಾಗಿ ನಿರ್ವಹಿಸಿತು. ಹಿಂದೆ ಅಶೋಕ ಚಕ್ರವರ್ತಿಯು ಬರಗಾಲದ ಕಾಲದಲ್ಲಿ, ಜನಗಳಿಗೆ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡ ನೆನಪು ಬರುತ್ತದೆ. ಆಗ ಚಕ್ರವರ್ತಿಯು ರಾಜ್ಯದಲ್ಲಿ ರಸ್ತೆಗಳನ್ನು ಮಾಡಿಸುವ, ಕೆರೆಕೊಳಗಳನ್ನು ನಿರ್ಮಿಸುವ, ಸಾಲುಮರ ಗಳನ್ನು ಹಾಕಿಸುವ, ಮತ್ತಿತರ ಸ್ತುತ್ಯಾರ್ಹವಾದ ಕೆಲಸಗಳನ್ನು ಮಾಡಿದುದನ್ನು ನಾವು ಚರಿತ್ರೆಯಲ್ಲಿ ಓದಿದ್ದೇವೆ. ಅಂತಹುದೇ ಕೆಲಸಕಾರ್ಯಗಳನ್ನು ನಮ್ಮ ಸರಕಾರ ತೆಗೆದುಕೊಂಡಿದೆ. ಅದನ್ನು ನಾವು ನಾಲ್ಕು ವರ್ಷಗಳಲ್ಲಿ ನೋಡಿದ್ದೇವೆ. ಬರಗಾಲ ಪರಿಸ್ಥಿತಿಯನ್ನು ಪ್ರಸ್ತಾಪ ಮಾಡಿದ ಕಾಲದಲ್ಲಿ ರಾಜ್ಯಪಾಲರು ಅದನ್ನು ಹೇಳಿದ್ದಾರೆ. ಆದುದರಿಂದ ಇದರ ಬಗ್ಗೆ ಯಾರೂ ಟೀಕೆ ಮಾಡಬೇಕಾಗಿಲ್ಲ ಎಂದು ನನಗನ್ನಿಸುತ್ತದೆ, ನಾನು ೧೯೭೨ರಲ್ಲಿ ಶಾಸನ ಸಭಾ ಸದಸ್ಯನಾಗಿದ್ದೆ. ಆಗ ರಾಜ್ಯದಲ್ಲಿ ಕೇವಲ ೩೦೦-ಬೋರ್‌ವೆಲ್‌ಗಳು ಇದ್ದುವು. ಈಗ ೧, ೮೦೦-ಬೋರ್‌ವೆಲ್‌ಗಳು ಇವೆ. ಅಂದರೆ ೧೫೦೦ ಬೋರ್‌ವೆಲ್‌ಗಳ ವ್ಯತ್ಯಾಸ ಆಯಿತು. ಜನರಿಗೆ ಸ್ವಾತಂತ್ರ್ಯ ಬಂದರೂ ಕುಡಿಯುವ ನೀರಿಗೆ ಗತಿ ಇಲ್ಲವಲ್ಲ ಎಂಬ ಒಂದು ಕಳವಳವನ್ನು ಹೋಗಲಾಡಿಸುವಲ್ಲಿ ಈ ಸರಕಾರ ತನ್ನ ಪ್ರಯತ್ನ ವನ್ನು ಮಾಡಿದೆ. ಆ ಒಂದು ಪರಿಸ್ಥಿತಿಯನ್ನು ಮನಗಂಡು ಯಥೇಚ್ಛವಾಗಿ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆಯಾಗಿದೆ. ಇದು ಮಾನ್ಯ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ, ಅವರ ಮೇಲೆ ಜನರು ಇಟ್ಟ ಒಂದು ವಿಶ್ವಾಸಕ್ಕೆ, ಮನ್ನಣೆಗೆ, ಸರಕಾರ ಮಾಡಿದ ಕರ್ತವ್ಯವಾಗಿದೆ. ನಾನು ಈ ಮಾತುಗಳನ್ನು ರಾಮಕೃಷ್ಣ ಹೆಗಡೆಯವರನ್ನು ಹೊಗಳಲಿಕ್ಕೆ ಆಡುತ್ತಾ ಇಲ್ಲ. ಇದು ಸತ್ಯಸಂಗತಿ. ಹೆಗಡೆಯವರನ್ನು ಹೊಗಳಬೇಕೆಂದು ನಾನು ಮಾತನಾಡುತ್ತಿಲ್ಲ. ೩೫ ವರ್ಷಗಳಲ್ಲಿ ಯಾರೂ ಅಂಥ ರಿಸ್ಕಿನ ಹೆಜ್ಜೆಯನ್ನು ಇಟ್ಟಿರಲಿಲ್ಲ. ನಮ್ಮ ಕೆಲಸ ನೋಡಿ, ವೋಟು ಕೊಡಿ ಎಂದರು, ಇಲ್ಲದಿದ್ದರೆ ಮನೆಗೆ ಹೋಗೋಣ ಎಂದರು. ಮಂತ್ರಿಮಂಡಲವನ್ನು ವಿಸರ್ಜನೆ ಮಾಡಿ ಹೋದರು. ನಮ್ಮ ನಿಸ್ಪೃಹತೆಯನ್ನು ಮನಗಂಡ ಜನತೆ ಅಸೆಂಬ್ಲಿಗೆ ೧೪೦ ಸ್ಥಾನಗಳನ್ನು ಗೆಲ್ಲಿಸಿ ಮೂರನೇ ಎರಡು ಭಾಗಕ್ಕಿಂತ ಮೆಜಾರಿಟಿ ಗಳಿಸಿಕೊಟ್ಟಿತ್ತು. ಚುನಾವಣಾ ಸಮಯದಲ್ಲಿ ಅಧಿಕಾರ ಹಂಚಿಕೊಡುತ್ತೇವೆ ಎಂದಿದ್ದೆವು. ಈಗ ಆ ಮಾತನ್ನು ಉಳಿಸಿಕೊಂಡಿದ್ದೇವೆ.

ಅಧ್ಯಕ್ಷರು.—ಚನ್ನಪ್ಪನವರೇ ಇನ್ನು ೧೦ ನಿಮಿಷ ಇದೆ. ಈಗಾಗಲೇ ಕಾಂಗ್ರೆಸ್‌ನವರು ೭೮ ನಿಮಿಷ, ಜನತಾ ದವರು ೭೫ ನಿಮಿಷ ಮಾತನಾಡಿದ್ದಾರೆ.

ಶ್ರೀ ಹೆಚ್. ಜಿ. ಚನ್ನಪ್ಪ.—ವಿಷಯ ಬೇಕಾದಷ್ಟು ಇವೆ. ನೀವು ಬೆಲ್ ಹೊಡೆದರೆ ನನಗೆ ಮಾತ ನಾಡಲು ಆಗುವುದಿಲ್ಲ. ಆ ಕಡೆಯವರು ಸ್ವಾರಸ್ಯವಿಲ್ಲದೆ ಗಲಭೆ ಎಬ್ಬಿಸುವಂತೆ ಮಾತನಾಡುವಾಗ ಜಾಸ್ತಿ ಟೈಮ್ ಕೊಡ್ತೀರಿ. ನಾನು ಸ್ವಾರಸ್ಯಕರವಾಗಿ ಮಾತನಾಡುತ್ತಿದ್ದರೆ ಬೆಲ್ ಬಾರಿಸುತ್ತೀರಿ. ಇನ್ನು ಪಠ್ಯಪುಸ್ತಕಗಳ ಬಟ್ಟೆಗಳ ವಿಚಾರ ಹೇಳಬೇಕೆಂದರೆ ಎಷ್ಟೋ ಜನ ಬಡ ತಂದೆ ತಾಯಿಗಳಿಗೆ ಮಕ್ಕಳಿಗೆ ಪುಸ್ತಕ ಬಟ್ಟೆ ಹೊಂದಿಸಿಕೊಡುವುದೇ ಕಷ್ಟವಾಗಿತ್ತು. ಇದರಿಂದ ಮಕ್ಕಳನ್ನು ಎಷ್ಟೋ ಸಲ ಶಾಲೆಗೆ ಕಳಿಸಲಾಗುತ್ತಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಉಚಿತವಾಗಿ ಬಟ್ಟೆ. ಪುಸ್ತಕವನ್ನು ಕೊಟ್ಟ ಮೇಲೆ ಪೋಷಕರು ಮಕ್ಕಳನ್ನು ಶಾಲೆಗೆ ಕಳಿಸುತ್ತಿದ್ದಾರೆ. ಇದರಿಂದ ಶಾಲೆಗಳ ಬೇಡಿಕೆಯೂ ಜಾಸ್ತಿಯಾಗುತ್ತಿದೆ. ಕಾರಣವೇನೆಂದರೆ, ಸರ್ಕಾರ ನಮ್ಮ ಮಕ್ಕಳಿಗೆ ಬಟ್ಟೆ ಕೊಟ್ಟಿದೆ, ಪುಸ್ತಕ ಕೊಟ್ಟಿದೆ. ಇನ್ನು ನಮ್ಮ ಮಕ್ಕಳನ್ನು ನಿರ್ಭಯವಾಗಿ ಶಾಲೆಗೆ ಕಳಿಸುವ ಧೈರ್ಯ ಬಂದಿದೆ. ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣವನ್ನು ಪುಕ್ಕಟೆಯಾಗಿ ಕೊಡಬೇಕೆನ್ನುವ ಇರಾದೆಯೂ ಜನತಾ ಸರ್ಕಾರದ ಮುಂದಿದೆ.

ಇನ್ನು ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಚುನಾವಣೆ ಸಮಯದಲ್ಲಿ ಹೆಂಡದ ಹೊಳೆ, ಹಣದ ರಾಶಿ ಹರಿಯಿತ್ತು ಎಂಬ ಮಾತು ಬರುತ್ತದೆ. ಇದನ್ನು ಮಾಡಿದವರು ಯಾರು ಎಂಬುದನ್ನು ತಿಳಿಯಬೇಕಾದರೆ ಒಂದು ಸಮಿತಿ ಮಾಡಿ ಹಳ್ಳಿಗಳಿಗೆ ಕಳಿಸಿದರೆ ಗೊತ್ತಾಗುತ್ತದೆ.

ನನ್ನ ಕ್ಷೇತ್ರದ್ದು ಹೇಳಬೇಕಾದರೆ, ೬ ಜಿಲ್ಲಾ ಪರಿಷತ್ ಸ್ಥಾನಗಳಲ್ಲಿ ೫ ಸ್ಥಾನಗಳ ಕ್ಷೇತ್ರಗಳಲ್ಲಿ ಹೆಂಡ, ಹಣ ಹೇರಲಿಕ್ಕಾಗಲಿಲ್ಲವಾದ್ದರಿಂದ ನಮ್ಮವರು ೫ ಮಂದಿ ಗೆದ್ದು ಬಂದರು. ಇನ್ನೊಂದು ಮಂಡಳಿಯಲ್ಲಿ ಮಾತ್ರ ಹೆಂಡದ ಹೊಳೆಯನ್ನೇ ಹರಿಸಿ ಬರೀ ೫೦ ವೋಟ್‌ಗಳಲ್ಲಿ ಅವರ ಕಡೆಯವರು ಗೆದ್ದರು. ಯಾರೋ ಕೂರ್ಗಿನ ಕಡೆಯ ಒಬ್ಬ ಕಂಟ್ರಾಕ್ಟರ್ ಬಂದು ಚಾಡಿಗಟ್ಟಲೆ ಕೊಟ್ಟ. ಇಷ್ಟನ್ನೆಲ್ಲ ಅಲ್ಲಿ ಮಾಡಿಯಾದ ಮೇಲೆ ಇನ್ನು ದೂರು ಕೊಡದಿದ್ದರೆ ನಮ್ಮ ತಪ್ಪು ಗೊತ್ತಾಗಿಬಿಡುತ್ತದೆಂದು ಮೊದಲು ಇವರೇ ಹೋಗಿ ರಾಜ್ಯಪಾಲರಿಗೆ ದೂರು ಕೊಟ್ಟರು. ಮಾನ್ಯ ಸಭಾಪತಿಗಳಾದ ತಿಮ್ಮೇಗೌಡರ ಕ್ಷೇತ್ರದಲ್ಲಿ ಹೆಂಡದ ಜೊತೆಗೆ ಚಾಪ್ಸನ್ನು ಪ್ಲಾಸ್ಟಿಕ್ ಪಾಕೆಟ್‌ಗಳಲ್ಲಿ ಪಿನ್ ಮಾಡಿ ಕೊಟ್ಟು ವೋಟ್ ಪಡೆದಿದ್ದಾರೆ. ಇದನ್ನೆಲ್ಲ ನಾವು ಮಾಡಿದ್ದೇವೆಯೇ ? ಇವರು ದುಡ್ಡು ಹೆಂಡವನ್ನು ಖರ್ಚು ಮಾಡದಿದ್ದರೆ ಇಷ್ಟು ಸ್ಥಾನಗಳೂ ಅವರಿಗೆ ಬರುತ್ತಿರಲಿಲ್ಲ. ನಿರ್ದೋಷಿಗಳಾದ ನಾವೇ ದೂರು ಕೊಟ್ಟಿಲ್ಲ. ಇದೆಲ್ಲ ಬಹಳ ಗಂಭೀರವಾದ ವಿಷಯ. ಪತ್ರಿಕೆಗಳಲ್ಲೆಲ್ಲ ಓದಿದ್ದೇವೆ. ಜನರು ಆ ಸ್ಟೇಟ್‌ಮೆಂಟನ್ನು ನೋಡಿ ನಕ್ಕಿದ್ದಾರೆ, ಹೀಗೆ ಹೇಳಿಕೊಳ್ಳುತ್ತಾರೆ ಇದು ಸರಿಯೇ ಎಂಬ ಭಾವನೆಯನ್ನು ಜನತೆ ಇಟ್ಟುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಅನೇಕ ಇತಿಹಾಸಗಳು ನಡೆದಿದೆ. ನೀರಾವರಿ ಯೋಜನೆಯನ್ನು ತೆಗೆದುಕೊಳ್ಳುವುದಾದರೆ ಹಿಂದೆ ಕನಕಪುರದಲ್ಲಿ ಹಾರೋಬೆಲೆ ಪ್ರಾಜೆಕ್ಟ್, ಮಾಗಡಿಯಲ್ಲಿ ಮಂಚನ ಬೆಲೆ ಪ್ರಾಜೆಕ್ಟ್‌ಗಳನ್ನು ಕೈಗೆತ್ತಿಕೊಂಡು ಇಷ್ಟು ವರ್ಷವಾದರೂ ಕೂಡ ಕಾರ್ಯಗತವಾಗಿರಲಿಲ್ಲ, ಜನರಿಗೆ ಕುಡಿಯುವ ನೀರನ್ನು ಕೊಡುವುದಕ್ಕೆ ವ್ಯವಸ್ಥೆಯಾಗದೇ ಇರಬೇಕಾದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೂರು ವರ್ಷಗಳಲ್ಲಿ ಇದನ್ನು ಕೈಗೆತ್ತಿಕೊಂಡಿದ್ದು ಅದಷ್ಟು ಬೇಗ ಮುಗಿಯುವ ಹಂತದಲ್ಲಿದೆ. ಇದರಿಂದಾಗಿ ಮುಂದಿನ ಬಾರಿಗೆ ನೀರು ಕೊಡತಕ್ಕಂತಹ ವ್ಯವಸ್ಥೆಗೆ ಬಂದಿದೆ, ಇದು ಉತ್ಪ್ರೇಕ್ಷೆ ಅಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಆಗಿರುವ ಕೆಲಸಗಳನ್ನು ಲೆಕ್ಕ ಹಾಕುವುದಾದರೆ ನಾಲ್ಕು ಹೊಸ ಕೆರೆಗಳನ್ನು ಮಾಡಿಕೊಟ್ಟಿದ್ದಾರೆ. ಮೈನರ್ ಇರಿಗೇಷನ್ ಬಗ್ಗೆ ಹಿಂದೆ ಕೇಳಿದರೆ ದುಡ್ಡಿಲ್ಲ, ಅಬ್ಜೆಕ್ಷನ್ ಇದೆಯೆಂದು ಹೇಳುತ್ತಿದ್ದರು. ಇನ್ನು ರಸ್ತೆಗಳ ಬಗ್ಗೆ ತೆಗೆದುಕೊಳ್ಳುವುದಾದರೆ ಯಥೇಚ್ಛವಾಗಿ ರಸ್ತೆಗಳನ್ನು ಮಾಡಿದ್ದಾರೆ, ಸೇತು ಬಂಧನ ಎಂಬ ಕಾರ್ಯಕ್ರಮವನ್ನು ಹಾಕಿಕೊಂಡು ಇದರಿಂದಾಗಿ ನೂರಾರು ವರ್ಷಗಳಿಂದ ಸೇತುವೆಯಾಗದೆ ಮಳೆಗಾಲದಲ್ಲಿ ಜನರು ಓಡಾಡುವುದಕ್ಕೆ ಮತ್ತು ಗಾಡಿಗೆ ಸಂಚಾರಕ್ಕೆ ಅಡಚಣೆಯುಂಟಾಗುತ್ತಿತ್ತು. ಇವತ್ತು ಅದು ನಿವಾರಣೆಯಾಗಿ ೨೦ ಸೇತುವೆಗಳು ಆಗಿವೆ ಇದನ್ನು ಯಾರು ಮಾಡಿದ್ದಾರೆ. ಮಾಗಡಿ, ಹುಲಿಯೂರುದುರ್ಗ, ಬೆಂಗಳೂರು ಮಧ್ಯದಲ್ಲಿ ಇದ್ದಂತಹ ಸೇತುವೆಯನ್ನು ಅಗಲ ಮಾಡಿ ಎಂದು ೨೦ ವರ್ಷದಿಂದ ಹೇಳುತ್ತಾ ಬಂದಿದ್ದರೂ ಕೂಡ ಮಾಡಿಲ್ಲ. ಇವತ್ತು ೧೯ ಲಕ್ಷ ರೂಪಾಯಿಗೆ ಎಸ್ಟಿಮೇಟ್ ಆಗಿ ಅದಕ್ಕೆ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭವಾಗುವ ಸ್ಥಿತಿಯಲ್ಲಿದೆ. ಅದೇ ರೀತಿ ಹತ್ತಾರು ಕ್ಷೇತ್ರಗಳಲ್ಲಿ ಈ ರೀತಿಯ ವ್ಯವಸ್ಥೆಯಾಗುತ್ತಿದೆ. ಜನಹಿತವಾದಂತಹ ಕಾರ್ಯಕ್ರಮಗಳನ್ನು ಜನತಾ ಸರಕಾರ ಬಂದ ಮೇಲೆ ಕೈಗೆ ಎತ್ತಿಕೊಂಡು ಮಾಡುತ್ತಿದೆ, ಜನತಾ ಸರಕಾರದ ಮೇಲ್ಮೆಗೆ, ಗೆಲುವಿಗೆ ಇದು ಕಾರಣವೆಂದು ಹೇಳಿದರೆ ತಪ್ಪಾಗಲಾರದೆಂದು ನನಗನಿಸುತ್ತದೆ. ಯಾವ್ಯಾವುದೋ ಮಾತುಗಳನ್ನು ಆಡಿ ಕುಚೋದ್ಯ ಮಾಡತಕ್ಕಂಥದ್ದು ಅಲ್ಲ, ಮಾತನಾಡಬೇಕಾದರೆ ವಿಷಯಗಳನ್ನು ಅಂಕಿ ಅಂಶಗಳ ರೂಪದಲ್ಲಿ ಕೊಟ್ಟು ಮಾತನಾಡಲಿ. ಇನ್ನು ಹಸಿರು ಕಾರ್ಡಿನ ಬಗ್ಗೆ ಹೇಳಿದರು, ಜಮೀನ್ದಾರರಿಗೆ ಕೊಟ್ಟಿದ್ದಾರೆ ಬಡವರಿಗೆ ಕೊಟ್ಟಿಲ್ಲ ಎಂದು. ನಾನು ನನ್ನ ತಾಲ್ಲೂಕಿನಲ್ಲಿ ಸುಮಾರು ೬೦೦೦ ಕಾರ್ಡುಗಳನ್ನು ವಾಪಸ್ ತೆಗೆದುಕೊಂಡು ಅದನ್ನು ಬಡವರಿಗೆ ಕೊಡಿಸಿದ್ದೇನೆ. ಇದು ಅಧಿಕಾರಿಗಳು ಮಾಡಿದಂತಹ ದೋಷ. ಅದಕ್ಕೆ ಸರಕಾರದವರು ಹೊಣೆಯಲ್ಲ. ಪಕ್ಷ ಹೊಣೆ ಅಲ್ಲ. ತಿಳಿದಂತಹವರು ಯಾರೂ ಹಸಿರು ಕಾರ್ಡಿನ ಪ್ರಾಪ್ತಿಗೆ ಬರುವುದಿಲ್ಲ. ಅಂತಹವರ ಹತ್ತಿರ ಆ ಕಾರ್ಡುಗಳು ಇದ್ದರೆ, ಅದನ್ನು ವಾಪಸ್ ಪಡೆದು ಆಲ್ಲಿನ ತಹಸೀಲ್ದಾರರಿಗೆ ಹೇಳಿ ಅದನ್ನು ಬಡವರಿಗೆ ಕೊಡಿಸುವುದಕ್ಕೆ ಸಾಧ್ಯತೆ ಇತ್ತು. ಅಲ್ಲಿರತಕ್ಕಂತಹ ಶಾಸಕರು ಇದನ್ನು ಮಾಡಬಹುದಿತ್ತು. ಅದನ್ನು ಇಲ್ಲಿ ಬಂದು ಏತಕ್ಕೆ ಕೊಟ್ಟಿದ್ದೀರಿ ಎಂದು ಹೇಳುವುದು ಸರಿಯಲ್ಲ. ಇನ್ನು ತಾಳಿ ಭಾಗ್ಯದ ಯೋಜನೆ ಬಗ್ಗೆ ಮಾತನಾಡುತ್ತಾ ತಾಳಿಯ ಬದಲು ಅರಿಶಿನದ ಕೊಂಬನ್ನು ಕಟ್ಟಿಕೊಳ್ಳಬಹುದೆಂದು ಹೇಳಿದರು, ಎಷ್ಟೋ ಜನ ತಾಳಿಯನ್ನು ಕಟ್ಟಿಕೊಂಡಿರುವುದಿಲ್ಲ. ನಮ್ಮ ಹಿಂದೂ ಧರ್ಮದಲ್ಲಿ ತಾಳಿ ಕಟ್ಟದೇ ಇರುವುದಕ್ಕೆ ಆಗುತ್ತದೆಯೇ? ತಾಳಿಗೆ ಚಿನ್ನವನ್ನು ಕೊಂಡುಕೊಳ್ಳತಕ್ಕಂತಹ ಶಕ್ತಿ ನಮ್ಮಲ್ಲಿ ಅನೇಕ ಜನರಲ್ಲಿ ಇಲ್ಲ, ಸರಕಾರ ಅದನ್ನು ಕೊಟ್ಟು ಮಾಂಗಲ್ಯ ದಾನ ಮಾಡಿ ಸುಖವಾಗಿರಿ ಎಂದು ಆಶೀರ್ವಾದ ಮಾಡುವುದು ತಪ್ಪೇ? ಇದು ಸರಿಯೇ? ಇನ್ನು ವಿಧವೆಯರ ಮಾಸಾಶನ ಯಾವ ರಾಜ್ಯದಲ್ಲಿದೆ ಕರ್ನಾಟಕದಲ್ಲಿ ಬಿಟ್ಟರೆ, ವಿಧವೆಗೆ ಭತ್ಯ ಯಾವ ಸರಕಾರದಲ್ಲಿ ಇದೆ. ಹೆಂಗಸರ ಕಷ್ಟದ ಸ್ಥಿತಿಯನ್ನು ನೆನಸಿಕೊಂಡು ಅವರ ಪರಿಸ್ಥಿತಿಯನ್ನು ನೋಡಿ ಕಣ್ಣೀರಗೊಂಡು ಸರಕಾರ ವಿಧವಾ ಮಾಸಾಶನವನ್ನು

ಕೊಟ್ಟಿದೆ. ಇದರಿಂದಾಗಿ ಇವತ್ತು ಎಷ್ಟೋ ಜನ ವಿಧವೆಯರು ಸಂತೋಷದಿಂದ ಜೀವನ ಮಾಡಿಕೊಂಡಿದ್ದಾರೆ. ತಂದೆ ಮನೆಯವರು ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎನ್ನುತ್ತಾರೆ, ಅತ್ತೆ ಮನೆಯವರು ಆಸ್ತಿ ಇದ್ದರೆ ಕಿತ್ತುಕೊಂಡು ಆಕೆಯನ್ನು ಹೊರಗೆ ಅಟ್ಟುತ್ತಾರೆ. ೫೦ ರೂಪಾಯಿ ಮಾಸಾಶನದಿಂದ ಆಕೆಗೆ ಬಹಳ ಸಹಾಯವಾಗುತ್ತದೆ. ಇದು ಯೋಚನೆ ಮಾಡಬೇಕಾದಂತಹ ವಿಷಯ. ಇನ್ನು ಫೇರ್ ಪ್ರೈಸ್ ಡಿಪೋ ಬಗ್ಗೆ ಮಾತನಾಡಿದರು. ಯಾವ ಡಿಪೋಗಳಲ್ಲೂ ಕೂಡ ಅನ್ಯಾಯವಾಗಿಲ್ಲ. ವಿರೋಧ ಪಕ್ಷಗಳಿಂದ ದೂರು ಬರುತ್ತದೆಂದು ಅದನ್ನು ಕ್ಯಾನ್ಸಲ್ ಮಾಡುವುದಕ್ಕಾಗುವುದಿಲ್ಲ, ಕ್ಯಾನ್ಸಲ್ ಮಾಡಿದರೆ ನಿಮ್ಮ ಸರಕಾರ ಹೀಗೆ ಮಾಡಿದೆ ಎಂದು ದೂರುತ್ತಾರೆ, ಅಧಿಕಾರಿಗಳೂ ಕೂಡ ಹಿಂದು ಮುಂದು ಆಲೋಚನೆ ಮಾಡುತ್ತಾರೆ, ಇಂತಹ ದೂರುಗಳು ಬರುತ್ತದೆಂದು ಅಧಿಕಾರಿಗಳು ಹೇಳುತ್ತಿದ್ದರೆ. ಇಂತಹ ಪರಿಸ್ಥಿತಿಯಲ್ಲಿ ಜನತಾ ಸರಕಾರ ಹೆಚ್ಚಿನ ಪ್ರಗತಿ ಸಾಧಿಸಿರುವುದರಿಂದ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಮತ್ತೆ ತನ್ನ ಅಧಿಕಾರವನ್ನು ಸ್ಥಾಪನೆ ಮಾಡತಕ್ಕಂಥ ಶಕ್ತಿಯನ್ನು ಪಡೆದುಕೊಂಡಿದೆಯೆಂದು ಹೇಳಿದರೆ ತಪ್ಪಾಗಲಾರದು. ಹೆಂಡದ ಹೊಳೆಯಾಗಲೀ, ಹಣಕಾಸಿನ ಮುಗ್ಗಟ್ಟಾಗಲೀ ಸರಕಾರಕ್ಕೆ ಬಂದಿಲ್ಲವೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದೆಂದು ನಾನಾದರೂ ಭಾವಿಸುತ್ತೇನೆ. ಇನ್ನು ಹೆಚ್ಚಿನ ಮಾಹಿತಿಗಳ ಬಗ್ಗೆ ಮಾತನಾಡಬೇಕಾಗಿತ್ತು. ಆದರೆ ಕಾಲಮಿತಿಯನ್ನು ನಿಗಧಿ ಮಾಡಿರುವುದರಿಂದ ನಾನು ಹೆಚ್ಚಿಗೆ ಕಾಲಾವಕಾಶವನ್ನು ತೆಗೆದುಕೊಳ್ಳದೇ, ವಿರೋಧಿಸದೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಈ ಗೌರ್ನರ್ಸ್ ಅಡ್ರೆಸ್ ದಿಸ್ ಈಸ್ ನಥಿಂಗ್ ಬಟ್ ಎ ಸ್ಟೇಟ್‌ಮೆಂಟ್ ಮೇಡ್ ಬೈ ದಿ ಗೌರ್ನರ್ ರೆಡ್ ಥ್ರೂ ದಿ ಮೌತ್ ಆಫ್ ದಿ ಗೌರ್ನರ್. ಇದು ಒಂದು ಪರಿಪಾಠ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಅದೇ ಪ್ರಕಾರವಾಗಿ ಈ ಪ್ಯಾರಾ ಎರಡರಲ್ಲಿ ಬರಗಾಲದ ಬಗ್ಗೆ ಏನೇನು ಕೆಲಸ ಮಾಡಿದ್ದೇವೆಂದು ಹೇಳಿದ್ದಾರೆ. ನಮ್ಮ ಗೆಳೆಯರು ಒಂದು ಮಾತು ಹೇಳುತ್ತಿದ್ದರು. ಅದು ಏನೆಂದರೆ ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಅಂದರೆ, ಏನು ರಾಮಕೃಷ್ಣ ಹೆಗಡೆಯವರು ಅಧಿಕಾರವನ್ನು ವಹಿಸಿಕೊಂಡರೋ ನಮ್ಮ ರಾಜ್ಯದಲ್ಲಿ ೧೯೮೩ನೇ ಇಸವಿಯಿಂದ ಹಿಡಿದು ಇವತ್ತಿನವರೆಗೂ ಬರಗಾಲ ಬಿಟ್ಟಿದ್ದಿಲ್ಲ. ನಾನು ಆಗ ಏತಕ್ಕೆ ಸ್ವಾಮಿ ಈ ರೀತಿ ಹೇಳುತ್ತೀರಿ ಎಂದಾಗ ತಾವೇ ವಿಚಾರ ಮಾಡಿರಿ, ಯಾವಾಗಲೂ ಅಂದರೆ ೧೯೮೩ನೇ ಇಸವಿಯಿಂದ ಹಿಡಿದು ಇವತ್ತಿನವರೆಗೂ ಈ ರಾಜ್ಯದಲ್ಲಿ ಬರಗಾಲ ಇದ್ದೇ ಇದೆ ಎಂದು ಹೇಳುತ್ತಾರೆ. ಇದು ಒಂದು. ಎರಡನೆಯದಾಗಿ, ಈ ಬಾಟ್ಲಿಂಗ್ ಹಗರಣದ ಕೇಸ್‌ನಲ್ಲಿ ಹೈಕೋರ್ಟ್ ತೀರ್ಪು ಮತ್ತು ಸುಪ್ರೀಂ ಕೋರ್ಟ್ ತೀರ್ಪು ಹೊರಗೆ ಬಂದಾಗ ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಟ್ಟರು. ಆ ರೀತಿ ಕೊಟ್ಟನಂತರ ಇಡೀ ರಾಜ್ಯದಲ್ಲಿ ಶಾಂತಿಯ ವಾತಾವರಣ ಉಂಟಾಗಿತ್ತು. ಅದಾದನಂತರ ಮತ್ತೆ ಏನು ಅಧಿಕಾರವನ್ನು ವಹಿಸಿಕೊಂಡರೋ ಆಗ ಕೆಟ್ಟ ಬರಗಾಲ, ಬಿಸಿಲು ಚಲೋ ಆಯಿತು, ಇದನ್ನು ನಾನು ವಿಚಾರ ಮಾಡಿದೆ, ಅವರು ಹೇಳುವುದು ಖರೆ ಎನಿಸುತ್ತದೆ. ನೀವೂ ವಿಚಾರ ಮಾಡಿರಿ. ಈ ಬರಗಾಲದ ಬಗ್ಗೆ ಹೇಳುವುದಾದರೆ ಇಡೀ ಭಾರತದಲ್ಲಿ, ವಿಶ್ವದಲ್ಲಿಯೇ ಬಿಜಾಪುರದ ಗೋಳಗುಮ್ಮಟ ಎಷ್ಟು ಪ್ರಸಿದ್ಧಿಯೋ ಬರಗಾಲಕ್ಕೂ ಅಷ್ಟೇ ಪ್ರಸಿದ್ಧಿಯನ್ನು ಪಡೆದಿದೆ ಎಂದರೆ ತಪ್ಪಾಗಲಾರದು. ಪದೇ ಪದೇ ಈ ವಿಚಾರವಾಗಿ ಹೇಳಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಐದು ನದಿಗಳು ಹರಿದರೂ ಸಹಾ ಇವತ್ತಿನ ದಿವಸ ಕುಡಿಯಲಿಕ್ಕೆ ನೀರು ಇಲ್ಲ. ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ನಿಂದ ಎರಡು ಲಕ್ಷ ಎಕರೆ ಜಮೀನು ನಮ್ಮ ಜಿಲ್ಲೆಯಲ್ಲಿ ಮುಳುಗಡೆ ಆಯಿತು. ನೀರಾವರಿ ಆಗುವುದಾದರೆ ರಾಯಚೂರು, ಗುಲ್ಬರ್ಗ ಜಿಲ್ಲೆಗೆ ಆಗಬಹುದು. ಆದರೆ ನಮ್ಮ ಜಿಲ್ಲೆಯಲ್ಲಿ ನೀರಾವರಿ ಆಗುವುದಿಲ್ಲವೆಂದು ಪದೇ ಪದೇ ಹೇಳಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಮುಳುವಾಡ ಏತ ನೀರಾವರಿ ಯೋಜನೆ ಆಗಬೇಕು ಎಂದು ಇದೆ. ಮೊನ್ನೆ ಡಿಸೆಂಬರ್ ತಿಂಗಳಿನಲ್ಲಿ ೭ನೇ ತಾರೀಖಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಇಲ್ಲದೇ ಇದ್ದರೂ ಅಲ್ಲಿ ''ಮುಳುವಾಡ ಏತ ನೀರಾವರಿ ಯೋಜನೆ'' ಯ ಬಗ್ಗೆ ಒಂದು ಅಡಿಗಲ್ಲನ್ನು ಹಾಕಿ ಬಂದು ಬಿಟ್ಟರು. ಅವರು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆಯ ಸಂದರ್ಭದಲ್ಲಿ ಬಂದಿದ್ದರು. ನಮ್ಮ ಜಿಲ್ಲೆಯವರು ಮುಳುವಾಡ ಏತ ನೀರಾವರಿ ಯೋಜನೆಯ ಬಗ್ಗೆ ಪದೇ ಪದೇ ಕೇಳುತ್ತಾರೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಈ ಯೋಜನೆಗೆ ಟೆಕ್ನಿಕಲ್ ಸ್ಯಾಂಕ್ಷನ್ ಇಲ್ಲದೇ ಇದ್ದರೂ ಬಂದು ಅಡಿಗಲ್ಲನ್ನೂ ಹಾಕಿದರು. ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತು ಚುನಾವಣೆ ಆದ ನಂತರ ಅದು ಏನಾಗಿದೆ ಎಂದರೆ ಆ ಅಡಿಗಲ್ಲಿಗೆ ಸಿಮೆಂಟ್ ಆಗಿ ಬಂದು ಮಾಡಿದ್ದಾರೆ ಎಂದು ಕೇಳಿದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಅಧ್ಯಕ್ಷರೇ, ಈ ಮುಳುವಾಡ ಏತ ನೀರಾವರಿ ಯೋಜನೆಗೆ ಸನ್ಮಾನ್ಯ ಸಚಿವರಾದ ಶ್ರೀಮಾನ್ ಹೆಚ್. ಡಿ. ದೇವೇಗೌಡರು ನಮ್ಮ ತಾಲ್ಲೂಕಿಗೆ ಬಂದಾಗ ಹೇಳಿದರು, ಇದರ ವೆಚ್ಚ ೧೦೫೦ ಕೋಟಿ ರೂಪಾಯಿ ಆಗುತ್ತದೆ ಅಷ್ಟೇ ಅಲ್ಲ, ಭಾರತ ದೇಶದಲ್ಲಿ ಇದು ಒಂದು ದೊಡ್ಡ ಏತ ನೀರಾವರಿ ಯೋಜನೆಯಾಗುತ್ತದೆ ಇದನ್ನು ನಮಗೆ ಮಾಡುವ ಶಕ್ತಿ ಇಲ್ಲ ಆದರೂ ಕೂಡ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ ಇದಕ್ಕೆ ಅಡಿಗಲ್ಲು ಹಾಕಿದರು. ಇದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಆಗದೇ ಇದ್ದರೂ ಕೂಡ ಇದಕ್ಕೆ ಅಡಿಗಲ್ಲು ಹಾಕಿದರು. ಈ ಮುಳುವಾಡ ಏತ ನೀರಾವರಿ ಯೋಜನೆಗೆ ೫ ತಾಲ್ಲೂಕುಗಳು ಸೇರುತ್ತವೆ. ಅವು ಯಾವುವೆಂದರೆ ಮುದ್ದೇಬಿಹಾಳ್, ಬಸವನ ಬಾಗೇವಾಡಿ, ಬಿಜಾಪುರ, ಇಂಡಿ ಮತ್ತು ಸಿಂಧಗಿ. ಇದರಿಂದ ಕನಿಷ್ಟಪಕ್ಷ ೭½ ಲಕ್ಷ ಎಕರೆಯಷ್ಟು ಭೂಮಿ ನೀರಾವರಿಯಾಗುತ್ತದೆ ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದು ಇಷ್ಟೆ. ಈ ಸದನದಲ್ಲಿ ಅವರು ಉತ್ತರ ಕೊಡುವ ಸಂದರ್ಭದಲ್ಲಿ ಈ ಏತ ನೀರಾವರಿ ಯೋಜನೆಗೆ ಈ ಬಜೆಟ್ಟಿನಲ್ಲಿ ಎಷ್ಟು ಹಣ ತೆಗೆದು ಇಟ್ಟಿದ್ದೀರಾ ಅನ್ನುವುದನ್ನು ಹೇಳಬೇಕು. ಹೇಗಾದರೂ ಅಡಿಗಲ್ಲು ಹಾಕಿಬಂದಿದ್ದೀರಿ, ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಾ, ಯಾವಾಗ ಮುಗಿಸುತ್ತೀರಾ ಅನ್ನುವುದನ್ನು ಹೇಳಬೇಕೆಂದು ನಾನು ಇಚ್ಛಿಸುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದ ಎರಡನೇ ಪ್ಯಾರಾದಲ್ಲಿ ತಾವು ಈ ರೀತಿ ಹೇಳಿದ್ದೀರಿ. ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅದು ಈ ರೀತಿ ಇದೆ :—

"In the dry areas, the tempo of employment generation programmes is being miantained and arrangements have been made for fodder and drinking water," ಎಂದು ಹೇಳಿದ್ದಾರೆ.

ಹೋದ ಸಲ ೧೯೮೫–೮೬ನೇ ಸಾಲಿನಲ್ಲಿ ನಮ್ಮ ಜಿಲ್ಲೆಯಲ್ಲಿ ಬರಗಾಲ ಬಂದಾಗ ನಮ್ಮ ಜಿಲ್ಲೆಯಿಂದ ಕನಿಷ್ಟಪಕ್ಷ ೮ ರಿಂದ ೧೦ ಲಕ್ಷ ಜನರು ವಲಸೆ ಹೋದರು. ಈಗ್ಗೆ ೩ ತಿಂಗಳು ಹಿಂದೆ ಇವರು ಏನೇನು ಕೆಲಸ ಮಾಡಿದ್ದಾರೆ ಅನ್ನುವುದನ್ನು ನಾನು ನೋಡಿದ್ದೇನೆ. ಆ ಜನರಿಗೆ ಅವಶ್ಯಕವಾಗಿ ಬೇಕಾಗಿರ ತಕ್ಕಂಥಾ ಡ್ರಿಂಕಿಂಗ್ ವಾಟರ್ ಮತ್ತು ದನಗಳಿಗೆ ಬೇಕಾಗಿರತಕ್ಕಂಥಾ ಫಾಡರ್ ಇವೆಲ್ಲವನ್ನೂ ಸರಿಯಾಗಿ ಮೇಂಟೇನ್ ಮಾಡಿದ್ದಾರೆ. ಬಸವನ ಬಾಗೇವಾಡಿ ತಾಲ್ಲೂಕಿನಿಂದ ಈಗ್ಗೆ ೩ ತಿಂಗಳ ಹಿಂದೆ ಮಹಾರಾಷ್ಟ್ರಕ್ಕೆ ವಲಸೆ ಹೋಗುವುದಕ್ಕೆ ೩೫ ಜನ ಲಂಬಾಣಿಗರು ಒಂದು ಟ್ರಕ್‌ನಲ್ಲಿ ಹೋಗುತ್ತಿದ್ದಾಗ ಆ ಟ್ರಕ್ ಅಪಘಾತವಾಗಿ ಸ್ಪಾಟ್‌ನಲ್ಲೇ ೩೫ ಜನ ಸತ್ತರು. ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ, ಅವರಿಗೆ ಇಲ್ಲೇ ಒಂದು ಹೊತ್ತು ತಿನ್ನುವುದಕ್ಕೆ ಸಿಕ್ಕಿದ್ದರೆ ಅವರು ವಲಸೆ ಹೋಗುತ್ತಿರಲಿಲ್ಲ. ಆದುದರಿಂದ ಈ ಒಂದು ಹೊಣೆಯನ್ನು ನಾನು ಈ ಸರ್ಕಾರಕ್ಕೆ ಕೈಮಾಡಿ ತೋರಿಸುತ್ತೇನೆ. ಅವರಿಗೆಲ್ಲರಿಗೂ ಇಲ್ಲೇ ಕೆಲಸ ಸಿಕ್ಕಿದ್ದರೆ ಅವರು ವಲಸೆ ಹೋಗುತ್ತಿರಲಿಲ್ಲ. ಇನ್ನು ಮುಂದಾದರೂ ಅವರು ವಲಸೆ ಹೋಗುವುದನ್ನು ತಪ್ಪಿಸಲು ಇಲ್ಲೇ ಅವರಿಗೆ ಕೆಲಸವನ್ನು ಕೊಡುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಲಾ ಅಂಡ್ ಆರ್ಡರ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದರ ಬಗ್ಗೆ ಹಿಂದೆ ೩ ಗಂಟೆಗಳ ಕಾಲ ಚರ್ಚೆ ನಡೆದಿದೆ. ಮೈಸೂರು, ಬೆಂಗಳೂರು, ತುಮಕೂರು ನಗರಗಳಲ್ಲಿ ಅಂಥಾ ಗಲಾಟೆಯಲ್ಲಿ ಎಷ್ಟೋ ಜನರು ತಮ್ಮ ಪ್ರಾಣವನ್ನೇ ಕಳೆದುಕೊಂಡರು. ಲಾ ಅಂಡ್ ಆರ್ಡರ್ ಈವೊತ್ತು ನಮ್ಮ ರಾಜ್ಯದಲ್ಲಿ ಹದಗೆಟ್ಟಿದೆ. ಫೈರಿಂಗ್ ಎಲ್ಲೆಲ್ಲಿ ಆಯಿತು ಎನ್ನುವುದರ ಬಗ್ಗೆ ನಾವು ಪೇಪರ್‌ನಲ್ಲಿ ಬಂದಿರುವುದನ್ನು ಓದಿದ್ದೇವೆ. ತುಮಕೂರಿನಲ್ಲಿ ಒಬ್ಬ ಮಾಜಿ ಸಂಸತ್ ಸದಸ್ಯರ ಮನೆಯಲ್ಲಿ ದರೋಡೆ ನಡೆಯಿತು. ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ಫೈರಿಂಗ್ ನಡೆದಾಗ ೩ ಜನರು ಪ್ರಾಣ ಕಳೆದುಕೊಂಡರು. ಶಿಕಾರಿಪುರದಲ್ಲೂ ನಡೆದಿದೆ. ನಮ್ಮ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಕಂಪ್ಲೀಟಾಗಿ ಹದಗೆಟ್ಟು ಹೋಗಿರುವುದರಿಂದ ಅದನ್ನು ಸರಿಯಾಗಿ ಹತೋಟಿಯಲ್ಲಿಡುವುದು ಮಾನ್ಯ ಗೃಹಸಚಿವರ ಜವಾಬ್ದಾರಿಯಲ್ಲವೇ ? ಆದುದರಿಂದ ನಾನು ಒಂದು ಮಾತು ಹೇಳಬೇಕಾದರೆ, ಅವರು ತಮ್ಮ ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಯಾರು ಮತ್ತೊಬ್ಬರು ಬರುತ್ತಾರೋ, ಛಲೋ ಮಂದಿ ಯುವಕರು ಬರುತ್ತಾರೋ, ಇದಕ್ಕಿಂತಲೂ ಹೆಚ್ಚು ದಕ್ಷರಾಗಿ ತಮ್ಮ ಕರ್ತವ್ಯ ಯಾರು ಮಾಡುತ್ತಾರೋ ಅವರಿಗೆ ವಹಿಸಿಕೊಡಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

೫–೩೦ ಪಿ. ಎಂ.

ಶ್ರೀ ಬಿ. ರಾಚಯ್ಯ.—ಸ್ವಾಮಿಗಳ ವೇಷದಲ್ಲಿ ಕಳ್ಳರು ನಿಮ್ಮ ಊರಿಗೆ ಬಂದಾಗ ಅವರಿಗೆ ಪೂಜೆ ಮಾಡಿಸಿದಿರಿ. ಈಗ ನೀವು ಹೇಳುತ್ತಿರುವುದನ್ನು ಆ ದಿನವೇ ಯೋಚನೆ ಮಾಡಬೇಕಾಗಿತ್ತು. ಇಂತಹ ಕಳ್ಳರನ್ನು ನಮ್ಮ ಪೋಲೀಸರು ಪತ್ತೆ ಮಾಡಿದ್ದಾರೆ.

ಶ್ರೀ ಎಂ. ಎಲ್. ಉಸ್ತಾದ್.—ಸರ್ಕಾರವನ್ನು ನೀವು ನಡೆಸುತ್ತೀರಿ. ಈ ಪೋಲೀಸ್ ಇಲಾಖೆ ನಿಮ್ಮ ಕೈಯಲ್ಲಿದೆ. ಸಿ.ಓ.ಡಿ.ಗಳು ನಿಮ್ಮ ಹತ್ತಿರ ಇದ್ದಾರೆ, ಆದರೂ ಇಂಥಾದ್ದೆಲ್ಲಾ ನಡೆಯುತ್ತಿದೆ. ಇವೊತ್ತು ಪೋಲೀಸ್ ಕಾನ್ಸ್‌ಟೇಬಲ್‌ಗಳು ನಿಮ್ಮ ಮಾತನ್ನು ಕೇಳದಿರುವಂತಹ ಪರಿಸ್ಥಿತಿ ಇದೆ.

ಇನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆ ಕುರಿತು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಚುನಾವಣೆಗಳ ಸಮಯದಲ್ಲಿ ಜನರಿಗೆ ಸೆರೆಯನ್ನು ಹಂಚಿದರು, ಸೀರೆಗಳನ್ನು ಹಂಚಿದರು. ಅಷ್ಟೇ ಅಲ್ಲ, ಕಾಂಗ್ರೆಸ್ ಕಾರ್ಯಕರ್ತರನ್ನು ರಾತ್ರೋರಾತ್ರಿ ಕರೆದು ಕೊಂಡು ಹೋಗಿ ಜನತಾ ಪಕ್ಷದ ಟಿಕೇಟ್‌ಗಳನ್ನು ಕೊಟ್ಟರು. ನನ್ನ ಕ್ಷೇತ್ರದಲ್ಲಿ ೪ ಮಂಡಲ ಪಂಚಾಯತ್‌ಗಳು ಮತ್ತು ಒಂದು ಜಿಲ್ಲಾ ಪರಿಷತ್ ಬರುತ್ತದೆ.

ಶ್ರೀ ಬಾಬುರೆಡ್ಡಿ ತುಂಗಲ್.—ಬಬಲೇಶ್ವರದಲ್ಲಿ ನೀವು ಯಾರಿಗೆ ಟಿಕೆಟ್ ಕೊಟ್ಟಿರಿ ?

ಶ್ರೀ ಎಂ. ಎಲ್. ಉಸ್ತಾದ್.—ಕಾಂಗ್ರೆಸ್ ಕಾರ್ಯಕರ್ತರು ಹಾಗೂ ನನ್ನ ಆಪ್ತ ಗೆಳೆಯ ರಾಗಿದ್ದವರಿಗೆ ಇವರು ಜನತಾ ಟಿಕೆಟ್ ಕೊಟ್ಟರು. ಆದರೆ ಅವರು ಚುನಾವಣೆಯಲ್ಲಿ ಸೋತರು. ಚುನಾವಣೆ ಸಮಯದಲ್ಲಿ ರಾತ್ರಿಹೊತ್ತು ಸೀರೆ ಮತ್ತು ಜಂಪರ್ ಹಂಚಿದರು.

ಅಧ್ಯಕ್ಷರು.—ಅದನ್ನೆಲ್ಲಾ ಹೇಳಿದ್ದಾರೆ. ನೀವು ಹೊಸ ವಿಷಯ ಹೇಳಿ.

ಶ್ರೀ ಎಂ. ಎಲ್. ಉಸ್ತಾದ್.—ಈ ಮೊದಲು ನಮ್ಮ ರಾಜ್ಯದಲ್ಲಿ ಗ್ರಾಮಪಂಚಾಯಿತಿಗಳು ಮತ್ತು ತಾಲ್ಲೂಕ್ ಅಭಿವೃದ್ಧಿ ಮಂಡಳಿಗಳು ಇದ್ದವು. ಆದರೆ ಅವುಗಳನ್ನೆಲ್ಲಾ ಸೂಪರ್ ಸೀಡ್ ಮಾಡಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದರು. ಈಗ ರಾಷ್ಟ್ರ ಮಟ್ಟದಲ್ಲಿ ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಈ ಒಂದು ಪದ್ಧತಿ ಈಗಾಗಲೇ ಗುಜರಾತ್, ಮಹಾರಾಷ್ಟ್ರ, ಆಂಧ್ರ ಮುಂತಾದ ರಾಜ್ಯಗಳಲ್ಲಿ ಇದೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳಬೇಕೆಂದರೆ, ಇವರು ಹಳ್ಳಿಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆಸಿದ್ದಾರೆ. ಆದರೆ ಅವುಗಳ ಮೇನ್‌ಟೆನೆನ್ಸ್ ಸಲುವಾಗಿ ಯಾವ ವ್ಯವಸ್ಥೆಯನ್ನು ಸಹ ಮಾಡಿಲ್ಲ. ಬೋರ್‌ವೆಲ್‌ಗಳನ್ನು ತೆಗೆಸಿ ಅವುಗಳಿಗೆ ಪಂಪ್‌ಗಳನ್ನು ಅಳವಡಿಸಿ ಹೋದರೆ ಇವರ ಕೆಲಸ ಮುಗಿಯಿತು. ಅವುಗಳು ಕೆಟ್ಟರೆ ೬ ತಿಂಗಳು, ಒಂದು ವರ್ಷವಾದರೂ ರಿಪೇರಿ ಮಾಡುವುದಿಲ್ಲ. ಇವುಗಳು ಕೆಟ್ಟರೆ ರಿಪೇರಿ ಮಾಡಲು ಇವರ ಹತ್ತಿರ ಟೆಕ್ನಿಕಲ್ ಸ್ಟಾಫ್ ಇಲ್ಲ. ಬಂದು ನೋಡಲು ವಾಹನಗಳ ಸೌಲಭ್ಯ ಇಲ್ಲ. ಆದ್ದರಿಂದ ಸರ್ಕಾರದವರು ಇದರ ಕಡೆಗೂ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಜಾಗ್ರತೆ ಮುಗಿಸಿ.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಮುಖ್ಯಮಂತ್ರಿಗಳು ರಾಷ್ಟ್ರ ಮಟ್ಟದಲ್ಲಿ ವಿರೋಧ ಪಕ್ಷಗಳ ಒಕ್ಕೂಟದ ಅಧ್ಯಕ್ಷರಾಗುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಕಾರಣವೇನು ? ಕರ್ನಾಟಕದ ಪರಿಸ್ಥಿತಿ ಈಗ ಮುಗ್ಗಟ್ಟಿನಲ್ಲಿರುವ ಕಾರಣ ಇವರು ಈ ರೀತಿ ಮಾಡುವುದು ಒಳ್ಳೆಯದಲ್ಲವೆಂದು ನಾನು ಹೇಳುತ್ತೇನೆ. ಮತ್ತೆ ಮುಖ್ಯಮಂತ್ರಿಗಳು ಜಿಲ್ಲಾ ಪರಿಷತ್ ಚುನಾವಣೆಗಳ ನಂತರ ಶಾಸಕರಿಗೆ ತುಂಬಾ ಜಂಭ ಬಂದಿದೆ ಎಂದು ಒಂದು ಹೇಳಿಕೆ ಕೊಟ್ಟರು. ಈ ರೀತಿಯ ಜಂಭ ಯಾವ ಶಾಸಕರಿಗೆ ಬಂದಿತ್ತು, ಯಾವ ಮಂತ್ರಿಗಳಿಗೆ ಬಂದಿತ್ತು ಹಾಗೂ ಮಾಜಿ ಮಂತ್ರಿಗಳಿಗೇನಾದರು ಬಂದಿತ್ತೇ ಎಂಬುದನ್ನು ಅವರು ತಿಳಿಸಬೇಕಾಗಿತ್ತು. ಅವರು ಈ ರೀತಿ ಹೇಳಿಕೆ ಕೊಟ್ಟಿದ್ದು ಸರಿಯೇ ? ಒಟ್ಟಿನಲ್ಲಿ ಮುಖ್ಯ ಮಂತ್ರಿಗಳು ತಮ್ಮ ಉತ್ತರದ ಸಮಯದಲ್ಲಿ ಇದಕ್ಕೆ ಉತ್ತರ ಕೊಡುವುದು ಒಳ್ಳೆಯದು.

ಇನ್ನು ಜನತಾ ಗೃಹಗಳ ಬಗ್ಗೆ ಹೇಳುತ್ತೇನೆ. ಈಗ ಹುಡ್ಕೋ ಸ್ಕೀಮಿನ ಪ್ರಕಾರ...

ಅಧ್ಯಕ್ಷರು.—ತಾವು ಜಾಗ್ರತೆ ಮುಗಿಸಿ. ತಮ್ಮ ಸಮಯ ಆಯಿತು.

ಶ್ರೀ ಎಂ. ಎಲ್. ಉಸ್ತಾದ್.—ಹಾಗಿದ್ದರೆ ಈ ಭೂ ನ್ಯಾಯ ಮಂಡಲಿಗಳ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಇವರು ಭೂ ನ್ಯಾಯ ಮಂಡಳಿಗಳನ್ನು ಹೆಚ್ಚು ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಬೆಳಗಾಂ ಜಿಲ್ಲೆಯ ಹುಕ್ಕೇರಿಯಲ್ಲಿ ಇದು ಇನ್ನೂ ರಚನೆ ಆಗಿಲ್ಲ. ಈ ಕೆಲಸ ಆದಷ್ಟು ಬೇಗ ಆಗಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ನಾರಾಯಣ ಕುಮಾರ್ (ಬಿನ್ನಿಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೆ. ನಿಜವಾಗಿ ನನಗೆ ಮಾತನಾಡಲು ಒಂದು ಅವಕಾಶವನ್ನು ಕೊಟ್ಟಿದ್ದೀರಿ, ತಮಗೆ ಅಭಿನಂದನೆ. ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಾ, ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತಾ ಇದ್ದೇನೆ. ಜನತಾ ಸರ್ಕಾರದ ೪ ವರ್ಷಗಳ ಸಾಧನೆಗಳು ಒಂದೇ ಎರಡೇ ಹತ್ತಾರು, ನೂರಾರು, ಸಹಸ್ರಾರು, ಸಾಧನೆಗಳನ್ನು ಹೇಳುವುದಕ್ಕೆ ಕಾಲ ಇಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಾ ಇದ್ದೇನೆ. ಸರ್ವಜ್ಞ ಒಂದು ಮಾತನ್ನು ಹೇಳಿದ್ದಾನೆ. ಏನೆನದರೆ, "ಆಳಾಗ ಬಲ್ಲವನು ಅರಸಾಗಬಲ್ಲನು ಆಳಾಗಲು ಅರಿಯದವ ತಾನೇ ಅಳಾಗಬಲ್ಲ ಸರ್ವಜ್ಞ" ಎಂದು ಹೇಳಿದ್ದಾನೆ. ನಮ್ಮ ಜನತಾ ಸರ್ಕಾರದಲ್ಲಿ ಸೇವಕನು ಆಗುವುದಕ್ಕೆ ತಯಾರಿದ್ದಾರೆ ಮತ್ತು ರಾಜನೂ ಆಗುವುದಕ್ಕೆ ತಯಾರಿದ್ದಾರೆ. ಆದುದರಿಂದ ಹಿಂದಿನ ಸರ್ಕಾರಗಳು ಸಮತಾವಾದ, ಸಮಾಜವಾದ ಎಂದು ಹೇಳುತ್ತಾ ಬರೀ ಮಾತಿನಲ್ಲಿ ಕಾಲಹರಣ ಮಾಡಿ ಕೃತಿಯಲ್ಲಿ ತಪ್ಪಿಸಿದರು. ಸಮಾಜವಾದ, ಸಮತಾವಾದ ಎನ್ನುವುದನ್ನು ಇವತ್ತು ಜನತಾ ಸರ್ಕಾರ ಕೃತಿಯಲ್ಲಿ ಇಳಿಸಿದೆ ಎಂದು ಹೆಮ್ಮೆಯಿಂದ ಹೇಳತಕ್ಕಂಥ ಸಂದರ್ಭ ನಮಗೆ ಒದಗಿದೆ. ಮುಖ್ಯವಾಗಿ ಈ ರಾಷ್ಟ್ರದಲ್ಲಿರತಕ್ಕಂಥ ೨೨ ರಾಜ್ಯಗಳ ಪೈಕಿ ಈ ಒಂದೇ ಒಂದು ರಾಜ್ಯದಲ್ಲಿ ಅಂದರೆ ಕರ್ನಾಟಕ ರಾಜ್ಯದಲ್ಲಿ ಜನತಾ ಸರ್ಕಾರ ಇರತಕ್ಕಂಥಾದ್ದು. ಅದು ಮಾನ್ಯ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿರತಕ್ಕಂಥ ಜನತಾ ಸರ್ಕಾರ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ನಾವು ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ನಮ್ಮ ವಿರೋಧಪಕ್ಷದ ನಾಯಕಿ ಶ್ರೀಮತಿ ನಾಗರತ್ನಮ್ಮನವರು ಬಂದ ದಿನ ಒಂದು ಉತ್ತಮವಾದಂಥ ಮಾತನ್ನು ಈ ಸದನದಲ್ಲಿ ಹೇಳಿದರು, ಅದು ಸ್ವಾಗತಾರ್ಹ. ಆಡಳಿತ ಪಕ್ಷ ಒಳ್ಳೆಯದನ್ನು ಮಾಡಿದಾಗ ನಾವು ಮನಸಾರೆ ಸ್ವಾಗತಬಯಸುತ್ತೇವೆ, ಕೆಟ್ಟದ್ದನ್ನು ಮಾಡಿದಾಗ ನಾವು ಮನಸಾರೆ ವಿರೋಧ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು ಅದು ಸತ್ಯವಾದದ್ದು ಮತ್ತು ಸಹಜವಾದದ್ದು. ಆದರೆ ಕೆಲವು ಸದಸ್ಯರಿಗೆ ಸತ್ಯ ಅಸತ್ಯ ಗೊತ್ತಿಲ್ಲದೆ ಸುಮ್ಮನೆ ಹಾಹಾಕಾರ ಮಾಡತಕ್ಕಂಥಾದ್ದನ್ನು ನಾನು ಈ ಸದನದಲ್ಲಿ ನೋಡಿದ್ದೇನೆ. ೧೯೮೩ರಿಂದೀಚೆಗೆ ಎಷ್ಟು ಎಡರು ತೊಡರುಗಳನ್ನು ಎದುರಿಸಿ ತಮ್ಮದೇ ಆದಂಥ ಸಿದ್ಧಾಂತದ ಮೇಲೆ ಈ ಜನತಾ ಸರ್ಕಾರ ನಿಂತಿದೆಯೆಂದು ಹೇಳಿದರೆ ಬಹಳ ಜನರಿಗೆ ಆಶ್ಚರ್ಯವಾಗುತ್ತದೆ. ನಮ್ಮ ವಿರೋಧ ಪಕ್ಷದವರಿಗೆ ಒಳಗೆ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿ ಇರಬೇಕು, ಒಳ್ಳೆಯ ಆಡಳಿತ ಕೊಡುತ್ತಾ ಇದ್ದಾರೆ ಎಂಬ ಭಾವನೆ ಇದ್ದರೂ ಸಹ ವಿರೋಧಪಕ್ಷದ ನೀತಿ ಎಂದು ತಿಳಿದುಕೊಂಡು ಆಗಾಗ್ಗೆ ಪ್ರತಿಭಟನೆ ಮಾಡತಕ್ಕಂಥಾದ್ದನ್ನು ಸದನದಲ್ಲಿ ನಾನು ನೋಡಿದ್ದೇನೆ. ಈ ಸರ್ಕಾರ ೧೯೮೩ದಿಂದೀಚೆಗೆ ಸುಮಾರು ಚುನಾವಣೆಗಳನ್ನು ಎದುರಿಸಿದೆ. ಸಾರ್ವತ್ರಿಕ ಚುನಾವಣೆಗಳು ಎರಡನ್ನು ಜನತಾ ಸರ್ಕಾರ ಎದುರಿಸಿ ಗೆದ್ದು ಬಂದಿದೆ. ೧೯೮೩ರಿಂದೀಚಗೆ ಸಾರ್ವತ್ರಿಕ ಚುನಾವಣೆ, ನಂತರ ಲೋಕಸಭಾ ಚುನಾವಣೆ ಪುರಸಭಾ ಚುನಾವಣೆ, ನಗರಸಭೆಗಳ ಚುನಾವಣೆಗಳನ್ನು ಎದುರಿಸಿದೆ, ಇತ್ತೀಚೆಗೆ ನಡೆದಂಥ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳು ಬಹಳ ಅತಿಶಯೋಕ್ತಿಯಾದದ್ದು. ಇಡೀ ವಿಶ್ವಕ್ಕೆ ಸಾರಿರತಕ್ಕ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳು. ಇದನ್ನು ವಿರೋಧಪಕ್ಷದ ಸ್ನೇಹಿತರು ಅಲ್ಲಗಳೆಯುತ್ತಾ ಇದ್ದಾರೆ. ಮುಂದಿನ ಚುನಾವಣೆಯಲ್ಲಿ ಈ ಭಾರತ ರಾಷ್ಟ್ರವೇ ಜನತಾ ಸರ್ಕಾರ ಅಳವಡಿಸಿದಂಥ ಜಿಲ್ಲಾಪರಿಷತ್ ಮತ್ತು ಮಂಡಲ್‌ಪಂಚಾಯತ್‌ಗಳನ್ನು ಅಳವಡಿಸುತ್ತಾರೆ ಎನ್ನುವ ವಿಷಯವನ್ನು ಮನಬಿಚ್ಚಿ ಮಾತನಾಡುತ್ತಾ ಇದ್ದೇನೆ. ಇದನ್ನು ನಾವು ಹೇಳುತ್ತಾ ಇಲ್ಲ. ಕೇಂದ್ರದಲ್ಲೂ ಕೂಡ ಇದರ ಬಗ್ಗೆ ಮನಸಾರೆ ಹಾರೈಸಿದ್ದಾರೆ. ಪ್ರಧಾನ ಮಂತ್ರಿಗಳು ಮೊದಲ್ಗೊಂಡು ಕೇಂದ್ರದ ಮಂತ್ರಿಗಳು ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಯನ್ನು ಹೊಗಳಿದ್ದಾರೆ. ವಿರೋಧ ಪಕ್ಷದವರು ಕಿರುಕುಳ ಕೊಟ್ಟರು; ಕೇಂದ್ರಸರ್ಕಾರದ ಸವಲತ್ತುಗಳು ಇಲ್ಲದೆ ಸರ್ಕಾರವನ್ನು ನಡೆಸಿಕೊಂಡು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಂದಿದ್ದಾರೆ. ೧೯೮೨ರಲ್ಲಿ ಮಾನ್ಯ ಗುಂಡೂರಾಯರು ಇದ್ದಂಥ ಕಾಲದಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಂದರೂ ಕೋಟ್ಯಾಂತರ ರೂಪಾಯಿಗಳ ಸಾಲವನ್ನು ಬಿಟ್ಟು ಹೋಗಿದ್ದರು. ಇವತ್ತು ಜನತಾ ಸರ್ಕಾರ ಕೋಟ್ಯಾಂತರ ರೂಪಾಯಿಗಳ ಕೇಂದ್ರಸರ್ಕಾರದ ಸಾಲವನ್ನು ತೀರಿಸಿದೆ. ಇವತ್ತು ಜನತೆಯ ಅಭಿಪ್ರಾಯದಂತೆ ಗ್ರಾಮಸಭೆಗಳನ್ನು ಮಾಡುವುದರಲ್ಲಿ ಯಶಸ್ವಿಯಾಗಿದೆ. ವಿಧಾನಸೌಧದಲ್ಲಿ ಶ್ರೀಸಾಮಾನ್ಯನ ಕೆಲಸಗಳು ಆಗಬೇಕಾದ್ದನ್ನು ತಪ್ಪಿಸಿ; ಗ್ರಾಮೀಣ ಮಟ್ಟದಲ್ಲಿಯೇ ಆ ಕೆಲಸಗಳು ಆಗಬೇಕೆಂಬ ಕಾಳಜಿಯನ್ನು ಇಟ್ಟುಕೊಂಡು ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳನ್ನು ಮಾಡಿ ಮುಗಿಸಿದ್ದಾರೆ. ಜನ ತಮ್ಮ ತಮ್ಮ ಕೆಲಸಗಳನ್ನು ಮಂಡಲ್ ಪಂಚಾಯಿತ್ತಿ ಮಟ್ಟದಲ್ಲಿ ಮಾಡಿಕೊಳ್ಳುವಂಥ ಒಂದು ಅವಕಾಶವನ್ನು ಒದಗಿಸಿಕೊಟ್ಟಿದ್ದಾರೆ. ರಾಜ್ಯದಲ್ಲಿ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯಿತ್ತಿ ಚುನಾವಣೆಗಳು ನಡೆದಾಗ, ಇಲ್ಲಿನ ವೈಶಿಷ್ಟ್ಯತೆ ಏನು ಎಂಬುದನ್ನು ಕಣ್ಣಾರೆ ಕಂಡು ಇಡೀ ರಾಷ್ಟ್ರದಲ್ಲಿ ಕರ್ನಾಟಕದಲ್ಲಿ ಮಾತ್ರ ಜನತೆಯ ಕೈಗೆ ಅಧಿಕಾರ ಕೊಡುವಂಥ ವ್ಯವಸ್ಥೆಯನ್ನು ನೋಡಿ ವಿದೇಶದಿಂದ ಬಂದಂಥ ಮುತ್ಸದ್ದಿಗಳು ವಿದೇಶಗಳಿಗೂ ಕೂಡ ವರದಿಯನ್ನು ಕಳುಹಿಸಿದ್ದಾರೆ. ಆದರೆ, ಈ ವಿಚಾರದಲ್ಲಿ ಪ್ರತಿಪಕ್ಷದ ಸ್ನೇಹಿತರಿಂದ ಹೊಗಳಿಕೆಯ ಮಾತು ಬರಲಿಲ್ಲ. ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತ್ತಿ ಚುನಾವಣೆಗಳಲ್ಲ ಹೆಂಡದ ಹೊಳೆ, ಸಾರಾಯಿಹೊಳೆ ಹರಿಯಿತೆಂದು ಮಾನ್ಯ ವಿರೋಧ ಪಕ್ಷದ ಸ್ನೇಹಿತರುಗಳು ಹೇಳಿದರು. ಇದೆಲ್ಲಾ ಅವರದ್ದೇ. ಹಿಂದೆ ತಮ್ಮ ಆಡಳಿತ ವ್ಯವಸ್ಥೆಯಲ್ಲಿ ಏನೊಂದು ವ್ಯವಸ್ಥೆ ಇತ್ತೆಂಬುದನ್ನು ತಾವು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುವುದು ಒಳ್ಳೆಯದು. ಇವತ್ತು ಜನತಾ ಪಕ್ಷದವರು ತಮ್ಮ ಕಡೆ ಬರಬೇಕೆಂದು ಆಹ್ವಾನಮಾಡಿದರೆ ಎಲ್ಲರೂ ತಯಾರಿದ್ದಾರೆ; ಆದರೆ ಏನೋ ಒಂದು ಅಂಜಿಕೆಯಿಂದ ಅವರು ಸಿದ್ಧರಿಲ್ಲ, ಇವತ್ತು ಸಮಾಜದಲ್ಲಿ ಹೊಸತನವನ್ನು ಬೆಳೆಸಲಿಕ್ಕೆ ಪ್ರಯತ್ನ ಮಾಡಿದ್ದಾರೆ.

ಶ್ರೀ ಎಂ. ಎಸ್. ಪಾಟೀಲ್.—ಇವತ್ತು ನಮ್ಮನ್ನು ಸೇರಿಸಿಕೊಳ್ಳುವುದಕ್ಕೆ ಹೊರಟಂತೆ ಕಾಣುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ಸ್ವಾಮಿ, ನಾನು ಮೂಲಭೂತ ತತ್ವಗಳ ಬಗ್ಗೆ ಮಾತನಾಡುತ್ತೇನೆ. ಯಾರನ್ನೂ ಕೂಡ ಟೀಕೆ ಮಾಡುತ್ತಿಲ್ಲ. ಇವತ್ತು ಜನತಾ ಸರ್ಕಾರ ತನ್ನ ಕಾಲಮೇಲೆ ತಾನು ನಿಂತುಕೊಂಡು ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡು ಬಂದಿದೆ. ಮಾನ್ಯ ಪ್ರತಿ ಪಕ್ಷದ ನಾಯಕರಾದಿಯಾಗಿ ಎಲ್ಲ ಸದಸ್ಯರುಗಳು ಮೌಲ್ಯಧಾರಿತ ರಾಜಕಾರಣದ ಬಗ್ಗೆ ಪ್ರಶ್ನೆಗಳ ಸುರಿಮಳೆಯನ್ನೇ ಮಾಡಿದರು. ಸ್ವಾಮಿ, ಜನತಾ ಸರ್ಕಾರದ ಪತನಕ್ಕೆ ಯಾವರೀತಿ ಕಿರುಕುಳ ಕೊಟ್ಟರು; ಕೇಂದ್ರದಿಂದ ಕೋಟಿಗಟ್ಟಲೆ ಹಣ ತಂದು ಪ್ರಯತ್ನ ಮಾಡಿದರು. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್ತಿ ಚುನಾವಣೆಗಳಲ್ಲೂ ಕೂಡ ಕೋಟಿಗಟ್ಟಲೆ ಹಣ ತಂದು ಸುರಿದರು. ಹಣ ತಂದ ವಿಮಾನಗಳು ವಿಮಾನ ನಿಲ್ದಾಣದಲ್ಲಿ ಇಳಿಯಲಿಲ್ಲ. ತುಮಕೂರು ರಸ್ತೆಯ ಜಾಲಹಳ್ಳಿ ವಿಮಾನ ನಿಲ್ದಾಣದಲ್ಲಿ ಇಳಿದು ಕೋಟಿಗಟ್ಟಲೆ ಹಣ ಸುರಿದು ಹೋಗಿದ್ದಾರೆ. ನಾನು ಕಂಡಂತೆ ಚುನಾವಣೆ ಎರಡು ದಿವಸ ಇರುವಾಗ ಒಬ್ಬ ಸದಸ್ಯರೂ ಬೀದಿಯಲ್ಲಿರಲಿಲ್ಲ. ನಂತರ ಎಲ್ಲಿ ನೋಡಿದರೂ ಇವರೆ.

ಒಬ್ಬ ಮಾನ್ಯ ಸದಸ್ಯರು.—ಇದನ್ನು ಪ್ರೂಫ್ ಮಾಡುತ್ತೀರಾ ?

ಶ್ರೀ ಜಿ. ನಾರಾಯಣಕುಮಾರ್,—ಹೌದು.

ಅಧ್ಯಕ್ಷರು.—ನೀವು ಹೇಳಿದ್ದೀರ, ಅವರು ಹೇಳಿದ್ದಾರೆ. ನೀವು ಹೇಳಬಾರದಾಗಿತ್ತು; ಅವರು ಹೇಳಬಾರದಾಗಿತ್ತು.

ಶ್ರೀ ಜಿ. ನಾರಾಯಣಕುಮಾರ್.—ಇವೊತ್ತು ನಾವು ಗ್ರಾಮಸಭೆಯಿಂದ ವಿಧಾನಸಭೆಯವರೆಗೂ ಏಕರೂಪವಾದ ಆಡಳಿತವನ್ನು ಕೊಡುತ್ತಿದ್ದೇವೆ. ನಮ್ಮಲ್ಲಿ ಮೇಲು, ಕೀಳು ಎಂಬ ಭಾವನೆ ಇಲ್ಲ. ಅಧಿಕಾರ ಹಂಚಿಕೆಯಾಗಬೇಕೆಂಬುದೇ ನಮ್ಮ ಉದ್ದೇಶ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಶ್ರೀಸಾಮಾನ್ಯನಿಗೂ ಇದು ತಲುಪಬೇಕೆನ್ನುವ ಉದ್ದೇಶ ಇಟ್ಟುಕೊಂಡು ಮಾಡಿದ್ದೇವೆ. ನುಡಿದಂತೆ ನಡೆ ಎಂದು ಹೇಳುವ ಹಾಗೆ ಮಾಡಿದ್ದೇವೆ. ಜನತಾ ಸರ್ಕಾರ ಕಾಯ, ವಾಚ, ಮನಸಾ ಇದನ್ನು ಕಾರ್ಯಗತ ಮಾಡಿದೆ, ಇದನ್ನು ಪ್ರತಿಯೊಬ್ಬರೂ ಒಪ್ಪುತ್ತಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದೆ ಕಾಂಗ್ರೆಸ್‌ನವರು ನಡೆಸಿದ ಘಟನೆಗಳು ಚರಿತ್ರೆಯಲ್ಲಿ ಬೇಕಾದಷ್ಟು ಇದೆ. ನಮ್ಮ ಹಿರಿಯ ನಾಯಕಿಯವರಾದ ಶ್ರೀಮತಿ ನಾಗರತ್ನಮ್ಮನವರು ಹಿಂದೆ ಸಭಾಧ್ಯಕ್ಷರು ಆಗಿದ್ದುದನ್ನು ನೋಡಿದ್ದೇನೆ. ಹಿಂದೆ ಆಡಳಿತ ಪಕ್ಷದಲ್ಲಿದ್ದ ಗಣ್ಯ ವ್ಯಕ್ತಿಗಳು ಇಲ್ಲಿ ಇದ್ದಾರೆ. ಅವರು ಇವೊತ್ತು

ವಿರೋಧ ಪಕ್ಷದಲ್ಲಿ ಇದ್ದು ಟೀಕೆ ಮಾಡಬೇಕು ಎನ್ನುವ ಭಾವನೆಯಿಂದ ಟೀಕೆ ಮಾಡಿದ್ದಾರೆಯೇ ವಿನಹ ಬೇರೆ ಇಲ್ಲ. ಇವೊತ್ತು ಕೇಂದ್ರಸರ್ಕಾರದಲ್ಲಿರತಕ್ಕ ಪ್ರಧಾನಿ ರಾಜೀವ್‌ಗಾಂಧಿಯವರಿಗೂ ಸಹ ಜನತಾ ಸರ್ಕಾರವನ್ನು ಟೀಕೆ ಮಾಡತಕ್ಕ ನೈತಿಕ ಹಕ್ಕು ಇಲ್ಲ. ಅವರು ನಮ್ಮ ಜನತಾ ಸರ್ಕಾರದ ಬಲವನ್ನು ಪಡೆಯಲಿಕ್ಕೆ ಸರ್ವ ಪ್ರಯತ್ನಪಡುತ್ತಿದ್ದಾರೆ ಎಂದು ಹೇಳಿದ ಮೇಲೆ ನಿವೆಲ್ಲಾ ನಮ್ಮ ಸ್ನೇಹಿತರು ಬಿಡಿ. ನಿಮಗೆ ನಾನು ಇದನ್ನು ಮೆಚ್ಚಿಸಲಿಕ್ಕೆ ಹೇಳುತ್ತಿಲ್ಲ. ಸತ್ಯವಾದಂಥ ಸುದ್ದಿಗಳನ್ನು ಹೇಳುತ್ತಿದ್ದೇನೆ. ಇವೊತ್ತು ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗದೇ ಇರತಕ್ಕಂಥ ಸಂದರ್ಭ ಇದೆ. ೧೯೮೭ರಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳು ನಡೆಯಿತು. ಈ ಅವಧಿಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದರು. ಅವರು ಯಾವುದು ಒಂದು ವ್ಯತ್ಯಾಸ ಇಲ್ಲದೆ, ಯಾವುದೇ ಒಂದು ರೀತಿಯ ವೈಮನಸ್ಯ ಇಲ್ಲದೆ, ರಾಜ್ಯದಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳಲ್ಲಿ ಗೆದ್ದಂತ ಎಲ್ಲಾ ಪಕ್ಷದ ಸದಸ್ಯರನ್ನೂ ಸಾಮೂಹಿಕವಾಗಿ ಕರೆದು ಒಂದೇ ವೇದಿಕೆಯಲ್ಲಿ ಸಮಾರಂಭ ನಡೆಸಿದ್ದಾರೆ. ಈ ತರಹ ಕಾಂಗ್ರೆಸ್‌ನವರು ಮಾಡಿರತಕ್ಕದ್ದನ್ನು ಕಾಂಗ್ರೆಸ್ ಚರಿತ್ರೆಯಲ್ಲಿ ತೋರಿಸಿದರೆ ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ಇವೊತ್ತು ನಮ್ಮಲ್ಲಿ ವ್ಯತ್ಯಾಸ ಇಲ್ಲ. ಗುಣಕ್ಕೆ ಮಾತ್ಸರ್ಯ ಇಲ್ಲ. ಮೊನ್ನೆ ಚುನಾವಣೆಯ ಸಂದರ್ಭದಲ್ಲಿ ನಡೆದಂಥ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ ಜಿಲ್ಲಾ ಪರಿಷತ್ತು ಚುನಾವಣೆಯಲ್ಲಿ ಕಾಂಗ್ರೆಸ್ಸಿನವರು ಮುಂದೆ ಇದ್ದಾರೆಂದು ಅವರಿಗೆ ಸುದ್ದಿ ಗೊತ್ತಾಯಿತು. ಅವರು ಜಿಲ್ಲಾ ಪರಿಷತ್ತಿನ ಚುನಾವಣೆಯಲ್ಲಿ ಮುಂದೆ ಇದ್ದಾರೆಂದು ಗೊತ್ತಾದ ತಕ್ಷಣ, ನಾನು ಸುಳ್ಳು ಹೇಳುವುದಿಲ್ಲ. ಮೂರನೆಯ ತಾರೀಖು ಎಲ್ಲ ವಿಶೇಷ ಪತ್ರಿಕೆಗಳಲ್ಲಿ ಪ್ರಕಟವಾಗುತ್ತದೆ. ಕಾಂಗ್ರೆಸ್‌ನವರು ಮುಂದೆ ಇದ್ದಾರೆಂದು ಕಾಂಗ್ರೆಸ್ ಕಾರ್ಯಕರ್ತರು ರಾತ್ರಿ ಕುತ್ತಿಗೆ ತುಂಬಾ ಕುಡಿದು ಒಂದು ಶಾಸಕರ ಭವನದ ಕೊಠಡಿಯಲ್ಲಿದ್ದ, ಅವರ ಹೆಸರಿನ ಪಟ್ಟಿಯನ್ನೆಲ್ಲಾ ಕಿತ್ತುಹಾಕಿ ಗೂಂಡಾಗಿರಿ ಮಾಡಿದ್ದಾರೆ. ಜನತಾ ಸರ್ಕಾರ ತಮ್ಮ ಪ್ರಭಾವದಿಂದ, ತಮ್ಮ ಸ್ವಂತ ಶಕ್ತಿಯಿಂದ ಇಡೀ ಗ್ರಾಮದವರೆಗೆ ತಮ್ಮ ಶಕ್ತಿಯನ್ನು ಕೇವಲ ನಾಲ್ಕು ವರ್ಷಗಳಲ್ಲಿ ಮುಟ್ಟಿಸಿದೆ ಅಂದಮೇಲೆ ೩೫ ವರ್ಷಗಳ ಕಾಲ ಮಾಡಿದಂಥ ಕಾಂಗ್ರೆಸ್ ಆಡಳಿತದ ಗತಿ ಏನು. ೩೫ ವರ್ಷ ದೊಡ್ಡದೋ, ೪ ವರ್ಷ ದೊಡ್ಡದೋ ಎಂದು ಕೇಳಲಿಕ್ಕೆ ಇಷ್ಟಪಡುತ್ತೇನೆ. ಆಕಸ್ಮಿಕವಾಗಿ, ದೈವವಶಾತ್ ದೇವರು ನಮ್ಮ ಮೇಲೆ ಅಭಿಮಾನ ಇಟ್ಟಿದ್ದಕ್ಕೆ ಸರಿಹೋಯಿತು. ಕಾಂಗ್ರೆಸ್‌ನವರು ಮಂಡಲ್ ಪಂಚಾಯತ್‌ನಲ್ಲಿ ಏರುಪೇರಾಗಿ ಬಂದಿದ್ದರೆ ಮನೆ ಮನೆ ನುಗ್ಗಿ, ಹೆಣ್ಣುಮಕ್ಕಳ ಮಾನಮರ್ಯಾದೆ, ಮಾನಭಂಗ ಮಾಡಲಿಕ್ಕೆ ಕಾಂಗ್ರೆಸ್ ಕಾರ್ಯಕರ್ತರು ತಯಾರಾಗುತ್ತಿದ್ದರು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಸುಮ್ಮನೆ ಅಲಿಗೇಷನ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ನಾನು ಹೇಳುತ್ತೇನೆ, ದಯವಿಟ್ಟು ಎಲ್ಲರೂ ಕೂಡಿರಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅವರು ಹೇಳಿರತಕ್ಕ ಮಾತನ್ನು ದಾಖಲೆಯಿಂದ ತೆಗೆದುಹಾಕಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ನಮ್ಮನ್ನು ರೇಗಿಸಬೇಕೆಂದು ಮಾತನಾಡುತ್ತಾರೆ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕೂಡಿ, ನಾನು ಹೇಳುತ್ತೇನೆ. ನಾರಾಯಣಕುಮಾರ್‌ರವರೇ ಇದು ವರೆಗೂ ನೀವು ಬಹಳ ಚೆನ್ನಾಗಿ ಮಾತನಾಡಿದಿರಿ. ನಿಮ್ಮನ್ನು ನೋಡಿ ಸದಸ್ಯರು ಚಪ್ಪಾಳೆ ಹೊಡೆದರು. ಇನ್ನು ಮುಂದೆ ಅವರಿಗೆ ಸಿಟ್ಟು ಬರುವಂತೆ ಮಾತನಾಡಬಾರದು. ನೀವು ನಮ್ಮ ಸ್ನೇಹಿತರು ಎಂದೆಲ್ಲಾ ಹೇಳಿದ್ದೀರಿ. ಅವರಿಗೆ ಸಂತೋಷವಾಗಿದೆ. ಆದರೆ ಅವರಿಗೆ ಸಿಟ್ಟು ಬರದಂತೆ ಮಾತನಾಡಬೇಕು ಅಷ್ಟೆ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ಮೊದಲು ನೀವು ರಿಕಾರ್ಡ್‌ನ್ನು ತೆಗೆಸಿನೋಡಿ.

ಅಧ್ಯಕ್ಷರು,—ನಾನು ಅದನ್ನು ತೆಗೆಸಿ ನೋಡಿ ಅದೇನಾದರೂ ಅನ್‌ಪಾರ್ಲಿಮೆಂಟರಿ ಪದ ಆಗಿದ್ದರೆ ತೆಗೆಸಿಹಾಕುತ್ತೇನೆ.

(ಗೊಂದಲ)

ಅಧ್ಯಕ್ಷರು.—ರಿಕಾರ್ಡ್ ನೋಡಿ ಏನಾದರೂ ಅಂಥಾದ್ದು ಇದ್ದರೆ ತೆಗೆಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರಾಜ್ಯಪಾಲರ ಭಾಷಣದ ಮೇಲೆ ಅವರು ಎಷ್ಟು ಬೇಕಾದರೂ ಕಟುವಾಗಿ ಮಾತನಾಡಲಿ. ಆದರೆ ನಮ್ಮ ಬಗ್ಗೆ ಮಾತನಾಡಿದರೆ ನಾವು ಯಾರೂ ಸಹಿಸುವುದಿಲ್ಲ.

ಶ್ರೀ ಬಿ. ರಾಚಯ್ಯ.—ನಿಮ್ಮ ಕಡೆಯುವರಿಗೂ ಇದೇ ಮಾತನ್ನು ಹೇಳಿ. ನಿಮ್ಮ ಕಡೆಯುವರು ಮಾತನಾಡಿದ್ದೆಲ್ಲಾ ಪಾರ್ಲಿಮೆಂಟರಿ ಪದಗಳಾಗಿದ್ದುವೆ?

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಗೂಂಡಾಗಳು ಮನೆಗಳ ಒಳಗೆ ನುಗ್ಗಿ ಹೆಂಗಸರ ಮಾನ ಮರ್ಯಾದೆ ಕಳೆಯುತ್ತಿದ್ದರು ಎಂದು ಹೇಳುವುದಾದರೆ ಕಾಂಗ್ರೆಸ್‌ನವರೆಲ್ಲಾ ಅದೇ ಮಾಡಿದ್ದಾರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕಾಂಗ್ರೆಸ್‌ನವರು ಹಿಂದೆ ಯಾವಾಗಲಾದರೂ ಹೀಗೆ ಮಾಡಿದ್ದರೆ?

(ಗೊಂದಲ)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ,—ನೀವೆಲ್ಲಾ ೪-೫ ವರ್ಷಗಳಿಂದ ಈಚೆಗೆ ಜನತಾ ಪಕ್ಷದ ಸದಸ್ಯರಾಗಿದ್ದೀರಿ. ಇದಕ್ಕೆ ಹಿಂದೆ ನೀವು ಕಾಂಗ್ರೆಸ್ ಪಕ್ಷದವರಾಗಿದ್ದೀರಿ. ಆಗ ನೀವೂ ಗೂಂಡಾಗಿರಿ ಮಾಡಿದ್ದಿರಾ? ಆಗ ಕಾಂಗ್ರೆಸ್‌ನಲ್ಲಿದ್ದವರೆಲ್ಲಾ ಹೆಂಗಸರ ಮಾನ, ಮರ್ಯಾದೆ ಕಳೆದಿದ್ದಿರಾ? ಏತಕ್ಕೆ ಅದನ್ನೆಲ್ಲಾ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕೂತುಕೊಳ್ಳಿ, ಯಾರೂ ಮಾತನಾಡುವುದು ಬೇಡ. ನೀವಾಗಲಿ, ಅವರಾಗಲಿ ಯಾರು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಜಿ. ನಾರಾಯಣ್ ಕುಮಾರ್.—ಈವತ್ತಿನ ದಿವಸ ಮಂಡಲ್ ಪಂಚಾಯತ್‌ಗೆ ಮತ್ತು ಜಿಲ್ಲಾಪರಿಷತ್ತಿಗೆ ಚುನಾವಣೆಗಳನ್ನು ನಡೆಸಿ ಜನತಾ ಸರ್ಕಾರದವರು ಬಹಳ ಉತ್ತಮವಾದಂಥ ಕೆಲಸ ಮಾಡಿದ್ದಾರೆ. ಜನತಾ ಪ್ರತಿನಿಧಿಗಳಿಗೆ, ಜನತಾ ನಾಯಕರುಗಳಿಗೆ ಗೌರವ ತರತಕ್ಕಂಥ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಇದು ಆಡಳಿತ ವ್ಯವಸ್ಥೆಯಲ್ಲಿ ಮುಂದೆ ಭವ್ಯ ಭವಿಷ್ಯ ಕಾದಿದೆ, ಜಿಲ್ಲಾಪರಿಷತ್, ಮಂಡಲ್ ಪಂಚಾಯತ್ ಮೂಲಕ ನಾಯಕತ್ವಕ್ಕೆ ಕಡಿವಾಣ ಹಾಕಿರತಕ್ಕಂಥದ್ದು ನಿಜವಾಗಿಯೂ ವಾಸ್ತವಿಕ ಕಾರ್ಯ ಸಾಧನೆ ಮಾಡಿದಂತಾಗಿದೆ. ಇದನ್ನು ಯಶಸ್ವಿಯಾಗಿ ಜಾರಿಗೆ ತರುವುದರಲ್ಲಿ ಸರ್ಕಾರ ಯಶಸ್ವಿಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಬರಗಾಲದ ಬಗ್ಗೆ ಹೇಳುವುದಾದರೆ, ಒಂದು ದಿವಸ ಕೂಲಿಕಾರರಾಗಿ ಕೆಲಸ ಮಾಡಿದರೆ ಗೊತ್ತಾಗುತ್ತದೆ. ಒಂದು ತಿಂಗಳು ಸಂಬಳ ಸಾರಿಗೆ ಬರದೆ ಇದ್ದರೆ ಒಂದು ಮನೆಯು, ಕುಟುಂಬದ ಸಂಸಾರವನ್ನು ಸಾಗಿಸುವುದೇ ಕಷ್ಟವಾಗುತ್ತದೆ. ಇಂಥ ಸಂದರ್ಭದಲ್ಲಿ ೧೯೮೩ನೇ ಇಸವಿಯಲ್ಲಿ ಜನತಾ ಸರ್ಕಾರ ಆಡಳಿತಕ್ಕೆ ಬರುವಾಗಲೇ ಬರಗಾಲ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಬರಗಾಲ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ ನಮ್ಮ ಅನೇಕ ಜನ ಸ್ನೇಹಿತರು, ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾದುದೇ ಬರಗಾಲ ಬಂದಿತು ಎಂದು ಹೇಳಿದರು. ಇದೊಂದು ಕಟ್ಟುಕತೆ. ಪಾಪ ಅದು ಅವರ ಅನಿಸಿಕೆ. ಆದರೆ ಈವತ್ತಿನದಿವಸ ರಾಮಕೃಷ್ಣ ಹೆಗಡೆಯವರು ಮಾಡಿದಂತಹ ಉತ್ತಮವಾದ ಕೆಲಸದ ಬಗ್ಗೆ ನಮ್ಮ ಸ್ನೇಹಿತರು ಒಪ್ಪದೇ ಇರಬಹುದು. ಇನ್ನೊಬ್ಬರು ಒಪ್ಪದೆ ಇರಬಹುದು. ವೈಯಕ್ತಿಕವಾಗಿ ಎಲ್ಲಾ ಭಾಗಗಳಿಂದಲೂ ಒಂದಲ್ಲ ಒಂದು ರೀತಿಯಿಂದ ಹೊಗಳಿ ಒಪ್ಪಿಕೊಂಡಿರುತ್ತಾರೆ. ಈ ಮಾತನ್ನು ಹೇಳಿ ತಮ್ಮಿಂದ ಮೆಚ್ಚುಗೆ ಪಡೆದುಕೊಳ್ಳಬೇಕಾಗಿಲ್ಲ. ರಾಮಾಯಣ, ಮಹಾಭಾರತದ ಕಾಲದಲ್ಲೂ, ಬರಗಾಲ ಬಂದಿತ್ತು, ಹಾಗೆ ಹೀಗೆ ಎನ್ನುವ ಕತೆಗಳನ್ನು

ನಾವು ಕೇಳಿದ್ದೇವೆ. ಜೀವನದಲ್ಲಿ ಇಂಥ ಒಂದು ಪ್ರಸಂಗ ಕರ್ನಾಟಕ ರಾಜ್ಯದಲ್ಲಿ ಎಂದೂ ಕಂಡಿರಲಿಲ್ಲ. ೧೯೮೨ನೇ ಇಸವಿಗೂ ಹಿಂದೆ ಆದಂತಹ ಅವಾಂತರದಿಂದ ಬರಗಾಲ ಕಾಣಿಸಿಕೊಂಡಿತು. ಅವರು ಮಾಡಬಾರದ ಅನ್ಯಾಯ ಅನಾಚಾರ, ಭ್ರಷ್ಟಾಚಾರ ಮಾಡಿದ್ದರಿಂದ ಪ್ರಕೃತಿ ಮುನಿದು ೧೯೮೩ನೇ ಇಸವಿಯಲ್ಲಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ಕಷ್ಟ ಅನುಭವಿಸಬೇಕಾಯಿತು. ೧೯೮೩ರಲ್ಲಿ ಜನರು ಅಧಿಕಾರಕ್ಕೆ ತಂದಂಥ ಜನತಾ ಸರ್ಕಾರ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿನ ಸರ್ಕಾರ ಅವರ ಒಂದು ಕಾಯವಾಚ ಮನಸ್ಸಿನಿಂದ ನಮ್ಮ ಆಡಳಿತ ನೇರವಾಗಿ ಶ್ರೀಸಾಮಾನ್ಯರಿಗೆ ಹೋಗಬೇಕೆಂದು ಎಲ್ಲಾ ಶ್ರಮ ವಹಿಸಿದರು. ಇಂಥ ಒಂದು ಸರ್ಕಾರವನ್ನು ಉರುಳಿಸುವ ಒಂದು ಪ್ರಯತ್ನದಿಂದ ಕೇಂದ್ರ ಸರ್ಕಾರದಿಂದ ಪ್ರತಿಷ್ಠಿತ ವ್ಯಕ್ತಿಗಳು ಹಣವನ್ನು ಹೊಳೆಹೊಳೆಯಾಗಿ ಹರಿಸಿದರು. ಆದರೂ ಸಹ ಜನತಾ ಸರ್ಕಾರದ ಒಂದು ಕೊಂಕನ್ನೂ ಕೂಡ ಅಲ್ಲಾಡಿಸುವುದಕ್ಕೆ ಸಾಧ್ಯವಾಗಲಿಲ್ಲ, ಇನ್ನು ಹೆಚ್ಚಿನ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ, ಯಾರು ಒಬ್ಬ ಅನೈತಿಕ ಶಕ್ತಿಯನ್ನು ಇಟ್ಟುಕೊಂಡಿರುವಂಥವರು ಕೂಡ ಅಲ್ಲಾಡಿಸುವುದಕ್ಕೆ ಸಾಧ್ಯವಾಗಲಿಲ್ಲ. ಇಂಥ ಒಂದು ಗುರುತರವಾದ ಶಕ್ತಿಯನ್ನು ಜನತಾ ಸರ್ಕಾರ ತೋರಿಸಿಕೊಟ್ಟಿದೆ. ೧೯೮೩-೮೪-೮೫ನೇ ಇಸವಿಯಲ್ಲಿ ಆದಂಥ ಸಾರ್ವತ್ರಿಕ ಚುನಾವಣೆಯನ್ನು ಎದುರಿಸಿ ಮತ್ತೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿತು.

೬-೦೦ ಪಿ. ಎಂ.

ಅಂಥ ಕಾಲದಲ್ಲಿ ಬರಗಾಲ ಬೇರೆ. ೧೯೮೩ರಲ್ಲಿ ಹೊಸ ಸರ್ಕಾರ ಬಂದಬಳಿಕ ಎರಡು ವರ್ಷದ ಆಡಳಿತಾವಧಿಯಲ್ಲಿ ಬಹಳ ಕಡಿಮೆ ಸದಸ್ಯರಿದ್ದರೂ ಕೂಡ ಸ್ನೇಹ ಪಕ್ಷದವರ ಸಹಕಾರದೊಂದಿಗೆ ಸತ್ಯ ಪ್ರಾಮಾಣಿಕ ಆಡಳಿತ ನಡೆಸಿದ್ದನ್ನು ೧೯೮೫ರಲ್ಲಿ ಜನತೆ ಗುರುತಿಸಿತು. ನೀವು ಉತ್ತಮ ಆಡಳಿತ ಕೊಟ್ಟಿದ್ದೀರಿ ಎಂದು ಅಧಿಕ ಸದಸ್ಯರನ್ನು ಗೆಲ್ಲಿಸಿಕೊಟ್ಟಿತು. ಜನತೆಯ ಮೇಲೆ ಪ್ರೀತಿ ವಿಶ್ವಾಸ ಗಳನ್ನು ಇಟ್ಟಿದ್ದೀರಿ. ಅದಕ್ಕೋಸ್ಕರ ಅಧಿಕ ಮತಗಳನ್ನು ಕೊಡುತ್ತಿದ್ದೇವೆ, ನೀವು ಧೈರ್ಯವಾಗಿ ಆಡಳಿತ ಮಾಡತಕ್ಕದ್ದು ಎಂದು ಹರಸಿ ಕಳುಹಿಸಿದ್ದಾರೆ. ಇದು ಉತ್ಪ್ರೇಕ್ಷೆಯ ಮಾತಲ್ಲ, ಇದು ಮಾನ್ಯ ಅಧ್ಯಕ್ಷರಿಗೂ ಮತ್ತು ನಮ್ಮ ಸ್ನೇಹಿತರಿಗೂ ಗೊತ್ತಿದೆ. ಅವರ ಅಧಿಕಾರ ಹೋಗಬೇಕಾದರೆ, ಅದು ಯಾರೊಬ್ಬ ಸದಸ್ಯರು ಮಾಡಿದಂತಹ ಮಹಾ ಪಾಪ ಅಲ್ಲ. ಹಲವಾರು ಮಂದಿ ಮಾಡಿದ ಮಹಾಪಾಪದ ಫಲದಿಂದ ಅವರ ಆಡಳಿತ ಹೋಯಿತು. ೧೯೮೫ರಲ್ಲಿ ಮಾಡಿದಂತಹ ಚುನಾವಣೆ ಯಲ್ಲಿ ಬಹಳ ದಿಟ್ಟ ನಿಲುವನ್ನು ಎದುರಿಸಿ ನಮ್ಮ ಸರ್ಕಾರ ಆಡಳಿತಕ್ಕೆ ಬಂತು. ಆದರೆ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಬಂತು, ಇವತ್ತು ಅಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತ ಮಾಡುತ್ತಿದೆ ಎಂದು ಹೇಳುವುದನ್ನು ಕೇಳಿದ್ದೇನೆ. ಆದರೆ ಅದು ನೈತಿಕ ಬಲದಿಂದ ಬರಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಏನು ದಿವಂಗತರಾದರು ಅವರ ಮೇಲಿನ ಕನಿಕರದಿಂದ ಮತ ಕೊಟ್ಟರೇ ಹೊರತು ನೈತಿಕವಾಗಿ ಕಾಂಗ್ರೆಸ್ಸಿನವರು ಗೆದ್ದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ ಪ್ರತಿದಿನ ದೂರದರ್ಶನದಲ್ಲಿ ಕೊಂಯಿ ಕೊಂಯಿ ಎಂದು ಕೊರೆದು ಇಂದಿರಾಗಾಂಧಿಯವರನ್ನು ಚಿತ್ರವಿಚಿತ್ರವಾಗಿ ತೋರಿಸಿ ಶ್ರೀಸಾಮಾನ್ಯರು ಅಯ್ಯೋ ಪಾಪ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಅತಿಯಾಯಿತು.

(ಗೊಂದಲ)

ಅಧ್ಯಕ್ಷರು.—ಖರ್ಗೆಯವರೆ ಕೂರಿ, ಏಕೆ ಅವರಿಗೆ ಡಿಸ್ಟರ್ಬ್ ಮಾಡುತ್ತೀರಿ ? ಇಂದಿರಾಗಾಂಧಿ ಯವರ ಪುಣ್ಯ ಎಲ್ಲರಿಗೂ ಇದೆ.

ಶ್ರೀ ಜಿ. ನಾರಾಯಣ ಕುಮಾರ್.—ನಾನು ವಿರೋಧ ಪಕ್ಷಗಳಿಗೆ ವಿರೋಧಿ ಅಲ್ಲ, ದ್ವೇಷಿ ಅಲ್ಲ. ಉತ್ತಮ ಆಡಳಿತವನ್ನು. ಒಳ್ಳೆಯ ಆಡಳಿತವನ್ನು ಯಾರು ಕೊಡುತ್ತಾರೋ ಅವರ ಪರ ನಾನು. ಇವತ್ತು ದೇಶದಲ್ಲಿ ನಡೆಯುತ್ತಿರತಕ್ಕ ಉತ್ತಮ ಕಾರ್ಯಕ್ರಮಗಳು, ಜನಸಾಮಾನ್ಯರು ನಡೆದಂತಹ ಹಾದಿ, ಚುನಾವಣೆಯ ಮಹತ್ವ ಇವೆಲ್ಲ ದುಡ್ಡು ಕೊಟ್ಟರೆ ಬರುವುದಿಲ್ಲ, ಹೆಂಡ ಕುಡಿಸಿದರೆ, ಸಾರಾಯಿ ಕುಡಿಸಿದರೆ, ಮಾಂಸ ತಿನ್ನಿಸಿದರೆ, ಲಂಚ ಕೊಟ್ಟರೆ ಬರುವುದಿಲ್ಲ. ಹೃದಯಸ್ಪರ್ಶಿಯಾಗಿ ರಾಮಕೃಷ್ಣ ಹೆಗಡೆಯವರ ಸರ್ಕಾರಕ್ಕೆ, ಜನತೆಯ ಸರ್ಕಾರಕ್ಕೆ ಮತ ಕೊಟ್ಟಿದ್ದಾರೆಯೇ ಹೊರತು ಇನ್ನಾವ ದೃಷ್ಟಿಯಿಂದ ಅಲ್ಲ. ಹೆಗಡೆಯವರ ಸರ್ಕಾರ ಒಳ್ಳೆಯ ಮಾರ್ಗದರ್ಶನವನ್ನು ತೋರಿಸಿ ಕೊಟ್ಟಿದೆ. ಇವತ್ತು ಇನ್ನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಈ ರಾಜ್ಯದಲ್ಲಿ ಏತಕ್ಕೆ ಮಳೆ ಬೆಳೆ ಇಲ್ಲವೆಂದರೆ, ಕಾಂಗ್ರೆಸ್‌ನವರ ಆಡಳಿತದಲ್ಲಿ ಮಳೆ ಆಕಾಶ ಸೇರಿತ್ತು.

ಕಾರಣ, ರಾಜ್ಯದಲ್ಲಿರತಕ್ಕ ಅರಣ್ಯ ಸಂಪತ್ತನ್ನು ಸರ್ವನಾಶ ಮಾಡಿ ಅವರಿಗೆ ಬೇಕಾದ ಟಾಟ–ಬಿರ್ಲಾಗಳಿಗೆ ಕೊಟ್ಟು ಕೋಟಿ ಕೋಟಿ ರೂಪಾಯಿಗಳಿಸಿ, ಅರಣ್ಯ ಸಂಪತ್ತನ್ನೆಲ್ಲ ಹರಾಜು ಹಾಕಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಹೋದರಲ್ಲ ಅರಣ್ಯ ಸಚಿವರು ಅವರೇ ಇದ್ದರು.

ಅಧ್ಯಕ್ಷರು.—ಲಘುವಾಗಿ ತೆಗೆದುಕೊಳ್ಳಿ.

ಶ್ರೀ ಜಿ. ನಾರಾಯಣ ಕುಮಾರ್.—ಕೊಡಗು, ಮಡಿಕೇರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿದ್ದಂತಹವನ ಸಂಪತ್ತು ಸರ್ವನಾಶವಾಯಿತು. ಅದರಿಂದಾಗಿ ಕ್ಷಾಮ ದವಡೆಯಲ್ಲಿ ಸಿಕ್ಕಬೇಕಾಯಿತು. ಕ್ಷಾಮವಾಗಲಿ, ಬರಗಾಲವಾಗಲಿ ಯಾವ ಕಾರಣದಿಂದ ಬರುತ್ತದೆ? ಅರಣ್ಯನಾಶವೇ ಇದಕ್ಕೆ ಮೂಲ ಕಾರಣ. ಅಂದು ಆಡಳಿತದಲ್ಲಿದ್ದವರು ಇದಕ್ಕೆ ಕಾರಣರು. ಅವರು ಅರಣ್ಯದಲ್ಲಿದ್ದಂತಹ ಸರ್ವಸಂಪತ್ತನ್ನು ಹಾಳು ಮಾಡಿದರು, ಗಿಡಮರಗಳೆಲ್ಲ ಹೋದವು. ಮಳೆ–ಮೋಡಗಳನ್ನು ಕೊಡತಕ್ಕ ಅರಣ್ಯ ಹೋದಮೇಲೆ ಮಳೆ ನಿಂತಿತು. ಈಗ ರಾಮಕೃಷ್ಣ ಹೆಗಡೆಯವರು ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕೆಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಶ್ರೀ ಸಾಮಾನ್ಯರಿಗೆ ತೊಂದರೆ ಆಗದ ರೀತಿಯಲ್ಲಿ ರಾಜ್ಯಾದ್ಯಂತ ಕಾಡುಮೇಡುಗಳಲ್ಲಿ, ಊರುಗಳಲ್ಲಿ ಮರಗಿಡಗಳನ್ನು ನೆಡೆಸಿ, ಕಾಂಗ್ರೆಸ್ ಸರ್ಕಾರದಲ್ಲಿ ಗುಲ್ಬರ್ಗ ಮತ್ತು ಬಿಜಾಪುರಗಳಲ್ಲಿ ಹಿಂದೆಂದೂ ಕಾಣದಂತಹ ಮಳೆ ಧಾರಾಕಾರವಾಗಿ ಆಯಿತು, ಇನ್ನು ಐದೇ ನಿಮಿಷ........

ಅಧ್ಯಕ್ಷರು.—ಇನ್ನು ಬಹಳ ಜನ ಇದ್ದಾರೆ. ಇವತ್ತೇ ಮುಗಿಸಬೇಕು. ಇನ್ನೂ ಎಷ್ಟು ಹೊತ್ತು ಮುಂದುವರೆಸಬೇಕು? ಇವತ್ತು ಮುಗಿಯಲೇಬೇಕು. ನಾಳೆ ಚೀಫ್ ಮಿನಿಸ್ಟರ್ ಉತ್ತರ ಕೊಡುತ್ತಾರೆ ಇದಕ್ಕೆ. ರಾತ್ರಿ ೧೨ ಗಂಟೆವರೆಗೂ ನಾನು ಕೊಡುವುದಕ್ಕೆ ತಯಾರಾಗಿದ್ದೇನೆ. ದಯವಿಟ್ಟು ಮುಕ್ತಾಯ ಮಾಡಿ ನಾರಾಯಣ ಕುಮಾರ್ ಅವರೆ. ನೀವು ಬಹಳ ಚೆನ್ನಾಗಿ ಮಾತನಾಡಿದ್ದೀರಿ. ಇನ್ನು ಸಾಕು. ಅರ್ಧಗಂಟೆ ಕೊಟ್ಟಿದ್ದೇನೆ ನಿಮಗೆ. ಸಾಕು ಮುಗಿಸಿ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೆ, ನಿಮ್ಮೆದುರು ಮಾತನಾಡುವುದಕ್ಕೆ ನನಗೆ ಸಂತೋಷ. ನಗುಮುಖದಿಂದಿರುತ್ತೀರಿ. ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ರಾಮಕೃಷ್ಣ ಹೆಗಡೆಯವರು ಪ್ರಕೃತಿಯನ್ನೂ ಕೂಡ ತಂದಿದ್ದಾರೆ. ಗಿಡಮರಗಳನ್ನು ಬೆಳೆಸುವುದಕ್ಕೆ, ಕೋಟ್ಯಾಂತರ ಮರಗಳನ್ನು ಬೆಳೆಸಿ ಪ್ರಕೃತಿಯನ್ನು ಸರಿಹಿಡಿದಿದ್ದಾರೆ. ಇದರಿಂದ ಮಳೆ ಬಿದ್ದಿದೆ ಇವತ್ತು. ಹಿಂದೆಂದೂ ಹೊಸ ಮೈಸೂರು ಭಾಗದಲ್ಲಿ ಬಾರದಂಥ ಮಳೆ ಈಗ ಬಂದಿದೆ. ಬಿಜಾಪುರ ಮತ್ತು ಗುಲ್ಬರ್ಗ ಬಹಳ ವರ್ಷಗಳಿಂದ ಬರಗಾಲ ಪ್ರದೇಶ. ಅಲ್ಲಿ ಈ ವರ್ಷ ಮೊಟ್ಟಮೊದಲನೆಯದಾಗಿ ಮಳೆ ಬಿದ್ದಿದೆ. ಆದ್ದರಿಂದ ಜನತಾಸರ್ಕಾರ ಜನರಿಗೆ ಮಾತ್ರವಲ್ಲ ಪ್ರಕೃತಿದತ್ತವಾದ ದೇವರನ್ನೂ ಕೂಡ ಮನವೊಲಿಸಿಕೊಂಡಿದೆ. ಮತ್ತೊಂದು ವಿಷಯ. ಈ ರಾಜ್ಯದಲ್ಲಿ ಕನ್ನಡವನ್ನು ಉಳಿಸಬೇಕಾದರೆ ಹಿಂದಿನ ಆಡಳಿತದಲ್ಲಿ ಬಹಳ ಕಷ್ಟವಾಗಿತ್ತು. ಕನ್ನಡವನ್ನು ಆಗ ದೀಪದ ಬೆಳಕು ಇಟ್ಟುಕೊಂಡು ನೋಡಬೇಕಾಗಿತ್ತು. ಇವತ್ತು ರಾಮಕೃಷ್ಣ ಹೆಗಡೆಯವರ ಸರ್ಕಾರ, ಜನತೆಯ ಸರ್ಕಾರ ಕನ್ನಡದ ಬಗ್ಗೆ ಆಸಕ್ತಿ ವಹಿಸಿ ಸರೋಜಿನಿ ಮಹಿಷಿ ಸಮಿತಿಯನ್ನು ರಚನೆ ಮಾಡಿತು. ಈ ಈ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಇರುವಾಗ, ಕನ್ನಡಿಗರಿಗೇ ಕೆಲಸ ಇಲ್ಲದೇ ಇದ್ದಾಗ ನೆರೆರಾಜ್ಯಗಳಿಂದ ಜನ ಬಂದು ಬದುಕುತ್ತಿದ್ದಾರೆ, ಈ ದೇಶಕ್ಕೋಸ್ಕರ ಹುಟ್ಟಿ ಸಾಯುತಕ್ಕ ಮಣ್ಣಿನ ಮಕ್ಕಳಿಗೆ ಉದ್ಯೋಗ ಇಲ್ಲ ಎಂಬ ವಾದಕ್ಕೆ ರಾಮಕೃಷ್ಣ ಹೆಗಡೆಯವರು ಮನ್ನಣೆ ನೀಡಿ ಸರೋಜಿನಿ ಮಹಿಷಿ ಸಮಿತಿ ರಚನೆ ಮಾಡಿ ಶೇಕಡ ೮೦ ರಷ್ಟು ಉದ್ಯೋಗವನ್ನು ಕನ್ನಡಿಗರಿಗೆ ಕೊಡಬೇಕೆಂಬ ಅವರ ವರದಿಯನ್ನು ಒಪ್ಪಿಕೊಂಡಿದ್ದಾರೆ. ಕನ್ನಡ ಕಾವಲು ಸಮಿತಿಯನ್ನು ರಚನೆ ಮಾಡಿತು ಈ ಸರ್ಕಾರ.

ಅಧ್ಯಕ್ಷರು.—ದಯೆಯಿಟ್ಟು ಮುಕ್ತಾಯ ಮಾಡಿ.

ಶ್ರೀ ಜಿ. ನಾರಾಯಣಕುಮಾರ್,—ಕನ್ನಡ ಕಾವಲು ಸಮಿತಿಯನ್ನು ರಚನೆ ಮಾಡಿದಮೇಲೆ ಅವರು ಕೆಲವು ರಚನಾತ್ಮಕ ಕೆಲಸ ಮಾಡುತ್ತಿದ್ದಾರೆ. ನಾನು ಕೂಡ ಅದರ ಸದಸ್ಯನಾಗಿದ್ದೇನೆ. ಕೆಲವು ಕೆಲಸಗಳನ್ನು ಸಮಿತಿಯವರು ರಾಜ್ಯಾದ್ಯಂತ ಮಾಡಿದ್ದಾರೆ. ಕೆಲವು ತಪ್ಪಿರಬಹುದು. ತಪ್ಪಿದ್ದರೆ ಒಪ್ಪಿಕೊಳ್ಳುವುದಕ್ಕೆ ಸಿದ್ಧ. ಸತ್ಯವನ್ನು ಮೆಚ್ಚಿಕೊಳ್ಳುವುದಕ್ಕೆ ಕುಂದು ಏನಿದೆ? ಎಲ್ಲಿ ನೋಡಿದರೂ ಕನ್ನಡಮಯ ಮಾಡಿರತಕ್ಕ ರಾಮಕೃಷ್ಣ ಹೆಗಡೆಯವರ ಜನತಾ ಸರ್ಕಾರ, ಕರ್ನಾಟಕ ಜನತೆಯ ಸರ್ಕಾರ ಕನ್ನಡದ ವರ್ಷವನ್ನು ವಿಶೇಷವಾದಂಥ ರೀತಿಯಲ್ಲಿ ಆಚರಣೆ ಮಾಡಿದೆ. ಇನ್ನೊಂದು ವಿಷಯ ವಿಶೇಷವಾಗಿ ಏನು ಮಾಡಿದೆ ಎಂದರೆ, ಒಬ್ಬ ಕನ್ನಡದ ಪ್ರತಿನಿಧಿ ಇರಬೇಕೆಂದು

ನನ್ನನ್ನು ಗುರುತಿಸಿ ಕನ್ನಡದ ಹೋರಾಟಗಾರ ಎಂದು ಶಾಸಕತನವನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಜನತಾ ಸರ್ಕಾರಕ್ಕೆ ಮತ್ತು ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಮತ್ತು ಇಡೀ ಕನ್ನಡ ನಾಡಿನ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇವತ್ತು ಅಭಿಮಾನ ಬೇಕು.

ಅಧ್ಯಕ್ಷರು,—ನಾರಾಯಣಕುಮಾರ್ ರವರೆ, ಮುಕ್ತಾಯಮಾಡಿ.

ಶ್ರೀ ಜಿ. ನಾರಾಯಣ ಕುಮಾರ್.—ಮೂರೇ ನಿಮಿಷ.

ಶ್ರೀ ರಾಜವರ್ಧನ್.—ಅವರಿನ್ನೂ ವಿಷಯಕ್ಕೇ ಬಂದಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.— ಈ ರಾಜ್ಯದಲ್ಲಿ ಜನತಾ ಸರ್ಕಾರದ ಬಗ್ಗೆ ಒಬ್ಬ ಶತೃವಾಗಿರತಕ್ಕವರು ಕೂಡ ಹೊಗಳಿ ಇನ್ನೂ ನೂರು ವರ್ಷಗಳ ಕಾಲ ಚಿರಾಯುವಾಗಿರಲಿ ಎಂದು ಹೇಳುತ್ತಿದ್ದಾರೆ. ಅಂಥ ಅಭಿಮಾನಿಗಳು ಈ ದೇಶದಲ್ಲಿದ್ದಾರೆ. ಈ ರಾಜ್ಯದಲ್ಲಿ ಮಾತ್ರವಲ್ಲ, ಭಾರತ ರಾಷ್ಟ್ರದಲ್ಲೂ ಇದ್ದಾರೆ. ಎಲ್ಲ ಕಡೆಯೂ ಒಂದೇ ಮಾತು. ಮಾನ್ಯ ಮಿತ್ರರಾದ ಬಂಗಾರಪ್ಪನವರು ಕೆಲವು ಪ್ರಚಾರ ಕಾರ್ಯಗಳ ಬಗ್ಗೆ ಟೀಕೆ ಮಾಡಿದರು. ಟೀಕೆ ಮಾಡುವುದು ಮನುಷ್ಯನ ಸ್ವಭಾವ, ಗುಣ. ತಂದೆ ಮಕ್ಕಳನ್ನು, ಮಕ್ಕಳು ತಂದೆಯನ್ನು ಟೀಕೆ ಮಾಡುತ್ತಾರೆ. ತಂದೆ ತಾಯಿಯನ್ನು ತಾಯಿ ತಂದೆಯನ್ನು ಟೀಕೆ ಮಾಡುತ್ತಾರೆ. ಯಾವುದನ್ನು ಟೀಕೆ ಮಾಡಬೇಕು. ಯಾವುದನ್ನು ಟೀಕೆ ಮಾಡಬಾರದು ಎನ್ನತಕ್ಕಂತಹ ವಿಷಯವನ್ನು ತಿಳಿದುಕೊಳ್ಳದೇ ಬರೀ ಟೀಕೆ ಟೀಕೆ. ವಿವರವನ್ನು ಕೊಟ್ಟು ಹೇಳಬೇಕು. ಬರೀ ತೀಟೆ ತೀರಿಸಿಕೊಳ್ಳುವುದಲ್ಲ. ಕೆಲವು ಪುಸ್ತಕಗಳನ್ನು ಅಚ್ಚು ಹಾಕಿಸಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಉತ್ತರ ಪ್ರದೇಶದಲ್ಲಿ ಹಂಚಿದ್ದಾರೆ, ಮಧ್ಯಪ್ರದೇಶದಲ್ಲಿ ಹಂಚಿದ್ದಾರೆ, ಅದನ್ನು ನಾನು ದೆಹಲಿಯಲ್ಲಿ ನೋಡಿದೆ, ಯು ಪಿ. ಯಲ್ಲಿ ನೋಡಿದೆ, ಮಧ್ಯಪ್ರದೇಶದಲ್ಲಿ ನೋಡಿದೆ, ಅಲ್ಲಿ ನೋಡಿದೆ, ಇಲ್ಲಿ ನೋಡಿದೆ, ಎಂಬುದಾಗಿ ಶ್ರೀಮಾನ್ ಬಂಗಾರಪ್ಪನವರು ಹೇಳಿದರು. ಎಲ್ಲಿತ್ತು ದುಡ್ಡು, ಅಲ್ಲೆಲ್ಲಾ ಸುತ್ತುವುದಕ್ಕೆ ? ಅವರೂ ನಮ್ಮ ಹಾಗೆ ಸಾಮಾನ್ಯ ಶಾಸಕರು. ವಿರೋಧಪಕ್ಷದ ನಾಯಕರಾಗಿದ್ದರೆ, ಹೆಚ್ಚಿನ ಭತ್ಯ ನಿತ್ಯ ಬರುತ್ತಾ ಇತ್ತು. ಈ ರೀತಿಯ ಪ್ರಚಾರ ನನಗೆ ಸಿಕ್ಕಲಿಲ್ಲವಲ್ಲಾ, ಎಲ್ಲಾ ಕಡೆ ಅವರ ಬಗ್ಗೆ ಪ್ರಚಾರ ಆಗುತ್ತಿದೆ ಎಂಬ ಒಂದೇ ಒಂದು ಕಾರಣದಿಂದ ಆ ರೀತಿ ಹೇಳಿದ್ದಾರೆ. ರಷ್ಯ ದೇಶದ ಪ್ರಚಾರ ಕರ್ನಾಟಕದಮೂಲೆಗೆ ಬರುತ್ತಿರಬೇಕಾದರೆ, ಕರ್ನಾಟಕ ಸಂಸ್ಕೃತಿಯ ಪ್ರಚಾರ ದೇಶವಲ್ಲೆಲ್ಲಾ ಹೋದರೆ ತಪ್ಪೇನು ? ಅದನ್ನು ನೋಡಿ ಸಂತೋಷ ಪಡಬೇಕು. ಕರ್ನಾಟಕ ರಾಜ್ಯದಲ್ಲಿ ಶ್ರೀಮಾನ್ ಬಂಗಾರಪ್ಪನವರೂ ಜೀವನ ಮಾಡುತ್ತಿದ್ದಾರೆ, ಕೇವಲ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಾತ್ರವಲ್ಲ. ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಅವರಿಗೆ ಸಿಕ್ಕಲಿಲ್ಲವೆಂದು ಈ ರೀತಿಯೆಲ್ಲಾ ಹೇಳುವುದು ಬೇಡ. ಮುಖ್ಯಮಂತ್ರಿ ಸ್ಥಾನ ಯಾರ ಮನೆಯ ಸ್ವತ್ತು ಅಲ್ಲ. ಅದೃಷ್ಟ ಲಕ್ಷ್ಮಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಒಲಿದಿರುವಾಗ ಶ್ರೀಮಾನ್ ಬಂಗಾರಪ್ಪನವರಿಗೆ ಎಲ್ಲಿದೆ ? ಕಾಗೆ ಬಂಗಾರ ಇಟ್ಟು ಕೊಂಡರೆ ಅದನ್ನು ಯಾರು ನೋಡುತ್ತಾರೆ. ನಿಜವಾದ ಬಂಗಾರವಾಗಿದ್ದರೆ, ಅದರಲ್ಲಿ ಮೂಗುತಿ ಮಾಡಿಸಿಕೊಳ್ಳುತ್ತಾರೆ. ಓಲೆ ಮಾಡಿಸಿ ಕೊಳ್ಳುತ್ತಾರೆ, ತಾಳಿ ಮಾಡಿಸಿಕೊಳ್ಳುತ್ತಾರೆ. ಆದರೆ ಕಾಗೆ ಬಂಗಾರವನ್ನು ಯಾರು ಇಟ್ಟುಕೊಳ್ಳುತ್ತಾರೆ ?

ಶ್ರೀ ಜಿ. ಎಂ. ಕಾನಡೆ.—ಮಾನ್ಯ ಅಧ್ಯಕ್ಷರೆ, ಅವರು ವ್ಯಯಕ್ತಿಕವಾಗಿ ಆರೋಪ ಮಾಡುತ್ತಿದ್ದಾರೆ......

ಶ್ರೀ ಜಿ. ನಾರಾಯಣಕುಮಾರ್.—ಶ್ರೀಮಾನ್ ಕಾನಡೆಯವರು ನನ್ನ ಸ್ನೇಹಿತರು. ಇಂತಹ ಘನ ಸರ್ಕಾರ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿರತಕ್ಕ ಈ ರಾಜ್ಯ ಸರ್ಕಾರದಲ್ಲಿ ಅವರು ಮೂರು ಸಾರಿ ಮುಖ್ಯಮಂತ್ರಿಗಳಾಗಿದ್ದಾರೆ. ೩ ವರ್ಷಗಳಲ್ಲಿ ಮೂರು ಸಾರಿ ಅವರೇ ಮುಖ್ಯಮಂತ್ರಿಗಳಾಗಿದ್ದಾರೆ. ಅದೇ ಕಾಂಗ್ರೆಸ್ ಸರ್ಕಾರ ಇದ್ದಂತಹ ಸಮಯದಲ್ಲಿ ಈ ರೀತಿ ಆಗಿದ್ದರೆ, ಮುಖ್ಯಮಂತ್ರಿಯಾಗಿರುವಂತಹವರು ಒಮ್ಮೆ ರಾಜೀನಾಮೆಯನ್ನು ಕೊಟ್ಟಿದ್ದರೆ, ಅವರ ಬದಲು ನನ್ನನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ ಎಂಬುದಾಗಿ ೧೦೦ ಜನ ನಿಂತುಕೊಳ್ಳುತ್ತಿದ್ದರು. ಆದರೆ ನಾವು ಆ ರೀತಿ ಮಾಡಿಲ್ಲ. ಪ್ರಾಮಾಣಿಕವಾದ ಈ ಜನತಾ ಸರ್ಕಾರದಲ್ಲಿರತಕ್ಕ ಶಾಸಕರಾಗಿರಲಿ, ಕಾರ್ಯಕರ್ತರಾಗಿರಲಿ, ನಾವು ಯಾರೇ ಆಗಿರಲಿ, ನಮ್ಮ ಮುಂದಾಳು ಒಂದು ಆದೇಶವನ್ನು ನೀಡಿದರೆ ಅದರ ಹಿಂದೆ ಹೋಗತಕ್ಕಂತಹದ್ದು ನಮ್ಮ ಕರ್ತವ್ಯ. ಪ್ರಾಮಾಣಿಕವಾಗಿ ನೀವೇ ಇರಬೇಕೆಂಬುದಾಗಿ ಒಂದು ಸಿದ್ಧಾಂತವನ್ನೇ ಅಳವಡಿಸಿದ್ದೇವೆ. ಇದೇ ರಾಷ್ಟ್ರದಲ್ಲೇ ಅಲ್ಲ, ಇಡೀ ವಿಶ್ವದಲ್ಲೇ ಅವರ ಮಾದರಿಯಾದ ಆದೇಶವನ್ನು ಪಾಲಿಸಬೇಕು ಎನ್ನತಕ್ಕಂತಹ ಮಾತನ್ನು ತಮ್ಮಲ್ಲಿ ನಾನು ಮನವಿ

ಮಾಡುತ್ತೇನೆ. ಇವತ್ತು ಎಲ್ಲ ದೃಷ್ಟಿಯಲ್ಲೂ ಸಹ ಇಷ್ಟೊಂದು ಸಾವಧಾನವಾಗಿ ಸಂತೋಷದಿಂದ ನಗುನಗುತ್ತಾ ಕುಳಿತುಕೊಂಡಿರತಕ್ಕಂತಹ ಅಧ್ಯಕ್ಷರನ್ನು ಚರಿತ್ರೆಯಲ್ಲೇ ನಾನು ನೋಡಿಲ್ಲ. ಸದಾ ನಗುಮುಖಿ, ಸಂತೋಷ, ಸಾವಧಾನ ಇರತಕ್ಕಂತಹವನು ಆ ಪೀಠದಲ್ಲಿ ಶ್ರೀಮಾನ್ ವೈಕುಂಠಬಾಳಿಗಾರವರು ಇದ್ದಾಗ ನಾನು ನೋಡಿದ್ದೆ. ಇಂದು ತಾವು ಅವರಿಗಿಂತ ಹೆಚ್ಚಿನ ರೀತಿಯಲ್ಲಿ ಆ ಪೀಠಕ್ಕೆ ಒಂದು ಭೂಷಣವಾಗಿದ್ದೀರಿ. ನಾನು ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ನಾನು ಬಹಳ ಹೊತ್ತು ಸಮಯ ತೆಗೆದುಕೊಂಡಿದ್ದೇನೆ. ಕ್ಷಮಿಸಬೇಕು. ಈ ಸದನದಲ್ಲಿ ಜನತಾ ಸರ್ಕಾರದ ಸಾಧನೆ ಬಗ್ಗೆ ಮಾತನಾಡುವುದು ನನಗೊಂದು ಹೆಗ್ಗಳಿಕೆ. ಜನತಾ ಸರ್ಕಾರದ ಬಗ್ಗೆ ಶ್ರೀಸಾಮಾನ್ಯನ ಅಭಿಪ್ರಾಯ ಯಾವ ರೀತಿ ಇದೆ ಎಂಬುದನ್ನು ನಾನು ಮೊನ್ನೆ ನಡೆದ ಚುನಾವಣೆಯ ಸಮಯದಲ್ಲಿ ಜನಸಾಮಾನ್ಯರಲ್ಲಿ ತಿಳಿದುಕೊಂಡದ್ದನ್ನು ಹೇಳುತ್ತೇನೆ. ಮೊನ್ನೆ ನಡೆದ ಚುನಾವಣೆಯ ಸಮಯದಲ್ಲಿ ಹೋದಾಗ ಏನು ಸ್ವಾಮಿ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ರಾಜ್ಯ ಸರ್ಕಾರವನ್ನು ಬಿಟ್ಟು ಕೇಂದ್ರ ಸರ್ಕಾರಕ್ಕೆ ಹೋಗುತ್ತಾರಂತೆ, ಬಹಳ ಕಷ್ಟವಾಗುತ್ತವೆಂದು ಹೇಳಿದರು. ರಾಜರಾಜೇಶ್ವರಿ ಮೇಲೆ ಆಣೆ ಇಟ್ಟು ಹೇಳುತ್ತಿದ್ದೇನೆ. ಅದಕ್ಕೆ ನಾನು ಹೇಳಿದೆ, ನೀವು ಕೊಟ್ಟಿರತಕ್ಕ ಕೆಲಸ ನಿಮ್ಮ ಸೇವೆಯನ್ನು ಮಾಡುವುದಕ್ಕೋಸ್ಕರ ಕೊಟ್ಟಿದ್ದೀರಿ. ನೀವು ಎಲ್ಲಿಯವರೆಗೆ ಇರಬೇಕೆಂದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರನ್ನು ನೇಮಿಸಿದ್ದೀರೋ ಅವರು ಅಲ್ಲಿಯವರೆಗೂ ಇರುತ್ತಾರೆ, ಅದಕ್ಕಾಗಿ ನೀವು ಅಂಜಬಾರದು ಅಳುಕಬಾರದು, ಜನತಾ ಸರ್ಕಾರವನ್ನು ಮೆಚ್ಚಿ ಮತ ಕೊಡಬೇಕು ಅಂತ ಹೇಳಿದಾಗ ದೇವರಾಣೆ ಕೊಡುತ್ತೇವೆಂದು ಹೇಳಿದರು. ಅದೇ ಹಿಂದೆ ಇದ್ದಂತಹ ಕಾಂಗ್ರೆಸ್ ಸರ್ಕಾರದ ಬಗ್ಗೆ ಜನತೆ ಆ ಭಾವನೆ ಹೊಂದಿರಲಿಲ್ಲ. ಯಾವತ್ತು ಈ ಸರ್ಕಾರ ಹೋದರೆ ಸಾಕೆಂದು ಶಾಪ ಹಾಕುತ್ತಿದ್ದರು. ಇವತ್ತು ನನ್ನ ಕೆಲವು ಸ್ನೇಹಿತರು ವ್ಯಯಕ್ತಿಕವಾಗಿ ಟೀಕೆ ಮಾಡಿದ್ದಾರೆಂಬ ಸುದ್ದಿ ನನಗೆ ಮುಟ್ಟಿದೆ. ವ್ಯಯಕ್ತಿಕವಾಗಿ ಟೀಕೆ ಮಾಡಬಾರದು. ತಪ್ಪು ಮಾಡದೇ ಇರತಕ್ಕಂತಹವರು ಯಾರು ? ಶ್ರೀಮಾನ್ ಉಮರಬ್ಬನವರು ನನಗೆ ಸಿಗಲಿಲ್ಲ. ಆಗ ನಾನು ಇಲ್ಲಿರಲಿಲ್ಲ. ಇಲ್ಲಿ ಯಾವುದೇ ರೀತಿಯ ಟೀಕೆ ಇದ್ದರೆ ಅದರಲ್ಲಿ ಸತ್ಯ ಇದ್ದರೆ ಮಾತನಾಡಿ. ಅದು ಬಿಟ್ಟು ಎದುರಿಗೆ ಸಿಕ್ಕಾಗ ನಯವಾಗಿ ಮಾತನಾಡಿ, ಅವರು ಇಲ್ಲದಿದ್ದಾಗ ಕೆಲವು ವಿಷಯಗಳ ಬಗ್ಗೆ ಆರೋಪ ಮಾಡಿದ್ದಾರೆ. ಶ್ರೀಮಾನ್ ಉಮರಬ್ಬನವರ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಇನ್ನೊಬ್ಬರ ಬಗ್ಗೆ ಬೇಡ. ಉಮರಬ್ಬನವರ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. *** ಆದ್ದರಿಂದ ಇನ್ನೊಬ್ಬರ ಮೇಲೆ ಆರೋಪ ಮಾಡಬಾರದು. ಆರೋಪ ಮಾಡುವುದಾದರೆ ಉಚಿತವಾದ ಆರೋಪವನ್ನು ಮಾಡಬೇಕು. ಇವತ್ತು ಜೀವರಾಜ ಆಳ್ವ ಅವರು ನನ್ನ ಆತ್ಮೀಯ ಸ್ನೇಹಿತರಿದ್ದಾರೆ. ಇವರ ಒಂದು ಇಲಾಖೆ ಬಗ್ಗೆ, ಇಲಾಖೆಯಲ್ಲಿ ಮೋಸ ನಡೆದಿದ್ದರೆ ಅಂಕಿ ಅಂಶ ಕೊಟ್ಟು ಹೇಳಲಿ. ನಾರಾಯಣಕುಮಾರ್ ತಪ್ಪು ಮಾಡಿದ್ದರೆ ಅದನ್ನು ಹೇಳಲಿ. ಕನ್ನಡ ಚಳುವಳಿಗಾರ...

ಶ್ರೀ ಎಂ ಎಲ್. ಉಸ್ತಾದ್.—ಉಮರಬ್ಬ ಅವರು ಈಗ ಸಭೆಯಲ್ಲಿ ಇಲ್ಲ. ಅವರ ಮೇಲೆ ಇವರು ಏನೂ ಹೇಳಬಾರದು.

(ಗೊಂದಲ)

SRI M. MALLIKARJUNA KHARGE.—I raise a Point of Order.

ಒಬ್ಬ ಮಾನ್ಯ ಸದಸ್ಯರು.—ಉಮರಬ್ಬ ಅವರು ಮಾತನಾಡುವಾಗ ನಾರಾಯಣಕುಮಾರ್ ಅವರೂ ಸದನದಲ್ಲಿ ಇರಲಿಲ್ಲ.

ಅಧ್ಯಕ್ಷರು.—ಅವರು ಏನು ಟೀಕೆ ಮಾಡಿದರು ಅದಕ್ಕೆ ಇವರು ಉತ್ತರ ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಈ ಸದನದಲ್ಲಿ ಯಾರು ಪಾರ್ಟಿ ಇದ್ದಾರೆ ಅವರ ಬಗ್ಗೆ ಮಾತನಾಡಿದರೆ...

*** Expunged as ordered by the Chair.

ಅಧ್ಯಕ್ಷರು.—ಇವರು ಇಲ್ಲದಾಗ ಇವರ ಹೆಸರು ತೆಗೆದುಕೊಂಡ್ರೋ ಇಲ್ವೋ? ಈಗ ಅವರಿಲ್ಲದಾಗ ಅವರ ಹೆಸರು ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ಜಿ. ಎಂ. ಕಾನಡೆ.—ಅವರು ವೈಯುಕ್ತಿಕವಾಗಿ...

(ಗೊಂದಲ)

ಅಧ್ಯಕ್ಷರು.—ಇವರು ಇಲ್ಲದಾಗ ಅವರು ಇವರ ಹೆಸರು ತೆಗೆದುಕೊಂಡಿಲ್ಲವೋ?

ಶ್ರೀಮಲ್ಲಿಕಾರ್ಜುನ ಎಂ. ಖಾರ್ಗೆ.—ಆಗ ಅಬ್ಜೆಕ್ಷನ್ ಮಾಡಬಹುದಾಗಿತ್ತು.

ಅಧ್ಯಕ್ಷರು.—ಅವರ ಟೀಕೆಗೆ ಇವರು ಉತ್ತರ ಹೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಕಾನಡೆಯವರೇ. ಅನ್ನಬಾರದ್ದು ಎಂದು ಹೇಳಿದರೆ ಅದನ್ನು ನಾನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಜಿ. ಎಂ. ಕಾನಡೆ.—ವೇಶ್ಯಾವಾಟಿಕೆ ಎಂದು ಹೇಳಿದ್ದಾರೆ. ಅದನ್ನು ತೆಗೆಸಬೇಕು. ನಮಗೂ ಅದು ಇದೆ. ಆದರೆ ನಾವು ಅದನ್ನು ಹೇಳುತ್ತೇವೆಯೇ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ವೇಶ್ಯಾವಾಟಿಕೆ ಎಂದು...

(ಗೊಂದಲ)

ಅಧ್ಯಕ್ಷರು. ಅನ್ನಬಾರದ್ದು ಇದ್ದರೆ ಎಕ್ಸ್‌ಪಂಜ್ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಹೆಸರನ್ನು ರೆಫರ್ ಮಾಡುವುದಾದರೆ ಮಾಡಲಿ. ಆದರೆ ಉಮರಬ್ಬನವರ ಬಗ್ಗೆ ವೈಯುಕ್ತಿಕವಾಗಿ...

(ಗೊಂದಲ)

ಶ್ರೀ ಜಿ. ಎಂ. ಕಾನಡೆ.—ರಘುಪತಿಯವರದ್ದನ್ನು ತೆಗೆಯಲೇ ನಾನು. ಅವರು ಇಲ್ಲೇ ಇದ್ದಾರೆ. ನನಗೆ ಅವಕಾಶ ಕೊಡಿ. ಏನಿದು ಸ್ವಾಮಿ, ಬಾಯಿಗೆ ಬಂದಹಾಗೆ ಮಾತನಾಡುತ್ತಾರೆಂದರೆ ಇದು ಹಳ್ಳಿ ಪಂಚಾಯಿತಿ ಆಯಿತೇ ಹೊರತು ಸದನ ಅಲ್ಲ. ಲೋಫರ್‌ಗಳೇ ರಾಜಕಾರಣಕ್ಕೆ ಬರುವುದು. ಒಳ್ಳೆಯವರು ಬರುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ನಾರಾಯಣಕುಮಾರ್ ಅವರೇ, ತಮ್ಮ ಭಾಷಣವನ್ನು ಮುಕ್ತಾಯಮಾಡಿ.

ಶ್ರೀ ಜಿ. ಎಂ. ಕಾನಡೆ.—ನಮಗೂ ಮಾತನಾಡಲು ಟೈಮ್ ಕೊಡಿ.

(ಗೊಂದಲ)

ಅಧ್ಯಕ್ಷರು.—ನಾರಾಯಣಕುಮಾರ್ ಅವರೇ, ನಿಮಗೆ ಒಂದು ಸಲಹೆ ಕೊಡುತ್ತೇನೆ.

(ಗೊಂದಲ)

ಶ್ರೀ ಜಿ.ಎಂ. ಕಾನಡೆ.—ಅಧ್ಯಕ್ಷರೇ, ಅವರು...

ಅಧ್ಯಕ್ಷರು.—ಅನ್ನಬಾರದ್ದು ಇದ್ದರೆ ನಾನು ಎಕ್ಸ್‌ಪಂಜ್ ಮಾಡಿಸುತ್ತೇನೆ. ತಾವು ಕೂಡ್ರಿ. Nothing will go on record. ತಾವೂ ಕೂಡಿ, ನೀವೂ ಕೂಡಿ. ಈ ಕಡೆ ಇರಲಿ, ಆ ಕಡೆ ಇರಲಿ, ಕಾನಡೆಯವರೇ...

(ಗೊಂದಲ)

ಶ್ರೀ ಜಿ.ಎಂ. ಕಾನಡೆ.—ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಚ್ಚುತ್ತೀರಿ.

(ಗೊಂದಲ)

ಅಧ್ಯಕ್ಷರು.—ಈ ಕಡೆಯುವರು ಮತ್ತು ಆ ಕಡೆಯುವರು ಅನ್ನಬಾರದ ಶಬ್ದವನ್ನು ಉಪಯೋಗ ಮಾಡಿದ್ದರೆ, ರೆಕಾರ್ಡ್ ತರಿಸಿ ನೋಡಿ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ. ಎಕ್ಸ್‌ಪಂಜ್ ಇವತ್ತು ಮಾಡಬಹುದು, ನಾಳೆ ಮಾಡಬಹುದು ಅಥಾವ ನಾಡಿದ್ದು ಮಾಡಬಹುದು ಆ ಅಧಿಕಾರವಿದೆ. ತಾವು ಚೆನ್ನಾಗಿ ಮಾತನಾಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾತನಾಡಬಾರದ ಮಾತು ಮಾತನಾಡಿದ್ದರೆ ಅದು ಪ್ರೆಸ್‌ಗೆ ಹೋಗುತ್ತದೆ. ತಾವು ಅದನ್ನು ತೆಗೆಸುವುದು ಒಳ್ಳೆಯದು.

ಅಧ್ಯಕ್ಷರು.—ಮಾನ್ಯ ನಾರಾಯಣಕುಮಾರ್‌ರವರು ಈ ಕಡೆಯುವರನ್ನು ಕುರಿತು ಅನ್ನಬಾರದ ಮಾತು ಬಳಸಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡಿದ್ದೇನೆ. ಮಾನ್ಯ ಸದಸ್ಯರು ಯಾರನ್ನೂ ಏನೂ ಅನ್ನುವುವಕ್ಕೆ ಹೋಗಬೇಡಿ. ತಾವು ದಯೆಯಿಟ್ಟು ಬೇಗ ಮುಗಿಸಿ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ.............

ಡಾ॥ ಹೆಚ್.ಎಲ್. ತಿಮ್ಮೇಗೌಡ.—ವೇಶಾವಾಟಿಕೆ ಎಂಬ ಪದವನ್ನು ಎಕ್ಸ್‌ಪಂಜ್ ಮಾಡಬೇಕು

ಅಧ್ಯಕ್ಷರು.—ಆಯಿತು. ಮಾನ್ಯ ನಾರಾಯಣಕುಮಾರ್‌ರವರು ಮಾಕ್ಸಿಮಮ್ ಟೈಮು ತೆಗೆದುಕೊಂಡಿದೀರಿ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಏನೇ ಆಗಲಿ ಚರ್ಚೆಯನ್ನು ಮುಗಿಸಿ ಬೇಕೆಂದು ಹೇಳಿದ್ದಾರೆ, ನಾಳೆ ಬೆಳಿಗ್ಗೆ ಅವರು ಉತ್ತರ ಕೊಡುತ್ತಾರೆ. ಇನ್ನು ಮಾತನಾಡುವವರು ೯ ಜನ ಶಾಸಕರಿದ್ದಾರೆ. ಒಬ್ಬೊಬ್ಬರಿಗೆ ೧೦ ನಿಮಿಷ ಅಂದರೆ ೯೦ ನಿಮಿಷಗಳಾಗುತ್ತವೆ. ಇನ್ನೂ ಒಂದೂವರೆ ತಾಸು ಆಗುತ್ತದೆ. ತಾವು ಆದಷ್ಟು ಬೇಗ ಮುಗಿಸಿಬಿಡಿ.

ಶ್ರೀ ಎಂ. ಎಸ್. ಪಾಟೀಲ್.—ತಾವು ದಯಮಾಡಿ ಅವರಿಗೆ ಇನ್ನೂ ಎಷ್ಟು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರಿ ಎಂಬುದನ್ನು ಹೇಳಬೇಕು. ಈಗಾಗಲೇ ಅವರು ಮಾತನಾಡಲಿಕ್ಕೆ ಶುರುಮಾಡಿ ಒಂದು ತಾಸು ಆಯಿತು.

ಶ್ರೀ ಜಿ. ನಾರಾಯಣಕುಮಾರ್.—ತಮ್ಮ ಮಾತಿಗೆ ತಲೆಬಾಗುತ್ತೇನೆ, ನಾನು ಹಿರಿಯರಿಗೆ ಮತ್ತು ತಂದೆತಾಯಿಗಳಿಗೆ ಹೆಚ್ಚು ಗೌರವ ಕೊಡುತ್ತೇನೆ. ಇವತ್ತು ಜನತಾ ಸರ್ಕಾರ ಪರಿಣಾಮ ಕಾರಿಯಾದ ಕೆಲಸ ಮಾಡಿದೆ, ಅದನ್ನು ಪ್ರತಿಯೊಬ್ಬರೂ ಗುರುತಿಸಿ ಗೌರವಿಸುತ್ತಿದ್ದಾರೆ. ಆದ್ದರಿಂದ ನಾನು ಜನತಾ ಸರ್ಕಾರಕ್ಕೆ ಗೌರವವನ್ನು ಸಲ್ಲಿಸಿ, ನಾನು ಕೆಲವು ಉತ್ತಮ ನುಡಿಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ, ಕನ್ನಡಾಂಬೆಗೆ, ಕನ್ನಡ ರಾಜರಾಜೇಶ್ವರಿಗೆ ಜಯವಾಗಲೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ವಿಧಾನಮಂಡಲದ ಉಭಯ ಸದಸ್ಯರುಗಳನ್ನು ಉದ್ದೇಶಿಸಿ ಮಾಡಿದ ಭಾಷಣವನ್ನು ನಾನು ವಿರೋಧಿಸುತ್ತಾ, ಈ ಒಂದು ಭಾಷಣದಲ್ಲಿ ಜನತಾ ಸರ್ಕಾರದ ಧ್ಯೇಯ ಧೋರಣೆ ನೀತಿ ತತ್ವಗಳನ್ನು ಅವರ ಭಾಷಣದಲ್ಲಿ ತಿಳಿಸಿದ್ದಾರೆ. ಮಹಾತ್ಮ ಗಾಂಧೀಜಿಯವರ ಕನಸನ್ನು ನನಸು ಮಾಡುವಂತಹ ವಿಚಾರಗಳು ಈ ಒಂದು ಭಾಷಣದಲ್ಲಿದೆ. ನಾನು ಒಂದು ಗಾದೆ ಮಾತು ಹೇಳುತ್ತೇನೆ 'ಹೇಳುವುದು ವಾದ ಹಾಕುವುದು ಗಾಳ' ಎನ್ನುವ ಹಾಗೆ ಅವರ ಈ ಒಂದು ಭಾಷಣದಲ್ಲಿ ತಿಳಿಸಿದ ರೀತಿಯಲ್ಲಿ ಈ ಒಂದು ಧ್ಯೇಯ ಧೋರಣೆ ನೀತಿ ತತ್ವವನ್ನು ಅಳವಡಿಸಲಿಕ್ಕೆ ಸಂಪೂರ್ಣ ವಿಫಲರಾಗಿದ್ದಾರೆನ್ನುವ ಮಾತನ್ನು ಹೇಳುತ್ತಿದ್ದೇನೆ. ಇತ್ತೀಚೆಗೆ ಜನತಾ ಸರ್ಕಾರದ ಬಹು ದೊಡ್ಡ ಸಾಧನೆ ಎಂದು ಹೇಳಿದರೆ ಅದು ಚುನಾವಣೆ. ಚುನಾವಣೆಯಲ್ಲಿ ಯಾವರೀತಿ ನಡೆದಿದೆ ಎನ್ನುವಂತಹದ್ದನ್ನು ಸಹ ಈ ಸಂದರ್ಭ ದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಇಂದು ಮತದಾರರಿಗೆ ಚುನಾವಣೆ ಒಂದು ವರವಾಗಬೇಕೇ ಹೊರತು ಚುನಾವಣೆ ಶಾಪ ಆಗಬಾರದು. ಆದರೆ ಇಂದು ರಾಜ್ಯದಲ್ಲಿ ಗೂಂಡಾ ಕಾಯಿದೆಯನ್ನು ಗೂಂಡಾಗಳನ್ನು ಹತ್ತಿಕ್ಕುವುದಕ್ಕೆ ಕಾಯಿದೆಯನ್ನು ಮಾಡಿದ ನಂತರ, ಗೂಂಡಾಗಳು ಚುನಾವಣೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮತ್ತು ರಾಜಕೀಯ ಪ್ರವೇಶಿಸತಕ್ಕ ಸಂದರ್ಭವನ್ನು ನಾವು ನೋಡುತ್ತಿದ್ದೇವೆ. ಈ ಗೂಂಡಾಗಳಿಗೆ ರಕ್ಷಣೆ ಸಿಗುವಂಥ ಪಕ್ಷ ಇದ್ದರೆ ಅದು ಈ ಆಡಳಿತ ಪಕ್ಷವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ, ಈ ಗೂಂಡಾಗಳಿಗೆ ಒಂದು ವೇದಿಕೆ ಇದ್ದರೆ ಅದು ಚುನಾವಣೆ. ಇಂತಹ ಚುನಾವಣೆಗಳನ್ನು ನಾವು ಎದುರಿಸುತ್ತಿದ್ದೇವೆ. ಈ ಚುನಾವಣೆಗಳಲ್ಲಿ ನಡೆದಂಥ ದಬ್ಬಾಳಿಕೆಗಳನ್ನು ಸಂಕ್ಷಿಪ್ತವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ......

ಅಧ್ಯಕ್ಷರು.—ಶ್ರೀ ಪ್ರತಾಪಚಂದ್ರಶೆಟ್ಟಿಯವರೇ, ಈ ವಿಷಯವಾಗಿ ಬಹಳ ಜನ ಹೇಳಿದ್ದಾರೆ. ನೋಡಿ, ಬೇರೆ ಸಲಹೆ, ಸೂಚನೆಗಳಿದ್ದರೆ, ಲೋಪದೋಷಗಳು ಇದ್ದರೆ ಎತ್ತಿ ತೋರಿಸಿ.

ಶ್ರೀ ಪ್ರತಾಪಚಂದ್ರಶೆಟ್ಟಿ.—ನಮ್ಮ ಕ್ಷೇತ್ರದಲ್ಲಿ ನಡೆದಂಥ ವಿಚಾರ ಮಾತ್ರ ಈ ಸಂದರ್ಭದಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದು ಏನೆಂದರೆ ನಮ್ಮ ಕುಂದಾಪುರ ತಾಲ್ಲೂಕಿನಲ್ಲಿ ಜನತಾಪಕ್ಷದ ಒಬ್ಬ ಅಭ್ಯರ್ಥಿ ಪರಾಜಿತರಾದರು. ಸೋಲು ಗೆಲುವು ರಾಜಕೀಯ ಪಕ್ಷದಲ್ಲಿ ಇದ್ದದ್ದೇ. ಒಂದಲ್ಲ ಒಂದು ದಿವಸ ಗೆದ್ದವರು ಸೋಲಬೇಕಾಗುತ್ತದೆ, ಸೋತವರು ಗೆಲ್ಲಬೇಕಾಗುತ್ತದೆ. ಇದು ಎಲ್ಲಾ ರಾಜಕೀಯ ಪಕ್ಷಗಳಿಗೂ ಇರುವಂಥಾದ್ದು. ಚುನಾವಣೆ ಮುಗಿಯಿತು, ಎಣಿಕೆ ಮುಗಿದು ಮನೆಗೆ ಬರತಕ್ಕಂಥ ಸಂದರ್ಭದಲ್ಲಿ ಮಧ್ಯರಾತ್ರಿ ಕಾಲದಲ್ಲಿ ನಿರಪರಾಧಿ ಮತದಾರರ ಮೇಲೆ, ಅವರ ಅಂಗಡಿಗಳ ಮೇಲೆ, ಅವರ ಮನೆಗಳ ಮೇಲೆ ಹಲ್ಲೆ ನಡೆಯಿತು. ಈ ಬಗ್ಗೆ ನಾನು ಸರ್ಕಾರದಲ್ಲಿ ವಿಜ್ಞಾಪನೆ ಮಾಡಿಕೊಳ್ಳುವುದೇನೆಂದರೆ, ಏನೂ ಅರಿಯದ ಮತದಾರರ ಮೇಲೆ ಹಲ್ಲೆ ನಡೆದಂಥ ಸಂದರ್ಭದಲ್ಲಿ ಕಾನೂನಿನಲ್ಲಿ ಪರಿಹಾರ ಕೊಡುವಂಥ ಸೌಕರ್ಯ ಇಲ್ಲದಿದ್ದರೂ ಕೂಡ ಮಾನವೀಯತೆ ದೃಷ್ಟಿಯಿಂದ ಈ ನೊಂದಿರುವ ಕುಟುಂಬಗಳಿಗೆ ಪರಿಹಾರ ಕೊಡುವಂಥ ಜವಾಬ್ದಾರಿ ಸರ್ಕಾರದ ಮೇಲೆ ಇದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ಘಟನೆ ನಡೆಯಿತು. ಕಾಂಗ್ರೆಸ್ (ಐ) ಕಾರ್ಯಕರ್ತರು ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿರುವ ಸಂದರ್ಭದಲ್ಲಿ ಜನತಾ ಸರ್ಕಾರದ ಜೀಪೊಂದು ಬಂದು ಡಿಕ್ಕಿ ಹೊಡೆಯಿತು. ಆ ಸಂದರ್ಭದಲ್ಲಿ ನೊಂದಂಥ ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆಗೆ ಸೇರಿಸುವಂಥ ಸಂದರ್ಭದಲ್ಲಿ ಕಾಂಗ್ರೆಸ್ (ಐ) ಕಾರ್ಯಕರ್ತರೇ ಸಂಪೂರ್ಣವಾಗಿ ರಾಜಕೀಯ ಭೇದಭಾವ ಮರೆತು ನೊಂದಂಥ ಜನರನ್ನು ಆಸ್ಪತ್ರೆಗೆ ಸೇರಿಸುವ ಕೆಲಸ ಮಾಡಿದರು. ಆದರೆ ಜನತಾ ಪಕ್ಷದವರು ಈ ಸಂದರ್ಭದಲ್ಲಿ ಕನಿಷ್ಟ ಸೌಜನ್ಯ ಸಹ ತೋರಿಸಲಿಲ್ಲ ಎಂದು ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನೊಂದು ವಿಚಾರವೆಂದರೆ. ಈ ಚುನಾವಣೆಯಲ್ಲಿ ಹಲವಾರು ಲೋಪದೋಷಗಳನ್ನು ಕಂಡುಕೊಂಡಿದ್ದೇವೆ. ಅದರಲ್ಲಿ ಸರ್ಕಾರದ ಪಾತ್ರ ಇದೆಯೆಂದು ಹೇಳಬೇಕಾಗುತ್ತದೆ, ಏಕೆಂದರೆ, ಈ ಚುನಾವಣೆಗಳು ನಡೆದಂಥ ಕ್ರಮ, ಹಾಗೂ ಮತದಾರ ಕ್ಷೇತ್ರ ಮತ್ತು ಮತಗಳ ಎಣಿಕೆಗಳನ್ನು ಗಮನಿಸಿದಾಗ, ಈ ಮತದಾನ ಕೇಂದ್ರಗಳನ್ನು ಮಾಡುವಾಗ ಹಲವಾರು ಲೋಪ ದೋಷಗಳಾಗಿವೆ. ತಾವು ನೋಡಿರಬಹುದು, ಈ ಪ್ರಮಾಣದಲ್ಲಿ ತಿರಸ್ಕೃತವಾದ ಮತಗಳ ಸಂಖ್ಯೆಯನ್ನು ಗಮನಿಸಿದಾಗ ಸರಿಯಾದ ಮಾಹಿತಿಯನ್ನು ಮತದಾರರಿಗೆ ಕೊಡದಿರುವುದು ಕಂಡುಬರುತ್ತದೆ. ಸರಿಯಾದ ರೀತಿಯಲ್ಲಿ ಅವರಿಗೆ ತಿಳುವಳಿಕೆ ಕೊಡುವ ಹಾಗೆ ಪ್ರಚಾರ ನಡೆಸಿದ್ದರೆ ಇಷ್ಟೊಂದು ಭಾರಿ ಪ್ರಮಾಣದಲ್ಲಿ ಮತ ಪತ್ರಗಳು ತಿರಸ್ಕೃತವಾಗುತ್ತಿರಲಿಲ್ಲ. ಚುನಾವಣೆ ಸಂದರ್ಭದಲ್ಲಿ ಕೆಲವು ಮತ ಕೇಂದ್ರಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಮತಗಟ್ಟೆಗಳು ಇದ್ದರೆ, ಇನ್ನೂ ಕೆಲವು ಕಡೆ ಎರಡೆರಡು ಚುನಾವಣಾ ಕೇಂದ್ರಗಳು ಇದ್ದರೂ ಸಹ ಕಡಿಮೆಯಾದಂಥ ಪ್ರಸಂಗಗಳನ್ನು ನೋಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಚಾರವನ್ನು ಹೇಳಬಯಸುವುದೇನೆಂದರೆ, ಈ ರಾಜ್ಯಪಾಲರ ಭಾಷಣದಲ್ಲಿ ಸಂಕ್ಷಿಪ್ತವಾಗಿ ಎರಡು ವಿಚಾರಗಳನ್ನು ಹೇಳಿದ್ದರು. ಕಳೆದ ಮೂರು ವರ್ಷಗಳಲ್ಲಿ ಈ ಜನರ ಕಲ್ಯಾಣಕ್ಕಾಗಿ ಸರ್ಕಾರ ವ್ಯಾಪಕ ಕಾರ್ಯಕ್ರಮಗಳನ್ನು ಆರಂಭಿಸಿವೆ ಎಂಬ ವಿಚಾರವನ್ನು ಹೇಳಿದ್ದಾರೆ. ಆದರೆ, ವಿಧಾನಮಂಡಲದಲ್ಲಿ ಕುಳಿತು ನಾವು ಬಡ ಜನರನ್ನು ಉದ್ಧಾರ ಮಾಡುತ್ತೇವೆ ಎಂದು ಘೋಷಣೆ, ಭಾಷಣ ಮಾಡುವುದರಿಂದ ಸಾಲದು. ಬಡಜನರ ಮನೆ ಬಾಗಿಲಿಗೆ ಹೋಗಿ ಅವರು ಪಡತಕ್ಕಂಥ ಬವಣೆಗಳನ್ನು ನೋಡಿದರೆ, ಈ ಒಂದು ಭಾಷಣ ಮಾಡುವಂಥ ನೈತಿಕ ಹಕ್ಕು ಬರುತ್ತಿರಲಿಲ್ಲ. ಏಕೆಂದರೆ ಈಗಾಗಲೇ ಒಂದು ವಿಚಾರವನ್ನು ತಿಳಿಸಿದರು.

೬–೩೦ ಪಿ. ಎಂ.

ಈ ಒಂದು ರಾಜ್ಯದಲ್ಲಿ ೨೪ ಸಾವಿರ ಮತ್ತು ೭ ಸಾವಿರ, ಒಟ್ಟು ೩೧ ಸಾವಿರ ಜನರಿಗೆ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡಿದ್ದಾರೆಂದು ಅಂಕಿ ಸಂಖ್ಯೆ ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ಈ ಹಸಿರು ಕಾರ್ಡು ಎಂದರೆ ಏನು ? ಇದನ್ನು ಗುರುತಿಸುವವರು

ಯಾರು, ಇದರ ಪ್ರಯೋಜನ ಏನು ? ಇವತ್ತು ಈ ಹಸಿರು ಕಾರ್ಡನ್ನು ತಹಶೀಲ್ದಾರರು ಗುರುತಿಸುವುದಿಲ್ಲ, ರೆವಿನ್ಯೂ ಇನ್ಸ್ಪೆಕ್ಟರು ಗುರುತಿಸುವುದಿಲ್ಲ, ಗ್ರಾಮಲೆಕ್ಕಿಗರು ಗುರುತಿಸುತ್ತಾರೆ. ಯಾರಿಗೆ ಈ ಹಸಿರು ಕಾರ್ಡು ಕೊಡಬೇಕಾಗಿಲ್ಲ, ಅಂತಹವರನ್ನು ಇವರು ಗುರುತಿಸುತ್ತಾರೆ. ಯಾರು ಗ್ರಾಮಲೆಕ್ಕಿಗನ ಕೃಪಾಕಟಾಕ್ಷಕ್ಕೆ ಪಾತ್ರರಾಗಿರುತ್ತಾರೆ ಅಥವಾ ಗ್ರಾಮ ಲೆಕ್ಕಿಗನ ಪ್ರೀತಿಗೆ ಪಾತ್ರರಾಗಿರುತ್ತಾರೆ ಅವರು ಮಾತ್ರ ಈ ಹಸಿರು ಕಾರ್ಡಿಗೆ ಪಾತ್ರರಾಗುತ್ತಾರೆ. ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಚಾರ. ಹೆರಿಗೆ ಭತ್ಯದ ಕಾರ್ಯಕ್ರಮ ಹೇಳಿದ್ದಾರೆ. ನಾನು ಮಾನ್ಯ ಸದಸ್ಯರನ್ನು ಅಥವಾ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಈ ಹೆರಿಗೆ ಭತ್ಯವನ್ನು ಯಾವ ರೀತಿಯಾಗಿ ಕೊಡುತ್ತೀರಿ ? ಇದಕ್ಕೆ ಸಮರ್ಪಕವಾದ ಉತ್ತರವನ್ನು ಯಾವ ಸದಸ್ಯರಾದರೂ ಅಥವಾ ಮಂತ್ರಿಗಳಾದರೂ ಕೊಡಲಿ. ಈ ಹೆರಿಗೆ ಭತ್ಯ ಒಟ್ಟು ೩೦೦ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತಾರೆ ಈ ಮುನ್ನೂರು ರೂಪಾಯಿಗಳನ್ನು ಯಾವ ಹಂತದಲ್ಲಿ, ಯಾರ ಮುಖಾಂತರ ಕೊಡುತ್ತಾರೆ ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಜನತಾ ಸರ್ಕಾರ ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಯಾವ ರೀತಿಯಲ್ಲಿ ಅನುಷ್ಠಾನವಾಗುತ್ತಿವೆ ಎನ್ನುವ ಪ್ರಶ್ನೆಯನ್ನು ತಮ್ಮ ಮುಂದಿಡುತ್ತಿದ್ದೇನೆ. ಇನ್ನು ಉಚಿತ ಮನೆ ನಿವೇಶನ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಈ ಮನೆ ನಿವೇಶನಗಳು ಯಾರಿಗೆ ಬೇಕು, ಯಾರಿಗೆ ಬೇಡ ಎಂಬ ಬಗ್ಗೆ ಇವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಕೇಳುತ್ತಿದ್ದೇನೆ. ಇವತ್ತು ಮನೆ ನಿವೇಶನಕ್ಕಾಗಿ ಅರ್ಜಿ ಕೊಟ್ಟವರಿಗೆ, ಮನೆ ನಿವೇಶನ ಕೊಟ್ಟಿಲ್ಲ. ೨,೦೦೦ ರೂಪಾಯಿಗೂ ಕಡಿಮೆ ವರಮಾನ ಇರತಕ್ಕವರಿಗೆ ಮನೆ ನಿವೇಶನ ಕೊಡುತ್ತೇವೆಂದು ಹೇಳುತ್ತಿದ್ದಾರೆ, ಇದು ಸರಿಯಲ್ಲ. ಇದರಿಂದ ಯಾರಿಗೆ ಬೇಕು, ಅಂತಹವರಿಗೆ ಸಿಗುವುದಿಲ್ಲ. ಮತ್ತೊಂದು ವಿಚಾರ. ಜನತಾ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಈ ಜನತಾ ಮನೆಗಳು ಯಾರಿಗೆ ಬೇಕು, ಈ ಮನೆಗಳಿಗೆ ಬೇಕಾದ ಅವಶ್ಯಕತೆಗಳು ಏನು ರೆಕಾರ್ಡ್‌ಗಳು ಏನು ಇವುಗಳನ್ನೆಲ್ಲಾ ವಿಮರ್ಶೆ ಮಾಡಬೇಕಾಗುತ್ತದೆ. ಅವರು ಆದಾಯದ ಸರ್ಟಿಫಿಕೇಟ್ ಕೊಡಬೇಕು. ಯಾರಾದರೂ ಒಬ್ಬ ಗ್ರಾಮ ಲೆಕ್ಕಿಗರು ಇವುಗಳನ್ನು ಬರೆದುಕೊಡುತ್ತಾರೆ. ಈ ಜನತಾ ಮನೆಗಳು ಯಾರಿಗೆ ಬೇಕು ಅವರಿಗೆ ಸಿಕ್ಕುತ್ತಾ ಇಲ್ಲ, ಹುಡ್ಕೋ ಮನೆಗಳು ಸಾಧಾರಣವಾಗಿ ಸಿಕ್ಕುತ್ತವೆಯೋ ಹೊರತು, ಈ ಮನೆಗಳೂ ಸಿಕ್ಕುತ್ತಾ ಇಲ್ಲ. ಇನ್ನು ಚುನಾವಣಾ ಸಮಯದಲ್ಲಿ ಜನತಾ ಪಕ್ಷದವರು ಒಂದು ಘೋಷಣೆಯನ್ನು ಮಾಡಿದರು. ಗೇಣಿದಾರರು ಸರ್ಕಾರಕ್ಕೆ ಕೊಡತಕ್ಕ ಪರಿಹಾರದ ಕಂತನ್ನು ಮನ್ನಾ ಮಾಡುತ್ತೇವೆಂದು ಹೇಳಿದರು. ಇವತ್ತಿನವರೆಗೂ ನಮ್ಮ ಜಿಲ್ಲೆಯ ಗೇಣಿದಾರರಿಗೆ ಈ ಪರಿಹಾರವನ್ನು ಮನ್ನಾ ಮಾಡಿಲ್ಲ ಕೇಳುವುದಕ್ಕೆ ಹೋದರೆ, ಪರಿಹಾರವನ್ನು ಮನ್ನಾ ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಇನ್ನೊಂದು, ಚುನಾವಣಾ ಸಮಯದಲ್ಲಿ ಜನತಾ ಪಕ್ಷದ ಒಂದು ಪ್ರಚಾರ ನೋಡಿದ್ದೇವೆ. ಸೇತು ಬಂಧನ, ಹಳ್ಳಿ ಹೆದ್ದಾರಿ ಎಂದರೆ ಏನು ? ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಸೇತುವೆಗಳು ಆಗಲಿಲ್ಲವೇ, ರಸ್ತೆಗಳು ಆಗಲಿಲ್ಲವೇ ಇವರು ಇದಕ್ಕೇ ಹೊಸ ಹೆಸರು ಕೊಟ್ಟು ಈ ರೀತಿ ಮಾಡುತ್ತಿದ್ದಾರೆಯೋ ಹೊರತು ಇದರಲ್ಲಿ ತಮ್ಮದೆ ಆದಂಥ ಮೂಲ ತತ್ವ ಇಲ್ಲವೆಂದು ಹೇಳುತ್ತೇನೆ.

ಇನ್ನು ಏಕತೆ ಮತ್ತು ಸಮಾನತೆಗಾಗಿ ಉಚಿತ ಸಮವಸ್ತ್ರ ಮತ್ತು ಪುಸ್ತಕಗಳನ್ನು ಹಂಚುವುದು. ಈ ಏಕತೆ ಮತ್ತು ಸಮಾನತೆ ಯಾವ ಭಾರತೀಯನಲ್ಲಿ ಇದೆ, ಇದು ಯಾವ ಜನರಿಗೆ ಸಿಗಬೇಕಾಗಿದೆ ? ಈ ಏಕತೆ ಮತ್ತು ಸಮಾನತೆಯನ್ನು ಚಿಂತಿಸುವ ವರ್ಷದಲ್ಲಿ ನೀವು ಪುಸ್ತಕಗಳನ್ನು ಹಂಚುತ್ತಿದ್ದೀರಿ. ಸಮವಸ್ತ್ರಗಳನ್ನು ಕೇವಲ ಒಂದರಿಂದ ೫ನೇ ಕ್ಲಾಸ್‌ವರೆಗೆ ಮಾತ್ರ ವಿತರಣೆ ಮಾಡಿದರೆ ಸಾಕಾಗುತ್ತದೆಯೇ ? ಹಾಗೂ ಈ ಸಮವಸ್ತ್ರಗಳನ್ನು ಯಾವ ಹಂತದಲ್ಲಿ ಯಾವ ಸಮಯದಲ್ಲಿ ವಿತರಣೆ ಮಾಡುತ್ತಿದ್ದೀರಿ ಎಂದರೆ, ಇದರಿಂದ ಜನರಿಗೆ ಏನೂ ಅನುಕೂಲ ಆಗುತ್ತಿಲ್ಲ. ಸಮವಸ್ತ್ರಗಳು ಸಕಾಲದಲ್ಲಿ ಬರುತ್ತಿಲ್ಲ, ಪಠ್ಯಪುಸ್ತಗಳೂ ಸಕಾಲದಲ್ಲಿ ಬರುತ್ತಿಲ್ಲ. ಹೀಗೆ ಎಲ್ಲವನ್ನೂ ಯಾವುದೋ ಸಮಯದಲ್ಲಿ ಕೊಟ್ಟರೆ ಹೇಗೆ ?

ಅಧ್ಯಕ್ಷರು.—ಮುಕ್ತಾಯ ಮಾಡಿ, ಇದೆಲ್ಲಾ ಬಂದಿದೆ, ಎಲ್ಲಾ ಹೇಳಿದ್ದಾರೆ.

ಶ್ರೀ ಪ್ರತಾಪಚಂದ್ರಶೆಟ್ಟಿ.—ನಾವು ವಿಧಾನಮಂಡಲದಲ್ಲಿ ಕುಳಿತುಕೊಂಡು ರಾಮರಾಜ್ಯವನ್ನು ಸ್ಥಾಪನೆ ಮಾಡುತ್ತೇವೆ, ಗಾಂಧೀಜಿಯವರ ಕನಸನ್ನು ನನಸಾಗಿ ಮಾಡುತ್ತೇವೆ ಎಂದು ಭಾಷಣ ಮಾಡಿದರೆ ಸಾಲದು. ಪ್ರಾಮಾಣಿಕವಾಗಿ ಹಳ್ಳಿಹಳ್ಳಿಗಳಿಗೆ ಹೋಗಿ ಜನರನ್ನು ಸಂಪರ್ಕಿಸಿ, ಜನರ ಸಮಸ್ಯೆಗಳನ್ನು ಅರಿತುಕೊಂಡು ಅದನ್ನು ಹೋಗಲಾಡಿಸಬೇಕೆಂಬ ಮಾತನ್ನು ಹೇಳಿ, ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶಿವಣ್ಣನವರೇ ತಾವು ಹತ್ತು ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಬಿ. ಶಿವಣ್ಣ.—ತಾವು ಅಪ್ಪಣೆ ಕೊಡುವುದನ್ನು ನೋಡಿದರೆ ಮಾತನಾಡಬೇಕೇ, ಬೇಡವೇ ಎಂದು ಹೆದರಿಕೆಯಾಗುತ್ತದೆ.

ಅಧ್ಯಕ್ಷರು.—ನಿಮ್ಮೆಲ್ಲರ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ.

† ಶ್ರೀ ಬಿ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಬೇಕೆಂಬ ನಿಮಿಷದಲ್ಲಿ, ಮಾತನಾಡಿದರೆ ಎಷ್ಟು ಚೆನ್ನಾಗಿರುತ್ತದೋ, ಮಾತನಾಡದೇ ಇದ್ದರೂ ಅಷ್ಟೇ ಚೆನ್ನಾಗಿರುತ್ತದೆ ಎಂಬ ಮನೋಭಾವನೆ ಬರುತ್ತಿದೆ. ಕಬ್ಬಿನ ರಸವನ್ನೆಲ್ಲಾ ತೆಗೆದು ಸಿಪ್ಪೆಯನ್ನು ಮಾಡಿ ಬಿಸಾಕಿದ ರೀತಿಯಲ್ಲಿ, ಈಗ ಎಲ್ಲಾ ಮಾತನಾಡಿ ಮುಗಿಸಿದ ಮೇಲೆ, ತಾವು ನನಗೆ ಐದು ನಿಮಿಷ ಕೊಟ್ಟು ಮಾತನಾಡಿ ಎಂದು ಹೇಳಿದ ಸಂದರ್ಭದಲ್ಲಿ ನಾವು ಸುಮ್ಮನಿರಬೇಕಾಗುತ್ತದೆ. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಒಂದು ಚರ್ಚೆ ನಡೆಯುತ್ತಿದೆ. ಇದನ್ನು ವಿರೋಧಿಸಿ ಕೆಲವು ಮಾತುಗಳನ್ನಾಡತಕ್ಕಂಥ ಸಂದರ್ಭದಲ್ಲಿ, ನಮ್ಮ ಜನತಾ ಪಕ್ಷದ ಸರಕಾರ, ರಾಜ್ಯಪಾಲರ ಮುಖಾಂತರ ಏನು ಒಂದು ಭಾಷಣ ಮಾಡಿಸಿದೆ, ಈ ಭಾಷಣವನ್ನು ನಾವು ನೋಡಿದಾಗ ನಿಜಕ್ಕೂ ಕೂಡಾ ನಮಗೆ ವ್ಯಥೆಯಾಗುತ್ತದೆ. ಏತಕ್ಕೆಂದರೆ ಮಾನ್ಯ ಅಧ್ಯಕ್ಷರೇ, ಇದರಲ್ಲಿ ಇವರು ಏನು ಪಟ್ಟಿ ಮಾಡಿ ಹೇಳಿದ್ದಾರೆ ಅದನ್ನು ನೋಡಿದಾಗ ವ್ಯಥೆಯಾಗುತ್ತದೆ. ಮೊದಲನೆಯದಾಗಿ ರಾಜ್ಯದಲ್ಲಿ ನಡೆದಂಥ ಕೋಮುಗಲಭೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹೆಚ್ಚು ವಿಚಾರಕ್ಕೆ ಹೋಗದೆ ನನ್ನ ಕಣ್ಣಿಗೆ ಕಂಡಂಥ ಕೆಲವು ವಿಚಾರಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಮೈಸೂರು ನಗರದಲ್ಲಿ ಗಲಭೆ ಆದಂಥ ಸಂದರ್ಭದಲ್ಲಿ, ಹಿಂದು ಮುಸಲ್ಮಾನರಲ್ಲಿ ಇರತಕ್ಕಂಥ ಸಹೋದರ ಭಾವನೆಯನ್ನು ಕೆಡಿಸತಕ್ಕಂಥ ರೀತಿಯಲ್ಲಿ ಕೆಲವು ಸಂದರ್ಭದಲ್ಲಿ ಪೊಲೀಸರ ವರ್ತನೆ ಆಗಿದೆ ಎಂದು ನಾನು ಕಣ್ಣಾರೆ ಕಂಡಿದ್ದೇನೆ. ಬೆಂಗಳೂರು ನಗರದಲ್ಲಿ ಈ ಗಲಾಟೆ ಆದ ನಂತರದಲ್ಲಿ, ರಾಜ್ಯದ ಇತರ ಎಲ್ಲಾ ಕಡೆಗಳಲ್ಲೂ ಕೂಡಾ ಪೋಲೀಸರು ಎಚ್ಚರವಹಿಸಿದ್ದರೆ, ಮೈಸೂರಿನಲ್ಲಾಗಲೀ, ತುಮಕೂರಿನಲ್ಲಾಗಲೀ ಆದಂಥ ಘಟನೆಗಳಿಗೆ ಅವಕಾಶವೇ ಇರುತ್ತಿರಲಿಲ್ಲ. ಇದರಲ್ಲಿ ಪೋಲೀಸರು ವಿಫಲರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ವಿಷಯದಲ್ಲಿ ಸಾಕಷ್ಟು ಚರ್ಚೆಯಾಗಿರುವುದರಿಂದ ನಾನು ಹೆಚ್ಚು ವಿಚಾರಕ್ಕೆ ಹೋಗುವುದಿಲ್ಲ ಮತ್ತು ಏನು ಇತ್ತೀಚಿನ ದಿನಗಳಲ್ಲಿ ಅಂದರೆ ಒಂದು ಒಂದೂವರೆ ವರ್ಷದಿಂದ ಜನಗಳಲ್ಲಿ ಸೌಹಾರ್ದ ಮನೋಭಾವನೆ ಏನಿತ್ತು ಅದು ಮಾಯವಾಗುತ್ತಿದೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳನ್ನು ತಾವು ನಡೆಸಿದ್ದೇವೆಂದು ಜನತಾ ಪಕ್ಷದವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ಸಂತೋಷ ಪಡುತ್ತಿದ್ದಾರೆ. ಬಹುಶಃ ಈ ಸದನದ ಮುಖಾಂತರ ತಾನೇ ಬಹುಪರಾಕ್ ಹಾಕಿಕೊಳ್ಳುತ್ತಿದ್ದಾರೆ. ಇದರಿಂದ ನಿಜಕ್ಕೂ ವ್ಯಥೆಯಾಗುತ್ತಿದೆ. ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳನ್ನು ನಡೆಸಿ, ಆ ಸಂಸ್ಥೆಗಳನ್ನು ನಾವೇ ಸ್ಥಾಪಿಸಿದ್ದೇವೆ ಎಂದು ಇವರು ಹೇಳುತ್ತಿದ್ದಾರೆ, ಅದು ದೊಡ್ಡ ವಿಚಾರ ಅಲ್ಲ. ಹಿಂದೆಯೂ ಕೂಡಾ ಪಂಚಾಯತಿಗಳು ಇದ್ದವು, ತಾಲ್ಲೂಕು ಬೋರ್ಡ್‌ಗಳು ಇದ್ದವು, ಜಿಲ್ಲಾ ಸಮಿತಿಗಳು ಇದ್ದವು, ಮತ್ತು ಎಲ್ಲಾ ವ್ಯವಸ್ಥೆ ಕೂಡಾ ಇತ್ತು. ಆದರೆ ಇವತ್ತು ಇವರು ಮಾಡಿರತಕ್ಕ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆಯಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಅವುಗಳು ಯಶಸ್ವಿಯಾಗಿ ನಡೆಯುತ್ತದೆಯೋ ಎಂಬುದರ ಬಗ್ಗೆ ಐದು ವರ್ಷದ ನಂತರ ನೋಡಬೇಕು, ಆಗ ಸಾಧನೆಯಾದರೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಮಾಡಿದ್ದಕ್ಕೂ ಒಂದು ಸಾರ್ಥಕವಾಗುತ್ತದೆ ಎಂದು ಹೇಳುತ್ತೇನೆ. ಆದುದರಿಂದ ಐದು ವರ್ಷ ಕಾದು ನೋಡಬೇಕು. ಮಾನ್ಯ ಅಧ್ಯಕ್ಷರೇ ೧೯೭೮ರಿಂದ ೧೯೮೩ರವರೆಗೆ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಅಸ್ತಿತ್ವದಲ್ಲಿ ಇದ್ದಂಥ ಸಂದರ್ಭದಲ್ಲಿ ಚೆನ್ನಾಗಿ ಆಡಳಿತ ನಡೆದುಕೊಂಡು ಬಂದಿತ್ತು. ಅನಂತರ ೧೯೮೩ರಿಂದ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆ ಆಗುವವರೆಗೆ ಇವರು ಅವುಗಳಿಗೆ ಚುನಾವಣೆ ಮಾಡದೇ, ಪಂಚಾಯತಿ ವ್ಯವಸ್ಥೆಯನ್ನು ಸ್ಥಗಿತವಾಗಿ ಇಟ್ಟುಕೊಂಡು ಅಧಿಕಾರಿಗಳ ಕೈಗೆ ಅಧಿಕಾರವನ್ನು ಕೊಟ್ಟು ಎಲ್ಲವನ್ನೂ ಕೂಡಾ ಅಧ್ವಾನ ಮಾಡಿದ್ದರು. ಚುನಾವಣೆಗಳನ್ನು ಮಾಡುತ್ತೇವೆಂದು ಹೇಳಿ ಎಷ್ಟೋ ವರ್ಷಗಳಾದ ಮೇಲೆ ಈಗ ಚುನಾವಣೆಗಳನ್ನು ಮಾಡಿದ್ದಾರೆ. ಈ ಜಿಲ್ಲಾ ಪರಿಷತ್ತು ವ್ಯವಸ್ಥೆ ಮತ್ತು ಮಂಡಲ್ ಪಂಚಾಯಿತಿ ವ್ಯವಸ್ಥೆ ಎಷ್ಟರ ಮಟ್ಟಿಗೆ ಕಾರ್ಯಗತವಾಗುತ್ತವೆ ಎನ್ನುವುದನ್ನು ಕಾದು ನೋಡಬೇಕು. ನಿಮ್ಮ ಆಸೆ ಎಷ್ಟರ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಟ್ಟಿಗೆ ನೆರವೇರುತ್ತದೆ ಎನ್ನುವುದನ್ನು ಕಾದು ನೋಡಬೇಕಾಗಿದೆ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಹೇಳುವುದಾದರೆ, ತಾವು ಯಾವ ರೀತಿ ಕೆಲಸ ಮಾಡುತ್ತೀರಿ, ಏನು ಮಾಡುತ್ತೀರಿ ಎನ್ನುವುದೇ ಗೋಚರವಾಗುತ್ತಿಲ್ಲ. ನಿಮ್ಮ ವ್ಯವಸ್ಥೆಯನ್ನು ಜನ ನೋಡಿ ಬೇಸತ್ತು ಮುಂದಿನ ೫ ವರ್ಷಗಳಲ್ಲಿ ನಮಗೆ ಒಲವು ತೋರಿಸುತ್ತಾರೆ. ನೀವು ಮಾಡಿದ ಕೆಲಸ ನಿಮಗೆ ಶಾಪವಾಗುತ್ತದೆ, ಇದೇ ಸಂದರ್ಭದಲ್ಲಿ ನಾನು ಇನ್ನೊಂದು ಮಾತನ್ನು ಹೇಳುವುದೇನೆಂದರೆ, ಚುನಾವಣೆಗಳಲ್ಲಿ ಆಳುವ ಪಕ್ಷ ಕೇವಲ ೪೦-೫೦ ಸ್ಥಾನಗಳನ್ನು ಮಾತ್ರ ಹೆಚ್ಚು ಪಡೆದಿದೆ. ಪ್ರತಿಪಕ್ಷದವರು ಇನ್ನು ಸ್ವಲ್ಪ ಶ್ರದ್ಧೆಯಿಟ್ಟು ಕೆಲಸ ಮಾಡಿದ್ದರೆ ಜನತಾ ಪಕ್ಷ ಖಂಡಿತವಾಗಿ ಅಧಿಕಾರಕ್ಕೆ ಬರುತ್ತಿರಲಿಲ್ಲ. ಜನತೆ ಕಾಂಗ್ರೆಸ್ ಪಕ್ಷದ ಕಡೆ ಒಲವು ತೋರಿಸುತ್ತಿದ್ದಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಕೂಡ ಅಧಿಕಾರಕ್ಕೆ ಬಂದಿದೆ. ಈ ಸಂದರ್ಭದಲ್ಲಿ ನಾನು ಜನತಾ ಪಕ್ಷದ ಸರ್ಕಾರಕ್ಕೆ ಒಂದೇ ಒಂದು ಸಲಹೆಯನ್ನು ಕೊಡ ಬಯಸುವುದೇನೆಂದರೆ, ನೀವು ಅಧಿಕಾರವನ್ನು ವಿಕೇಂದ್ರಿಕರಣವನ್ನೇನೋ ಮಾಡಿದ್ದೀರಿ. ಆ ಅಧಿಕಾರ ವಿಕೇಂದ್ರಿಕರಣ ಸುಸೂತ್ರವಾಗಿ ನಡೆಯಬೇಕಾದರೆ ವಿಧಾನ ಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ಪ್ರತಿಪಕ್ಷದವರಿಗೆ ಯಾವ ರೀತಿ ವಿರೋಧಪಕ್ಷದ ನಾಯಕನ ಸ್ಥಾನಮಾನ ಕೊಟ್ಟು ಸರ್ಕಾರಕ್ಕೆ ಅವರಿಂದ ಉತ್ತಮ ಸಲಹೆಗಳನ್ನು ನಿರೀಕ್ಷೆ ಮಾಡುತ್ತೀರೋ ಅದೇ ರೀತಿಯಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಪ್ರತಿಪಕ್ಷದವರಿಗೆ ಉಪಾಧ್ಯಕ್ಷ ಅಥವಾ ಉಪಪ್ರಧಾನರ ಸ್ಥಾನಮಾನ ಕೊಟ್ಟು ಅವರಿಂದ ಸರ್ಕಾರಕ್ಕೆ ಉತ್ತಮ ಸಲಹೆಗಳು ಸಿಗುವಂತೆ, ಜನತೆಗೆ ಅವರಿಂದ ಸಹಾಯವಾಗುವ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕು ಜೊತೆಗೆ ಸಾಮಾನ್ಯ ಜನ ಬಂದು ಪ್ರತಿಪಕ್ಷದವರಿಗೂ ಹಲವಾರು ತೊಂದರೆಗಳನ್ನು ಹೇಳುತ್ತಾರೆ. ಆಗ ಪ್ರತಿಪಕ್ಷದವರು ಉತ್ತಮ ವಿಷಯಗಳ ಬಗ್ಗೆ ಬೆಳಕು ಚೆಲ್ಲಿ ಸರ್ಕಾರದ ಕಣ್ಣು ತೆರೆಸಬಹುದು, ಇದೇ ಸಂದರ್ಭದಲ್ಲಿ ಪ್ರತಿಪಕ್ಷಗಳು ಹೆಚ್ಚು ಸ್ಥಾನಗಳನ್ನು ಪಡೆದಾಗ ಸನ್ಮಾನ್ಯ ಮುಖ್ಯಮಂತ್ರಿಮಂತ್ರಿಗಳು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು. ಅದೇನೆಂದರೆ ಪ್ರತಿಪಕ್ಷ ಎಷ್ಟು ಬಲಾಢ್ಯವಾಗಿರುತ್ತದೆಯೋ ಅಷ್ಟು ಆಡಳಿತದಲ್ಲಿ ಬಿಗಿ ಇರುತ್ತದೆ, ಆದ್ದರಿಂದ ಪ್ರತಿಪಕ್ಷ ಇರಬೇಕು ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಅನಿವಾರ್ಯವಾಗಿ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ಸಕಾಲದಲ್ಲಿ ಸೂಕ್ತವಾದ ಸಲಹೆಗಳನ್ನು, ಸೂಕ್ತವಾದ ಮಾರ್ಗಸೂಚಿಯನ್ನು ಹಾಕಿಕೊಡುವ ಸಲುವಾಗಿ ಪ್ರತಿ ಪಕ್ಷಕ್ಕೂ ಕೂಡ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಸೂಕ್ತವಾದ ಸ್ಥಾನಮಾನ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ನಮ್ಮ ಬೆಂಗಳೂರು ನಗರದಲ್ಲಿ ಸಾರ್ಕ್ ಸಮ್ಮೇಳನವನ್ನು ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿತು. ಆ ಸಾರ್ಕ್ ಸಮ್ಮೇಳನಕ್ಕೆ ಪ್ರಧಾನ ಮಂತ್ರಿಗಳ ಆದಿಯಾಗಿ ಇತರೇ ಅಂತರರಾಷ್ಟ್ರೀಯ ಗಣ್ಯರು ಸಹ ಹಾಜರಾಗಿದ್ದರು. ಆ ಸಂದರ್ಭದಲ್ಲಿ ರಾಜ್ಯ ಸರ್ಕಾರ ಅವರಿಗೆ ತೋರಿಸಿದ ಪ್ರೀತಿ ವಾತ್ಸಲ್ಯಕ್ಕೆ ಅವರು ನಮಗೆ ಕೃತಜ್ಞತೆಯನ್ನು ತೋರಿಸಿದ್ದಾರೆನ್ನುವ ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಅದೇ ಸಂದರ್ಭದಲ್ಲಿ ಬೆಂಗಳೂರು ನಗರವನ್ನು ಆಯ್ಕೆ ಮಾಡಿ, ಆ ಸಮ್ಮೇಳನಕ್ಕೆ ಬೇಕಾದಷ್ಟು ಹಣ ಸಹಾಯವನ್ನು ಕೊಟ್ಟಂತಹ ಪ್ರಧಾನ ಮಂತ್ರಿಗಳಿಗೆ ನಮ್ಮ ರಾಜ್ಯ ಸರ್ಕಾರ ಒಂದು ಕೃತಜ್ಞತೆಯ ಮಾತನ್ನು ಹೇಳಿದ್ದರೆ ನಾನು ಸಹ ಮೆಚ್ಚುಗೆಯನ್ನು ಈಗ ವ್ಯಕ್ತಪಡಿಸುತ್ತಿದೆ. ಆದರೆ ಆ ಒಂದು ಸೌಜನ್ಯವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತೋರಿಸಲಿಲ್ಲ. ಈ ಒಂದು ಅಂಶದಿಂದಲೇ ಗೊತ್ತಾಗುತ್ತದೆ, ತಾವು ಎಷ್ಟು ತಾರತಮ್ಮ ಮನೋಭಾವದವರು ಎಂದು. ಇನ್ನು ೨೦ ಅಂಶಗಳ ಕಾರ್ಯಕ್ರಮವನ್ನು ಮೆಚ್ಚಿ ಕೇಂದ್ರ ಸರ್ಕಾರದವರು ನಮಗೆ ಶಹಭಾಶ್‌ಗಿರಿಯನ್ನು ಕೊಟ್ಟಿದ್ದಾರೆಂದು ತಮ್ಮ ಬೆನ್ನು ತಾವೇ ತಟ್ಟಿಸಿಕೊಳ್ಳುವುದಕ್ಕೆ ಹೊರಟಿದ್ದೀರಿ. ತಾವು ಈ ೨೦ ಅಂಶಗಳ ಕಾರ್ಯಕ್ರಮದಲ್ಲಿ ಬರೀ ಅಂಕಿಅಂಶಗಳನ್ನು ಮಾತ್ರ ಕೊಟ್ಟರೆ ಸಾಕಾಗುವುದಿಲ್ಲ. ಅದು ಕಾರ್ಯಗತವಾಗಿರಬೇಕು. ಇವತ್ತು ಬಾಂಡೆಡ್ ಲೇಬರ್ಸ್ ಇದ್ದಾರೆ. ಅವರ ಪ್ರಗತಿ ನಮ್ಮ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಆಗಿದೆ ? ಅವರಿಗೆ ಎಷ್ಟು ಸೌಲಭ್ಯ ಸಿಕ್ಕಿದೆ ಎನ್ನುವುದನ್ನು ತಾವೇ ಸ್ವತಃ ಹಳ್ಳಿಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಬರೀ ಅಂಕಿಅಂಶಗಳನ್ನು ಕೊಡುವುದರಿಂದ ಅವರು ಉದ್ಧಾರವಾಗುವುದಿಲ್ಲ ಇನ್ನು ಈ ಬಾಂಡೆಡ್ ಲೇಬರ್ಸ್‌ಗೆ ಸೈಟ್‌ಗಳನ್ನು ಕೊಟ್ಟಿರುವ ಬಗ್ಗೆ ತಾವು ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಆದರೆ ನಿಜವಾಗಿಯೂ ನಿಮ್ಮ ಅಂಕಿಅಂಶಗಳ ಪ್ರಕಾರ ಆ ಬಡ ಜನರಿಗೆ ಸೈಟ್‌ಗಳು ಸಿಕ್ಕಿಲ್ಲ. ಇನ್ನು ವನ ನಿರ್ಮಾಣ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇವತ್ತು ಕೇಂದ್ರ ಸರ್ಕಾರದ ಯೋಜನೆಯಾದ ಆರ್.ಎಲ್.ಇ.ಜಿ.ಪಿ. ಯೋಜನೆಯಲ್ಲಿ ಒದಗಿಸಿದ ಹಣವನ್ನು ಉಪಯೋಗಿಸಿಕೊಂಡು ಕೋಟ್ಯಾಂತರ ಸಸಿಗಳನ್ನು ನೆಟ್ಟಿದ್ದೀರಿ. ಅದರಲ್ಲಿ ಈಗ ನೋಡುವುದಕ್ಕೆ ಒಂದು ಸಸಿ ಸಹ ಇಲ್ಲ. ಆದ್ದರಿಂದ ಈ ಭಾಷಣವು ಅತೃಪ್ತಿದಾಯಕವಾದ ಭಾಷಣವೆಂದು ಹೇಳಿ ತಾವು ಇದುವರೆಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಮತ್ತು ಅವರು ಇಟ್ಟಂಥ ವಿಚಾರಗಳು ಸರಿಯಾಗಿಲ್ಲದೇ ಇರುವುದರಿಂದ ಆ ಭಾಷಣವನ್ನು ನಾನು ವಿರೋಧ ಮಾಡಿ, ಅವರು ಪ್ರಸ್ತಾಪ ಮಾಡಿರುವಂಥ ಬರಗಾಲದ ವಿಚಾರದ ಮೇಲೆ ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಬರಗಾಲ ಇದೆ ಎಂಬುದನ್ನು ರಾಜ್ಯಪಾಲರು ಒತ್ತಿ ಹೇಳಿದ್ದಾರೆ. ಬರಗಾಲ ಪರಿಹಾರಕ್ಕೋಸ್ಕರ ಕೇಂದ್ರ ಸರ್ಕಾರದವರು ಕೊಟ್ಟಂಥ ಸಹಾಯ ಧನದ ಬಗ್ಗೆ ಇಲ್ಲಿ ಯಾವುದೇ ವಿಚಾರ ಇಲ್ಲ. ಪ್ರಧಾನಿಗಳಾದ ಶ್ರೀ ರಾಜೀವಗಾಂಧಿಯವರು ನಮ್ಮ ಕರ್ನಾಟಕ ರಾಜ್ಯಕ್ಕೆ ಭೇಟಿ ಕೊಟ್ಟು ಬರಗಾಲದಿಂದ ತತ್ತರಿಸುತ್ತಿದ್ದ ಜನರ ಕಷ್ಟಗಳನ್ನು ವಿಚಾರಿಸಿದ್ದಾರೆ ಹಾಗೂ ಬರಗಾಲ ಪ್ರದೇಶಗಳಿಗೆಲ್ಲಾ ಭೇಟಿಕೊಟ್ಟು ಅಲ್ಲಿಯ ವಾತಾವರಣವನ್ನು ವೀಕ್ಷಣೆ ಮಾಡಿ ಅಲ್ಲಿಯ ಜನರ ಸಂಕಷ್ಟಗಳನ್ನು ತಿಳಿದುಕೊಂಡು ಅವರಿಗೆ ಬೇಕಾದ ರೀತಿಯಲ್ಲಿ ಪರಿಹಾರವನ್ನು ಕೊಡಲಿಕ್ಕೆ ಸಾಕಷ್ಟು ಹಣವನ್ನು ರಾಜ್ಯ ಸರ್ಕಾರಕ್ಕೆ ಒದಗಿಸಿಕೊಟ್ಟಿದ್ದಾರೆ. ಇವತ್ತಿನ ಬರಗಾಲ ಪರಿಸ್ಥಿತಿ ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಷ್ಟೊಂದು ಇಲ್ಲ. ಜನತಾ ಪಕ್ಷದ ಶಾಸಕರು ಎಲ್ಲೆಲ್ಲಿ ಆರಿಸಿ ಬಂದಿದ್ದಾರೋ ಅಲ್ಲಿ ಹೆಚ್ಚಿನ ಬರಗಾಲ ಇದೆ.

ಅಧ್ಯಕ್ಷರು.—ಸೊರ್ಕೆ ಅವರೇ, ನೀವು ಏನೇನೋ ಮಾತನಾಡುತ್ತೀರಿ. ಶಿವಣ್ಣನವರು ನೋಡಿ ಎಷ್ಟು ಚಂದ್ ಆಗಿ ಮಾತನಾಡಿದರು. ಆ ತರಹ ಮಾತನಾಡಿ.

ಶ್ರೀ ವಿನಯಕುಮಾರ್ ಸೊರ್ಕೆ.—ಚುನಾವಣೆಯಾದ ನಂತರ ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆ ಸುಗ್ಗಿಯ ಬೆಳೆಯಲ್ಲಿ ವಿಪರೀತ ನಷ್ಟವಾಗಿ ರೈತರಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಅದಕ್ಕೆ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡುವ ಸಂದರ್ಭದಲ್ಲಿ ಇಂಥ ರೈತರುಗಳಿಗೆ 'ಮಿನಿ ಕಿಟ್' ಅನ್ನು ವಿತರಣೆ ಮಾಡುತ್ತೇವೆಂದು ಹೇಳಿದ್ದಾರೆ. ಈ ಮಿನಿಕಿಟ್‌ನ್ನು ವಿತರಣೆ ಮಾಡುವುದರಿಂದ ರೈತರಿಗೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಇವತ್ತಿನ ದಿವಸಗಳಲ್ಲಿ ಸುಗ್ಗಿ ಬೆಳೆಯನ್ನು ನಂಬಿ ಕೊಂಡಿರತಕ್ಕ ಜನರು ತುಂಬಾ ಕಷ್ಟದಲ್ಲಿದ್ದಾರೆ. ಅವರ ಬೇಸಾಯವೆಲ್ಲಾ ಹಾಳಾಗಿ ಹೋಗಿದೆ. ಸಂಪೂರ್ಣವಾಗಿ ಅದನ್ನೇ ನಂಬಿಕೊಂಡಂಥ ಜನರಿಗೆ ಕಷ್ಟಪರಿಸ್ಥಿತಿ ಬರುವಂಥ ಸಂದರ್ಭ ಇದೆ. ಇವತ್ತು ಅಧಿಕಾರಿಗಳಿಂದ ಬಂದಂಥ ಮಾಹಿತಿ ಸರಿಯಾಗಿರುವುದಿಲ್ಲ ಹಾಗೂ ಸರಿಯಾಗಿ ಬರುತ್ತದೆ ಎನ್ನುವ ನಂಬಿಕೆಯೂ ನಮಗಿಲ್ಲ. ಅದಕ್ಕೋಸ್ಕರ ಮಂತ್ರಿಗಳು ಆ ಪ್ರದೇಶಗಳಿಗೆ ಭೇಟಿಕೊಟ್ಟು ತಾವೇ ಸ್ವತಃ ಅದನ್ನು ವೀಕ್ಷಣೆ ಮಾಡಿ ರೈತರಿಗೆ ಪರಿಹಾರ ಕೊಡುವಂಥ ಕೆಲಸ ಕಾರ್ಯ ಮಾಡಬೇಕೆಂದು ನಾನು ಒತ್ತಾಯಪಡಿಸುತ್ತೇನೆ. ಅದೇ ದೃಷ್ಟಿಯಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಚುನಾವಣೆಗಳ ಮಟ್ಟಿಗೆ ಎಲ್ಲಾ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಮ್ಮ ತಾಲ್ಲೂಕು ಮಟ್ಟಿಗೆ ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿ ಒಬ್ಬರು ತಹಶೀಲ್ದಾರ್ ಇದ್ದಾರೆ, ಅವರು ಅದೇ ತಾಲ್ಲೂಕಿಗೆ ಸೇರಿದವರು. ವರ್ಗಾವಣೆ ಮಾಡುವ ನೀತಿಯ ಮಟ್ಟಿಗೆ ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಅದೇ ತಾಲ್ಲೂಕಿನವರೇ ಆದವರು ಅಲ್ಲಿಯೇ ತಹಶೀಲ್ದಾರ್ ಆಗಿದ್ದಾರೆ, ಅವರನ್ನು ಬೇರೆ ಕಡೆ ವರ್ಗಾವಣೆ ಮಾಡಬೇಕೆಂದು ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಂಡಿದ್ದೆ. ಆ ಸಂದರ್ಭದಲ್ಲಿ ಅದನ್ನು ಪರಿಶೀಲನೆ ಮಾಡುತ್ತೇನೆಂದು ಭರವಸೆ ಕೊಟ್ಟಿದ್ದರು. ಆದರೆ ಅವರನ್ನು ಬೇರೆಕಡೆ ವರ್ಗಾವಣೆ ಮಾಡಲೇ ಇಲ್ಲ. ಚುನಾವಣೆ ಸಂದರ್ಭದಲ್ಲಿ ಅವರ ಮುಖೇನವೇ ಗಡಿ ವಿಂಗಡಣೆ ಮಾಡುವಂಥ ಕೆಲಸ ಕಾರ್ಯ ನಡೆಯಿತು. ಅವರಿಗೆ ಹೊಂದಾಣಿಕೆಯಾಗುವಂಥ ರೀತಿಯಲ್ಲಿ ಗಡಿ ವಿಂಗಡಣೆ ಮಾಡಿದರು. ಚುನಾವಣಾ ಸಂದರ್ಭದಲ್ಲೂ ಕೂಡ ಅವರು ತಮ್ಮ ಕೆಲಸಕ್ಕೆ ರಜಾ ಹಾಕಿ ಚುನಾವಣಾ ಪ್ರಚಾರಮಾಡುವಂಥ ಕೆಲಸ ಮಾಡಿದ್ದಾರೆ. ಬೇರೆ ಹಲವಾರು ಮಾನ್ಯ ಸದಸ್ಯರುಗಳು ಬೇರೆ ಬೇರೆ ರೀತಿಯಾಗಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಕ್ಷೇತ್ರದಲ್ಲಿಯೂ ಕೂಡಾ ನಡೆದಿದೆ. ಈ ರೀತಿಯ ಒಂದು ಕಾರ್ಯಕ್ರಮದಲ್ಲಿ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಚುನಾವಣೆ ನಡೆಯಿತು.

ಅದೇ ರೀತಿಯಲ್ಲಿ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಾರ್ಕ್ ಸಮ್ಮೇಳನದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ವಿಷಯದಲ್ಲಿ ಹೇಳುವುದಾದರೆ, ಆ ಸಮ್ಮೇಳನವು ಬೆಂಗಳೂರಿನಲ್ಲಿ ಜರುಗಬೇಕೆಂಬ ಒಂದು ಬೇಡಿಕೆಯನ್ನು ಇಟ್ಟವರು ಮಾನ್ಯ ಆಸ್ಕರ್ ಫರ್ನಾಂಡಿಸ್‌ನವರು. ಅವರು ಈ ಸಮ್ಮೇಳನದ ಬಗ್ಗೆ ಒಂದು ವರ್ಷಕ್ಕಿಂತ ಮೊದಲೇ ಪತ್ರಿಕೆಗಳಲ್ಲಿ ಈ ವಿಷಯವನ್ನು ಕೊಟ್ಟಿದ್ದರು.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಮ್ಮ ಪ್ರಧಾನ ಮಂತ್ರಿಯವರು ಈ ದಿಶೆಯಲ್ಲಿ ವಹಿಸಿದ ಶ್ರದ್ಧೆ ಬಗ್ಗೆಯಾಗಲೀ, ಅವರ ಒಂದು ಆಸಕ್ತಿಯ ಬಗೆಗಾಗಲೀ, ಈ ಕಾರ್ಯಕ್ರಮವನ್ನು ಇಲ್ಲಿ ನಡೆಸಿಕೊಟ್ಟ ಬಗೆಗಾಗಲೀ ಯಾವ ಪ್ರಸ್ತಾಪವನ್ನೂ ಮಾಡಲಿಲ್ಲ.

ಇದೇ ರೀತಿಯಲ್ಲಿ ಜನರು ಚುನಾವಣೆಯಲ್ಲಿ ಅವರ ಊರಿನ ಅಭಿವೃದ್ಧಿಗೋಸ್ಕರ ಅವರ ಕಷ್ಟ ಸುಖಗಳಲ್ಲಿ ಭಾಗಿಗಳಾಗುತ್ತೇವೆಂದು ನಮ್ಮನ್ನು ಆರಿಸಿ ಕಳುಹಿಸಿರುತ್ತಾರೆ. ನಾವಾದರೂ ನಮ್ಮ ಊರಿನ ಅಭಿವೃದ್ಧಿಗೋಸ್ಕರವಾಗಿ, ಜನರ ಅನುಕೂಲಕ್ಕೋಸ್ಕರವಾಗಿ ಪ್ರಾಮಾಣಿಕವಾಗಿ ಇಲ್ಲಿ ಬಂದು ನಮ್ಮ ಕರ್ತವ್ಯ ನಿರ್ವಹಣೆ ಮಾಡಬೇಕಾಗುತ್ತದೆ. ಆದರೆ ನಾವು ಯಾವ ದೃಷ್ಟಿಯಲ್ಲಿ ಕೆಲಸ ಮಾಡಬೇಕಾಗುತ್ತದೆ, ಯಾವ ರೀತಿಯಲ್ಲಿ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ ಆ ರೀತಿಯಲ್ಲಿ ನಮ್ಮ ಊರಿನ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆನ್ನುವ ದೃಷ್ಟಿಯಲ್ಲಿ ನೋಡಿದಾಗ ಸರಕಾರದವರು ಹೇಳಿದ ಕಾರ್ಯಗಳು ಸರಿಯಾಗಿ ಜಾರಿಗೆ ಬರುತ್ತಿಲ್ಲ. ಕೆಲವೊಂದು ಕಾರ್ಯಕ್ರಮಗಳು ಸ್ಥಗಿತವಾಗಿವೆ. ನಮ್ಮ ಕ್ಷೇತ್ರಕ್ಕೆ ಕಳೆದ ೩–೪ ತಿಂಗಳಿಂದ ವೃದ್ಧಾಪ್ಯವೇತನವಾಗಲೀ, ವಿಧವಾ ವೇತನವಾಗಲೀ, ಸರಿಯಾಗಿ ಸಿಗುತ್ತಿಲ್ಲ ಎಂದು ಅನೇಕರು ದೂರು ಕೊಟ್ಟಿದ್ದಾರೆ. ಅವರಿಗೆ ಇದರಿಂದ ತೊಂದರೆಯಾಗಿದೆ ಎಂದು ನಮ್ಮ ಗಮನಕ್ಕೆ ತಂದಿದ್ದಾರೆ. ಅಂದರೆ ಇವೊತ್ತು ಸರಕಾರ ಯಾವ ರೀತಿಯಲ್ಲಿ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದೆ ಎಂದು ಇದರಿಂದ ಗೊತ್ತಾಗುತ್ತದೆ.

ಹಿಂದೆ ಇದ್ದ ಎನ್. ಆರ್. ಇ. ಪಿ., ಆರ್. ಎಲ್. ಇ. ಜಿ. ಪಿ. ಅಥವಾ ಬೇರೆ ಬೇರೆ ಯೋಜನೆಗಳು ಈಗ ಸಂಪೂರ್ಣವಾಗಿ ಸ್ಥಗಿತವಾಗಿವೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮುಖಾಂತರ ಫಲಾನುಭವಿಗಳನ್ನು ಗುರುತು ಮಾಡಿ, ಅವರಿಗೆ ನೆರವು ಕೊಡತಕ್ಕಂಥ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಹಳ್ಳಿಗಳಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ಮಾನ್ಯ ಸದಸ್ಯರೊಬ್ಬರು ತಮ್ಮ ಕ್ಷೇತ್ರದಲ್ಲಿ ೨೦ ಸೇತುಬಂಧನ ಕಾರ್ಯಕ್ರಮಗಳು ಆಗಿವೆ ಎಂದು ಹೇಳಿದ್ದಾರೆ. ಆದರೆ ನಮ್ಮಲ್ಲಿ ಒಂದೂ ಕೂಡ ಆಗಿಲ್ಲ. ಇದರಲ್ಲಿ ಹೀಗೆ ಕಾರ್ಯಕ್ರಮಗಳ ಹಂಚಿಕೆಯಲ್ಲಿಯೂ ತಾರತಮ್ಯ ಇರಬಹುದು.

ಶಿಕ್ಷಣ ವಿಚಾರದಲ್ಲಿ ಹೇಳುವುದಾದರೆ, ಮಕ್ಕಳಿಗೆ ಪುಸ್ತಕವನ್ನು ಕೊಡುವ ಮೂಲಕ ಅಲ್ಲದೇ ಅಂಗಿ ಚೆಡ್ಡಿಗಳನ್ನು ಹಂಚುವುದರ ಮುಖಾಂತರ ಶಿಕ್ಷಣದ ಸುಧಾರಣೆ ಮಾಡುತ್ತೇವೆ ಎಂದು ಮಾನ್ಯ ರಘುಪತಿಯವರು ಮುಂದೆ ಬಂದಿದ್ದರು. ಆದರಿಂದ ಎಷ್ಟು ಉಪಯುಕ್ತತೆಯನ್ನು ಕಂಡುಕೊಂಡಿದ್ದಾರೆ ಎಂದು ಯೋಚನೆ ಮಾಡಿನೋಡಬೇಕು. ದೇಶದಲ್ಲಿ ಶಿಕ್ಷಣದ ನೀತಿಯನ್ನೇ ಬದಲು ಮಾಡುವ ದಿಶೆಯಲ್ಲಿ ಒಂದು ಅವಕಾಶವನ್ನು ಪ್ರಧಾನಿ ರಾಜೀವ ಗಾಂಧೀಜಿಯವರು ತಂದಿದ್ದಾರೆ. ಅದರ ಮುಖಾಂತರ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ನವೋದಯ ಶಾಲೆಗಳನ್ನು ಪ್ರಾರಂಭ ಮಾಡುವ ಸಂದರ್ಭ ಇದೆ. ಈಗಿನ ರೀತಿಯಲ್ಲಿ ಅಂಗಿ ಚೆಡ್ಡಿಗಳನ್ನು ಹಂಚುವುದರ ಮೂಲಕ ಅಥವಾ ಪುಸ್ತಕಗಳನ್ನು ಪುಕ್ಕಟೆಯಾಗಿ ಹಂಚುವುದರ ಮೂಲಕ ಶಿಕ್ಷಣದ ಸಮಗ್ರ ಸುಧಾರಣೆಯನ್ನು ಪ್ರತಿಪಾದಿಸುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಆದರೆ ಆ ಮೂಲಕ ಶಿಕ್ಷಣದ ಸಮಗ್ರ ಸುಧಾರಣೆ ಸಾಧ್ಯವಿಲ್ಲ. ಸಮಗ್ರ ಶಿಕ್ಷಣ ಸುಧಾರಣೆ ಮಾಡುವುದರ ಕೆಲಸಕಾರ್ಯಗಳಲ್ಲಿ ಎಲ್ಲರೂ ಸಹಕಾರ ಮಾಡಬೇಕಾಗುತ್ತದೆ ಮತ್ತು ಅದೇರೀತಿಯಲ್ಲಿ ಚಿಂತನೆ ಮಾಡಬೇಕಾಗಿದೆ ಎಂದು ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ.

ಒಕ್ಕಲುತನದ ವಿಚಾರದಲ್ಲಿ ಹೇಳುವುದಾದರೆ, ಭೂಸುಧಾರಣೆಯ ಅನುಷ್ಠಾನ ಹೆಚ್ಚಿಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿದೆ. ಆದರೆ ಜಿಲ್ಲೆಯ ಹಲವಾರು ಭೂಮಾಲೀಕರು ಹೈಕೋರ್ಟಿಗೆ ಹೋಗಿ ಒಕ್ಕಲುಗಳು ತಮ್ಮ ಧಣಿಗಳಿಗೆ ಭೂಮಿಯನ್ನು ಪುನಃ ಕೊಡುವ ಪ್ರಸಂಗ ಬಂದಿದೆ. ಹೈಕೋರ್ಟಿನಲ್ಲಿನ ಕೇಸ್‌ಗಳಲ್ಲಿ ಭೂಮಿಯನ್ನು ಉಳುವವರು ಪುನಃ ಭೂಮಾಲೀಕರಿಗೆ ಬಿಟ್ಟು ಕೊಡಬೇಕಾದ ಸಂದರ್ಭಗಳು ಬರುತ್ತಿವೆ. ಹಿಂದೆ ಕಾಂಗ್ರೆಸ್ ಸರಕಾರ ಇರುವಾಗ, ಟ್ರಿಬ್ಯುನಲ್ ಕೆಲಸ ಮಾಡುವಾಗ ಕೇವಲ ರಿಕಾರ್ಡ್ ಮೂಲಕ ಹೋಗದೇ ನಿಜವಾದ ಸಾಕ್ಷಿ ಆಧಾರದ ಮೇಲೆ ಭೂಮಿಯನ್ನು ಕೊಡುವಂತಹ ಒಂದು ಕೆಲಸಕಾರ್ಯವನ್ನು ಮಾಡುತ್ತಿದ್ದರು.

ಆದರೆ ಈಗ ಟ್ರಿಬ್ಯೂನಲ್‌ಗಳಲ್ಲಿ ಅಸಿಸ್ಟೆಂಟ್ ಕಮಿಷನರ್ಸ್ ಅಥವಾ ಮೆಂಬರ್ಸ್ ಅರ್ಜಿದಾರರ ಆರ್‌ಟಿಸಿ ಮತ್ತು ಇತರ ದಾಖಲೆಗಳನ್ನು ಕೇಳಿ ಒಂದು ವೇಳೆ ಅವಿಲ್ಲದೇ ಹೋದರೆ ಪ್ರಕರಣವನ್ನೇ ತೆಗೆದುಕೊಳ್ಳದ ಸಂದರ್ಭಗಳು ಇವೆ. ಇದೇ ರೀತಿ ಅಪಿಲೇಟ್ ಟ್ರಿಬ್ಯೂನಲ್ಸ್‌ನಲ್ಲೂ ಯಾವುದೂ ಸುಗಮವಾಗಿಲ್ಲ. ಇದನ್ನೆಲ್ಲ ಸರ್ಕಾರ ಸರಿಪಡಿಸುವ ಮೂಲಕ ಬಡ ಒಕ್ಕಲಿಗರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ವಂದನಾ ನಿರ್ಣಯವನ್ನು ಶ್ರೀಯುತ ಪ್ರಕಾಶರು ತಂದಿದ್ದಾರೆ. ಅವರ ಬಗ್ಗೆ ವಿರೋಧಿಸಿ ನಾನು ಕೆಲವು ಮಾತುಗಳನ್ನು ಆಡುತ್ತೇನೆ. ಸಮಯ ಬಹಳ ಕಡಿಮೆ ಇರುವುದರಿಂದ ಮಾತಾಡ ಬೇಕಾದ್ದು ಹೆಚ್ಚಿದ್ದರೂ ಕಡಿಮೆ ಮಾಡಿಕೊಳ್ಳಬೇಕಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಬರಗಾಲ ಈ ಸರ್ಕಾರ ಬಂದಾಗಲೇ ಇತ್ತು, ಆದರೆ ಇನ್ನೂ ಹೋಗಿಲ್ಲ ಎನ್ನುವುದು ಕಾಣುತ್ತದೆ. ಈ ಬರಗಾಲದ ನೆಪ ಹೇಳಿಕೊಂಡು ಇವರು ಯಾವುದಕ್ಕೆ ಕೇಳಿದರೂ ಹಣ ಇಲ್ಲ, ಸಂಪನ್ಮೂಲ ಇಲ್ಲ, ಆದ್ದರಿಂದ ದೊಡ್ಡ, ಚಿಕ್ಕ ಯಾವ ಕೆಲಸವನ್ನೂ ಮಾಡಲಾಗುತ್ತಿಲ್ಲ ಎನ್ನುತ್ತಾರೆ. ಹಿಂದಿನ ವರ್ಷಗಳಲ್ಲೇ ಬರಗಾಲ ಇತ್ತೆಂದು ಕೆಲವರು ಹೇಳಿದರು, ಇಲ್ಲ ಎನ್ನಲಾಗುವುದಿಲ್ಲ. ಇದರಲ್ಲಿ ಯಾರ ತಪ್ಪೂ ಇಲ್ಲ. ನಾವು ಮಾಡುವ ಕರ್ಮಗಳು ಎಂಥವಾಗಿರುತ್ತವೋ ಅಂಥ ಫಲ ಮಾತ್ರ ನಮಗೆ ದೇವರಿಂದ ಸಿಗುತ್ತ ದೆಂಬುದು ನಮ್ಮ ಲೆಕ್ಕಾಚಾರ. ಈ ನಾಲ್ಕು ವರ್ಷಗಳಲ್ಲಿ ಬರಗಾಲಕ್ಕಾಗಿ ಕೋಟ್ಯಂತರ ರೂಪಾಯಿ ಗಳನ್ನು ಸರ್ಕಾರ ಖರ್ಚು ಮಾಡಿದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಕೊಡಗುಗಳಲ್ಲಿ ಬರಗಾಲ ಇರುವುದಿಲ್ಲ ಎಂಬುದು ಇವರ ಲೆಕ್ಕ. ಆದರೆ ನಮಗೆ ಬೇರೆ ರೀತಿಯ ತೊಂದರೆಗಳಿವೆ. ದಕ್ಷಿಣ ಕನ್ನಡದಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಉಂಟು. ಅಲ್ಲಿ ಕೊಳವೆ ಬಾವಿಗಳನ್ನು ಮಾಡು ವುದಕ್ಕೆ ಆಗುವುದಿಲ್ಲ. ಬಾವಿಗಳು ಹೆಚ್ಚು ಉಪಯುಕ್ತ. ಪಂಪ್ ಮೂಲಕ ಅವನ್ನು ಜನ ಬಳಸಿ ಕೊಳ್ಳುವ ಹಾಗೆ ಮಾಡಬಹುದು. ಆ ರೀತಿ ಬಾವಿಗಳನ್ನು ಮಾಡಿ ಎಂದರೆ ಇವರು ದುಡ್ಡು ಕೊಡಲಿಲ್ಲ. ಗುಡ್ಡದ ಕೆಳಗಿನ ನಮ್ಮ ಜಾಗದಲ್ಲಿ ಬಂದಂಥ ಮಳೆಯ ನೀರೆಲ್ಲ ಸಮುದ್ರಕ್ಕೆ ಹರಿದು ಹೋಗುವುದರಿಂದ ಜಲಸಮಸ್ಯೆಯನ್ನು ತೀವ್ರವಾಗಿ ಪರಿಗಣಿಸಬೇಕಾಗುತ್ತದೆ.

ಇನ್ನು ಕೋಮು ಸಾಮರಸ್ಯ. ದುರಾದೃಷ್ಟದಿಂದ ನಾಡಿನ ಪತ್ರಿಕೆಯೊಂದರಲ್ಲಿ ಪ್ರಕಟವಾದ ಸಣ್ಣ ಕತೆಯೊಂದರಿಂದ ಕೋಮು ಸಾಮರಸ್ಯ ಛಿದ್ರವಾಗುವ ಪರಿಸ್ಥಿತಿ ಬಂತು ಎಂದು ಹೇಳಿ, ಇಂಥ ಘಟನೆಗಳ ಮೂಲಕ ಈ ನಾಡಿನಲ್ಲಿ ಕೋಮು ಶಕ್ತಿಗಳು ಶಮನವಾಗಿವೆ ಎಂಬುದನ್ನು ನಂಬು ವಂತಿಲ್ಲ ಎಂದು ತಿಳಿಯಬಹುದು ಎನ್ನುವಂಥಾ ಮಾತುಗಳನ್ನು ರಾಜ್ಯಪಾಲರು ಆಡಿದ್ದಾರೆ. ೪೦ ವರ್ಷಗಳ ಕೋಮು ಸಾಮರಸ್ಯ ಬಹುಶಃ ಮೈಸೂರನ್ನು ಮನದಲ್ಲಿಟ್ಟುಕೊಂಡು ಹೇಳಿರಬಹುದು. ಇಂಥ ಕತೆಗಳು ಕೆಟ್ಟ ಮನಸ್ಸಿನಿಂದ ಬರುವಂಥವು. ನಾನು ಮೊದಲೇ ಹೇಳಿದ್ದೇನೆ. ಯಾವುದೇ ಒಂದು ಮತದ ಮೂಲಭೂತ ಸಿದ್ಧಾಂತಕ್ಕೆ ಕೈಹಾಕಿ ಅಹಂಕಾರದಲ್ಲಿ ಸ್ವಾತಂತ್ರ್ಯ ಇದೆಯೆಂದು ಬರೆದರೆ ಅನಾಹುತವಾಗುತ್ತದೆ. ಹಿಂದೂಗಳ ಉಪನಿಷತ್ತನ್ನು ಟೀಕೆ ಮಾಡಿದರೆ ಎಷ್ಟು ತಪ್ಪೋ ಹಾಗೆ ಮುಸಲ್ಮಾನರ ಬಗ್ಗೆ ಹಿಂದೂಗಳು ನಾವು ಪ್ರಗತಿಪರರು, ಪುರೋಗಾಮಿಗಳು ಎಂದುಕೊಂಡು ಬರೆದರೂ ಅಷ್ಟೇ ಅನಾಹುತವಾಗುತ್ತದೆ. ಇದನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು.

೭-೦೦ ಪಿ. ಎಂ.

ಇಂತಹ ಒಂದು ಅನಾಹುತಗಳಿಂದ ಸರಕಾರಕ್ಕೆ ತೊಂದರೆಯಾಯಿತು. ಜನ ಬಂದು ಆ ಪತ್ರಿಕೆಯ ಕಚೇರಿ ಹತ್ತಿರ ಹೋಗಿ ಸಂಪಾದಕರ ಹತ್ತಿರ ಮಾತನಾಡಬೇಕೆಂಬ ಅಭಿಪ್ರಾಯ ಪಟ್ಟರು, ಜನ ಬಹಳ ಜಾಸ್ತಿಯಾಯಿತು. ಸಂದರ್ಭವಶಾತ್ ಅಲ್ಲಿ ಗೋಲೀಬಾರ್ ಆಯಿತು, ಅನೇಕ ಜೀವಗಳು ಹೋಯಿತು. ಅಲ್ಲಿ ಗೋಲಿಬಾರ್ ಮಾಡುವಂತಹ ಅಗತ್ಯವಿರಲಿಲ್ಲ, ಆದರೂ ಗೋಲೀಬಾರ್ ಆಯಿತು. ಆ ಸಮಯದಲ್ಲಿ ಏನಾಗಿತ್ತು ಎಂಬುದನ್ನು ಮಾನ್ಯ ಗೃಹ ಮಂತ್ರಿಗಳು ಸ್ವಲ್ಪ ಹೇಳಿದ್ದಾರೆ. ಇಂತಹ ಅವಕಾಶ ಬರಲಿಕ್ಕೆ ಕಾರಣವೇನು, ಒಬ್ಬ ತನ್ನ ಸ್ವಾತಂತ್ರ್ಯವನ್ನು ಉಪಯೋಗಿಸಿ ಬರೆದಂತಹ ಕಥೆ. ಈ ಕಥೆ ಕೇರಳದಲ್ಲಿ ಬಂದಿಲ್ಲವೇ, ಅದರಲ್ಲಿ ಆ ಪ್ರವಾದಿಗಳ ಹೆಸರನ್ನು ಹಾಕಿ ಅವರ ಎಲ್ಲ ಸಂಬಂಧಿಗಳ ಹೆಸರನ್ನೂ ಕೂಡಹಾಕಿ ಬೇರೆ ರೂಪದಲ್ಲಿ ಬರೆದು ಪ್ರವಾದಿ ಮುಹಮ್ಮದ್ ತೀರಿ ಹೋದ ಎಂದು ಹೇಳಿದ್ದಾರೆ. ಪ್ರವಾದಿ ಎಂದು ಬರೆದದ್ದರಿಂದ, ಅವರನ್ನು ಶಮಾಷೆ ಮಾಡಬೇಕೆಂದು ಹೇಳತಕ್ಕಂತಹ ಲೇಖನವಾದುದರಿಂದಾಗಿ ಜನರು ಕೆರಳುವುದಕ್ಕೆ ಕಾರಣ ವಾಯಿತು. ನಮಗೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ಬಂಡೆಗಲ್ಲಿಗೆ ತಲೆಯನ್ನು ಚಚ್ಚುವುದಲ್ಲ. ಉದಾಹರಣೆಗೆ ಹೇಳುವುದಾದರೆ. ಜರ್ಮನ್‌ನಲ್ಲಿ ಒಬ್ಬ ಮಹಿಳೆ ರಸ್ತೆಯ ಮಧ್ಯದಲ್ಲಿ ಹೋಗುತ್ತಿದ್ದ ಳಂತೆ, ಆಗ ಪೋಲೀಸಿನವನು ಬದಿಗೆ ಹೋಗಿ ಎಂದು ಹೇಳಿದ್ದಕ್ಕೆ ಅವಳು ನನಗೆ ಸ್ವಾತಂತ್ರ್ಯವಿದೆ ಎಂದು ಹೇಳಿ ಹಾಗೇ ಮುಂದುವರೆದಳು. ನಂತರ ಅವಳು ಅರ್ಧ ನಿಮಿಷದಲ್ಲಿ ವಾಹನದ ಕೆಳಗೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಿದ್ದು ಸತ್ತಂತೆ. ಹಾಗೇ ಸ್ವಾತಂತ್ರ್ಯದ ಇತಿಮಿತಿಯನ್ನು ಗ್ರಹಿಸಿ ಬರೆಯಬೇಕು. ಇಂತಹ ಬರಹಗಳು ಇನ್ನು ಮುಂದೆ ಬರದಂತೆ ಸರಕಾರ ನೋಡಿಕೊಳ್ಳಬೇಕು. ಯಾರೋ ಒಬ್ಬರು ಬರೆಯುವಂಥಾದ್ದರಿಂದ ಕೋಟಿಗಟ್ಟಲೆ ಜನರಿಗೆ ತೊಂದರೆ, ಸರಕಾರಕ್ಕೆ ತೊಂದರೆ, ಸೌಹಾರ್ದಕ್ಕೆ ತೊಂದರೆ, ಕೋಮು ಸಾಮರಸ್ಯಕ್ಕೆ ತೊಂದರೆಯಾಗುತ್ತದೆ. ಇಂತಹ ಲೇಖನಗಳು ಬರದ ಹಾಗೆ ಸರಕಾರ ಆದಷ್ಟು ಬೇಗ ಜಾಗ್ರತೆ ವಹಿಸಬೇಕು. ದುರದೃಷ್ಟವಶಾತ್ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ದೊಡ್ಡ ಸನ್ನಿವೇಶ ಇದೇ ರೀತಿಯಲ್ಲಿ ಆಗುವಂತೆ ತೋರುತ್ತಿದೆ. ಅಲ್ಲಿನ ಮುಲ್ಕಿ ವಿಜಯಾ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಮಾವಿನ ಕುಳಿ ಜಯಪ್ರಕಾಶ್‌ರವರು 'ನಿರಾಕರಣ' ಎಂಬ ನಾಟಕವನ್ನು ಬರೆದಿದ್ದಾರೆ. ದಿನಾಂಕ ೧೯ನೇ ಸೆಪ್ಟೆಂಬರ್ ೧೯೮೬ ರಂದು ರಮೇಶ್ ಬಂದಗದ್ದೆಯವರೇ ಇದನ್ನು ಬಿಡುಗಡೆ ಮಾಡಿದ್ದಾರೆ. ಮುಸಲ್ಮಾನರನ್ನು ತಮಾಷೆ ಮಾಡತಕ್ಕಂಥಾದ್ದು, ಪ್ರವಾದಿಗಳನ್ನು ತಮಾಷೆ ಮಾಡುವಂಥಾದ್ದು ಮುಸಲ್ಮಾನ ಮಹಿಳೆಯರ ಆಚಾರವನ್ನು ತಮಾಷೆ ಮಾಡುವಂಥಾದ್ದು ನಡೆದಿದೆ. ಅಲ್ಲಿ ಗಲಾಟೆಯಾಗಿದೆ. ಕಾರ್ಕಳದಲ್ಲಿನ ಸ್ಟೇಷನ್‌ಗೆ ದೂರು ಕೊಟ್ಟಿದ್ದಾರೆ. ಬಂಧನ, ಬಿಡುಗಡೆ ಮಾಡಿದ್ದಾರೆಂದು ನನಗೆ ನೆನ್ನೆ ಬಂದ ವರದಿಯಿಂದ ತಿಳಿಯಿತು. ಇಂತಹ ವಿಚಾರಗಳ ಬಗ್ಗೆ ಸರಕಾರ ಹೆಚ್ಚು ಗಮನ ಕೊಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನಾದರೂ ಘಟನೆ ಸಂಭವಿಸಿದರೆ ಅದು ದೊಡ್ಡದಾಗುತ್ತದೆ, ಇದರಿಂದಾಗಿ ಅನಾಹುತವಾಗುತ್ತದೆ, ನಿರಪರಾಧಿಗಳಿಗೆ ತೊಂದರೆಯಾಗುತ್ತದೆ ಅವರ ಮನೆ, ಆಸ್ತಿ ಪಾಸ್ತಿ ಹೋಗುತ್ತದೆ. ಇಂತಹ ಕಥೆಗಳನ್ನು ಏಕೆ ಬರೆಯಬೇಕು? ಮೂಲಬೂತ ಸಿದ್ಧಾಂತಕ್ಕೆ, ಯಾವುದೇ ಒಂದು ಮತದ ಮೂಲಭೂತಕ್ಕೆ ಕೈಹಾಕಿ ಯಾರಾದರೂ ಏಕೆ ಬರೆಯಬೇಕು. ಮುಸಲ್ಮಾನರು ಹಿಂದೂಗಳ ಬಗ್ಗೆ, ಕ್ರೈಸ್ತರು ಹಿಂದೂಗಳ ಬಗ್ಗೆ, ಹಿಂದೂಗಳು ಕ್ರೈಸ್ತರ ಬಗ್ಗೆ, ಮುಸಲ್ಮಾನರ ಬಗ್ಗೆ ಬರೆಯಬಾರದು. ಇದನ್ನು ಯಾರು ಅರ್ಥ ಮಾಡಿಕೊಳ್ಳಬೇಕು? ಕೋಮು ಸಾಮರಸ್ಯವಿದ್ದರೆ ಮಾತ್ರ ಈ ದೇಶ ಉಳಿಯಲಿಕ್ಕೆ ಸಾಧ್ಯ, ಕೇಂದ್ರದಲ್ಲಾಗಲೀ, ರಾಜ್ಯದಲ್ಲಾಗಲೀ ಪ್ರಗತಿಯನ್ನು ಕಾಣಬೇಕಾದರೆ ಕೋಮು ಸಾಮರಸ್ಯವನ್ನು ಬೆಳೆಸಬೇಕು. ನಾವು ಹಿಂದಿನಿಂದ ಬಹಳ ಚೆಂದದಲ್ಲಿದ್ದವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಯಪ್ರಕಾಶ ಮಾವಿನಕುಳಿ ಬರೆದಿರುವ ''ನಿರಾಕರಣ'' ಪುಸ್ತಕದಿಂದ ಅಲ್ಲಿ ಏನು ಘಟನೆ ಸಂಭವಿಸುತ್ತದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ನಾನು ಸರಕಾರಕ್ಕೆ ಬಿನ್ನಹ ಮಾಡುತ್ತೇನೆ, ಈ ರೀತಿಯ ಪುಸ್ತಕಗಳನ್ನು ಮುಟ್ಟುಗೋಲು ಹಾಕಬೇಕು, ಅವರನ್ನು ಬಂಧನ ಮಾಡಬೇಕು, ಅವರ ಮೇಲೆ ದಾವೆಯನ್ನು ಹಾಕಬೇಕೆಂದು. ಕವಿ ಇವತ್ತು ಹೇಳುತ್ತಾನೆ ''ಐಕ್ಯದ ಅಮೃತದ ರಸಕ್ಕೆ ಜೀವ ಜೀವದ ಬೆಸುಗೆ ಕೂಡಿದರೆ ೧೪ ಲೋಕಗಳು ಸಪ್ತ ಸಾಗರವನ್ನು ಗೆದ್ದು ದಾಟುವ ಶಕ್ತಿ ಭೀಮ ಬಲ ನಮ್ಮಲ್ಲಿ ಉಂಟು'' ಎಂದು. ಐಕ್ಯದ ಅಮೃತದ ರಸಕೆ ಜೀವ ಜೀವದ ಬೆಸುಗೆ, ಅಂದರೆ ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು, ಜೈನರು, ಸಿಕ್ಕರು, ಪಾರ್ಸಿಗಳು, ಒಟ್ಟಿಗೆ ಕೂಡಿದರೆ ಭೀಮ ಬಲ ನಮ್ಮಲ್ಲಿ ಉಂಟು, ೧೪ ಲೋಕವನ್ನು ಸಪ್ತಸಾಗರವನ್ನು ಗೆದ್ದು ಬರಲು ಅನುವು ಮಾಡಿಕೊಡಬೇಕು. ಅದನ್ನು ನಾವು ಅಪೇಕ್ಷೆ ಪಡಬೇಕು. ಕೋಮು ಸಾಮರಸ್ಯವನ್ನು ಬೆಳೆಸಲಿಕ್ಕೆ ನಾವು ಬೇಕಾದಷ್ಟು ಕೆಲಸ ಮಾಡಬೇಕು. ಅದಕ್ಕಾಗಿ ಸರಕಾರ ಇಂತಹ ಲೇಖನಗಳು, ಇಂತಹ ಬರಹಗಳು, ಇಂತಹ ಪುಸ್ತಕಗಳು ಬರುವುದನ್ನು ಹದ್ದಿನ ಕಣ್ಣಿನಲ್ಲಿ ನೋಡಿ ಅಂಥಾದ್ದು ಬರದಂತೆ ಮಾಡಬೇಕೆಂದು ಹೇಳಲು ಇಷ್ಟಪಡುತ್ತೇನೆ. ಇನ್ನು ರಾಜ್ಯಪಾಲರ ಭಾಷಣದಲ್ಲಿ ವಿದ್ಯೆಯ ಬಗ್ಗೆ ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಆನೇಕ ಕಡೆಗಳಲ್ಲಿ ಶಾಲಾ ಕಟ್ಟಡಗಳು ಇಲ್ಲ, ೯೦೦ ಮಾಸ್ಟರ್‌ಗಳು ಇಲ್ಲ, ಅಧ್ಯಾಪಕರುಗಳು ಇಲ್ಲ. ಹೀಗಾದರೆ ವಿದ್ಯಾಭ್ಯಾಸವನ್ನು ಹೇಗೆ ಬೆಳೆಸಲಿಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಈ ಕಡೆ ಕೂಡಾ ಸರ್ಕಾರ ಗಮನ ಕೊಡಬೇಕು. ಶಾಲಾ ಕಾಲೇಜುಗಳನ್ನು ಹೆಚ್ಚು ಮಾಡಬೇಕು ದಕ್ಷಿಣ ಕನ್ನಡ ಜಿಲ್ಲೆಯ ವಿಚಾರವಾಗಿ ಹೇಳುವಂಥಾದ್ದು ಬೇರೆ ಕಡೆ ಯಾವ ರೀತಿ ಇದೆಯೋ ನನಗೆ ಗೊತ್ತಿಲ್ಲ. ಅಧ್ಯಾಪಕರು ೯೦೦ ಜನ ಇಲ್ಲ. ೧೫೦ ಹುಡುಗರಿಗೆ ಒಬ್ಬರೇ ಉಪಾಧ್ಯಾಯರು ಇರುವಂಥ ಪರಿಸ್ಥಿತಿ ಇದೆ. ಈ ಕಡೆ ಕೂಡಾ ಸರ್ಕಾರ ಗಮನ ಕೊಡತಕ್ಕಂಥ ಅಗತ್ಯ ಉಂಟು. ಅದೇ ರೀತಿಯಲ್ಲಿ ಅಪಲೇಟ್ ಕೋರ್ಟ್ ಎಂದು ಮಾಡಿದ್ದೀರಿ. ನಿಜವಾಗಿ ಈ ಅಪಲೇಟ್ ಕೋರ್ಟ್ ಮಾಡಿದ್ದರಿಂದ ನಮ್ಮ ಜಿಲ್ಲೆಯಲ್ಲಿ ಇಷ್ಟರವರೆಗೆ ಒಂದೆರಡು ಕೇಸ್‌ಗಳು ತೀರ್ಮಾನವಾಗಿಲ್ಲ. ಪ್ರತಿಯೊಂದಕ್ಕೂ ವಾಯಿದೆ ಮಾಡುತ್ತಿದ್ದಾರೆ. ಜನರಿಗೆ ಇದರಿಂದ ಉಪಕಾರವಾಗಿಲ್ಲ. ಏತಕ್ಕೆ ವಾಯಿದೆ ಮಾಡುತ್ತಾ ಹೋಗುತ್ತಿದ್ದಾರೋ ನನಗಂತೂ ಗೊತ್ತಿಲ್ಲ. ಅಲ್ಲಿ ಅಧಿಕಾರಲ್ಲದೇತರು ಜನ ಇಲ್ಲ. ಇಬ್ಬರು ಅಧಿಕಾರಿಗಳು ಇರತಕ್ಕಂಥದ್ದು. ಬಡವರಿಗೆ ಉಪಕಾರವಾಗುತ್ತಿಲ್ಲ. ಗ್ರಾಮದ ರೈತನಿಗೆ ಉಪಕಾರ ಸಿಗಲಿಕ್ಕೆ ಸಾಧ್ಯವಿಲ್ಲ. ಈ ಅಪಲೇಟ್ ಕೋರ್ಟ್ ಮಾಡಿದ್ದರಿಂದ ಖಂಡಿತಾ ಬಡವರಿಗೆ, ರೈತನಿಗೆ ತೊಂದರೆಯಾಗುತ್ತಿದೆ ಎಂದು ಕಳೆದ ಬಾರಿ ನಾವು ಹೇಳಿದ್ದೇವೆ. ಇದರ ಬಗ್ಗೆ ಚಿತ್ರಣ ಉಂಟು. ರಾಜ್ಯಪಾಲರ ಭಾಷಣದಲ್ಲಿ ಹೇಳಿಕೊಳ್ಳುವಂಥಾದ್ದು ಏನೇ ಇಲ್ಲ. ಮೊನ್ನೆ

ಶ್ರೀಯುತ ಪ್ರಕಾಶರವರು ಹೇಳಿದರು. ನಾವು ಗ್ರಾಮರಾಜ್ಯವನ್ನು ಗಾಂಧೀಜಿ ಹೆಸರಿನ, ಜಯಪ್ರಕಾಶನಾರಾಯಣ್, ಜವಹರಲಾಲ್ ನೆಹರು ಹೆಸರಿನ ಈ ಗ್ರಾಮ ರಾಜ್ಯವನ್ನು ಹಳ್ಳಿ ಹಳ್ಳಿಗಳಲ್ಲಿ ಕೊಂಡುಹೋಗಿ ಅದರ ಬೇರನ್ನು ಬಿಡಬೇಕು ಎಂದು ಹೇಳಿದ್ದಾರೆ. ಬಹಳ ಒಳ್ಳೆಯ ರೀತಿಯಲ್ಲಿ ಹೇಳಿದ್ದಾರೆ. ಅಲ್ಲಿ ಬೇರು ಬಿಡಬೇಕಾದರೆ ಆ ನೆಲವನ್ನು ಹಸನು ಮಾಡುವುದು ಬೇಡವೇ ? ಇಲ್ಲದಿದ್ದರೆ ಕಾಗೆಯೋ, ಗುಬ್ಬಚ್ಚಿಯೋ ತೆಗೆದುಕೊಂಡು ಹೋಗುತ್ತದೆ. ಉಪ್ಪು, ಒಳ್ಳೆಯ ರೀತಿಯಲ್ಲಿ ಗೊಬ್ಬರ ಹಾಕಿದ್ದರೆ ಅದೇನಾದರೂ ಮಿಕ್ಕಿದ್ದರೆ ಮಾತ್ರ ಬೇರಾ ಹೋಗಲಿಕ್ಕೆ ಸಾಧ್ಯ. ನೀವು ಏನು ಮಾಡಿದ್ದೀರಿ ? ಸಾಕ್ಷರತೆ ಮಾಡಿದ್ದೀರಾ ? ವಿದ್ಯೆಯನ್ನು ಸರಿಯಾಗಿ ಕೊಟ್ಟಿದ್ದೀರಾ ? ಶಿಕ್ಷಿತರನ್ನು ಮಾಡಿದ್ದೀರಾ ? ಪಾನನಿಷೇಧ ಮಾಡಿದ್ದೀರಾ ? ಈ ದುಃಖದುಮ್ಮಾನವನ್ನು ಕಡಿಮೆ ಮಾಡಿ ಆರ್ಥಿಕ ಸ್ಥಿತಿಯಲ್ಲಿ ಮೇಲೆ ಬರುವ ಹಾಗೆ ಮಾಡಿ. ಆಗ ಗ್ರಾಮರಾಜ್ಯವನ್ನು ಮಾಡಿ ಈ ಮಂಡಲ ಪಂಚಾಯಿತಿ ಬಗ್ಗೆ ಯೋಜನೆ ಮಾಡಿ. ಈಗ ಏನಾಗಿದೆ ಎಂದರೆ ದೊಡ್ಡ ಹಂಡೆಯಲ್ಲಿ ನೀರು ಸುರಿಯುತ್ತಿದ್ದೀರಿ, ಅಡಿಯಲ್ಲಿ ತೂತು ಮಾಡುತ್ತೀರಿ. ಆ ತೂತಿನಲ್ಲಿ ನೀರು ಸೋರಿ ಹೋಗುತ್ತಿದೆ, ಇದು ಮುಖ್ಯವಾದುದು ಅಲ್ಲ. ಮಾನ್ಯ ರಾಮಯ್ಯನವರು ಇದಕ್ಕೆ ಸಪೋರ್ಟ್ ಆಗಿ ಮಾತನಾಡುವಾಗ ಹೇಳಿದರು. ಬಡವರಿಗೆ ಮಾಡುತ್ತಿರುವ ಈ ಕೆಲಸದಲ್ಲಿ ೬೦ ಪರೆಸೆಂಟಿನಷ್ಟನ್ನು ದಳ್ಳಾಳಿಗಳು ತಿಂದು ಹಾಕುತ್ತಾರೆ ಎಂದು ಹೇಳಿದ್ದಾರೆ. ಒಳ್ಳೆಯ ಮಾತನ್ನು ಹೇಳಿದ್ದಾರೆ, ಸರ್ಕಾರ ಕೂಡ ಇದರ ಕಡೆ ಗಮನ ಕೊಡಬೇಕು. ಮುಂದಾದರೂ ಕೂಡಾ ಇದು ತಪ್ಪುವಂತಾಗಬೇಕು.

ಈ ಬಡವರಿಗೆ, ರೈತರಿಗೆ ಹೋಗುವುದರಲ್ಲಿ ಈ ದಳ್ಳಾಳಿಗಳು ೬೦ ಪರ್‌ಸೆಂಟಷ್ಟನ್ನು ಅನಾವಶ್ಯವಾಗಿ ತಿಂದು ಹಾಕುತ್ತಿದ್ದಾರೆ. ಸರ್ಕಾರದವರು ಇದರ ಕಡೆ ಗಮನ ಕೊಡಲೇಬೇಕು. ಈ ರೀತಿ ಮಧ್ಯದಲ್ಲಿಯೇ ತಿಂದು ಹಾಕಿದರೆ ಎಲ್ಲಾ ಸೋರಿ ಹೋಗತಕ್ಕಂಥ ಪ್ರಶ್ನೆ. ಆದ್ದರಿಂದ ಈ ಕಡೆಗೆ ಗಮನ ಕೊಡಬೇಕೆಂದು, ಇದು ಬಹಳ ಮುಖ್ಯವಾದುದೆಂದು ನಾನು ಹೇಳುತ್ತೇನೆ. ಇನ್ನು ಅನೇಕ ಮಾತುಗಳನ್ನು ಹೇಳಬೇಕಾಗಿತ್ತು. ಸಮಯದ ಅವಕಾಶ ಇಲ್ಲ. ಅನೇಕ ಮಾತುಗಳು ಮನಸ್ಸಿನಲ್ಲಿ ಇದ್ದರೂ ಕೂಡಾ ಆಗುತ್ತಿಲ್ಲ. ಈ ಮಂಡಲ ಪಂಚಾಯಿತಿ ಮಾಡುವಾಗ ನಮ್ಮ ಉಳ್ಳಾಲದಲ್ಲಿ ೩೦ ಸಾವಿರ ಜನ ಉಂಟು. ಮಂಡಲ ಪಂಚಾಯಿತಿ ಮಾಡಿದ್ದು ಸರಿಯಾಗಿಲ್ಲ. ೪೯ ಜನ ಸದಸ್ಯರು. ನಾವು ಹೇಳಿದೆವು, ಇದು ಸರಿಯಲ್ಲ ಎಂದು ಮೂವತ್ತು ಸಾವಿರ ಜನರನ್ನು ಈ ಒಂದು ಪ್ರದೇಶದಲ್ಲಿ ಹರಿಜನರನ್ನು ಹುಡುಕತಕ್ಕಂಥದ್ದು, ಮಹಿಳೆಯರನ್ನು ಕಾಣುವಂಥಾದ್ದು ಎಷ್ಟು ಕಷ್ಟವಾಗಿದೆ ಎಂದು ಅವರಿಗೇ ಗೊತ್ತು. ಈ ಮಂಡಲ ಪಂಚಾಯಿತಿಯಲ್ಲಿ ಪ್ರತಿಯೊಂದು ಮನೆಯೂ ಕೂಡಾ ಇವತ್ತು ಕುರುಕ್ಷೇತ್ರವಾಗಿದೆ. ಪ್ರತಿಯೊಂದು ಕಡೆಯಲ್ಲೂ ರಾಜಕೀಯ ಆಗಿದೆ. ಅಧ್ಯಕ್ಷ ಉಪಾಧ್ಯಕ್ಷನ ಸ್ಥಾನಕ್ಕೆ ಈಗಾಗಲೇ ಪೈಪೋಟಿ ನಡೆಯುತ್ತಿದೆ. ಜಗಳ ಪ್ರಾರಂಭವಾಗಿದೆ. ಏತಕ್ಕೆ ಹೇಳುತ್ತಿದ್ದೇನೆಂದರೆ ಮೊದಲು ಗ್ರಾಮದಲ್ಲಿಪಂಚಾಯತಿ ರಗಳೆ ಇರಲಿಲ್ಲ. ಈಗ ೫-೬ ಗ್ರಾಮಗಳನ್ನು ಒಟ್ಟಿಗೆ ಸೇರಿಸಿ ಪಂಚಾಯಿತಿ ಮಾಡಿದ್ದರಿಂದ ಆ ಗ್ರಾಮದವನು ಹೇಳುತ್ತಾನೆ, ನನಗೆ ಬರಬೇಕು, ಈ ಗ್ರಾಮದವನು ಹೇಳುತ್ತಾನೆ, ನನಗೆ ಬರಬೇಕು ಎಂದು ಆ ಗ್ರಾಮದವನು ಹೇಳುತ್ತಾನೆ, ನಾನು ಅಧ್ಯಕ್ಷನಾಗಬೇಕು ಎಂದು ಇನ್ನೊಂದು ಗ್ರಾಮದವನು ಹೇಳುತ್ತಾನೆ, ನಾನು ಉಪಾಧ್ಯಕ್ಷ ಆಗಬೇಕೆಂದು. ಈ ಒಂದು ಪೈಪೋಟಿ ಈಗಾಗಲೇ ಶುರುವಾಗಿದೆ. ಇದೊಂದು ಗುಂಪುಗಾರಿಕೆಯಾಗಿ ಯಾವ ರೀತಿಯಲ್ಲಿ ಬರುತ್ತದೆ ಎಂದು ಹೇಳುವುದಕ್ಕೆ ಸಾಧ್ಯ ಇಲ್ಲ. ಒಳ್ಳೆಯ ರೀತಿಯಲ್ಲಿ ಬಂದರೆ ಸಂತೋಷ. ಗ್ರಾಮ ರಾಜ್ಯದ ಬಯಕೆ ಸಾಧನೆ ಬಹಳ ಒಳ್ಳೆಯದು ಯಾರೂ ಅಡ್ಡಿ ಮಾಡುವುದಿಲ್ಲ. ನಾನು ಹೇಳುವಂಥಾದ್ದು ಗ್ರಾಮಪಂಚಾಯಿಂದ ತಾಲ್ಲೂಕು ಬೋರ್ಡ್‌ಗೆ ಹೆಚ್ಚಿನ ಅಧಿಕಾರ, ಹಣ ಕೊಡಬೇಕಾಗಿತ್ತು. ಈ ಚುನಾವಣೆ ಮಾಡಿ ಇಷ್ಟೆಲ್ಲಾ ಹಣವನ್ನು ಖರ್ಚು ಮಾಡುವ ಅಗತ್ಯ ಇರಲಿಲ್ಲ. ಮಂಡಲ ಪಂಚಾಯಿತಿ ಒಮ್ಮೆ, ಪರಿಷತ್ತಿನ ಚುನಾವಣೆ ಒಮ್ಮೆ ಮಾಡುವ ಅಗತ್ಯವಿರಲಿಲ್ಲ. ಎಷ್ಟು ಹಣ ಖರ್ಚು, ಜನರಿಗೆ ಓಟು ಮಾಡುವವರಿಗೆ ಎಷ್ಟು ಕಷ್ಟ. ೨೫ನೇ ತಾರೀಖು ಮಂಡಲ ಪಂಚಾಯಿತಿ ಚುನಾವಣೆ ಎಂದು, ಪುನಃ ೨೦ನೇ ತಾರೀಖು ಎಂದು ಮಾಡಿದಿರಿ. ಈ ರೀತಿಯಲ್ಲಿ ಆದ್ದರಿಂದ ಅನೇಕ ರೀತಿಯ ತೊಂದರೆಗಳಾಗಿವೆ. ಇದರಿಂದ ಅನೇಕ ರೀತಿಯಲ್ಲಿ ವೈಮನಸ್ಸು ಬರುತ್ತದೆ. ಗ್ರಾಮ ಗ್ರಾಮಗಳಲ್ಲಿ ವೈಮನಸ್ಸು ಬರುತ್ತದೆ. ಅದು ಈ ವರ್ಷ ಗೊತ್ತಾಗುವುದಿಲ್ಲ. ಮುಂದಿನ ವರ್ಷ ಗೊತ್ತಾಗುತ್ತದೆ. ಇದು ಒಳ್ಳೆಯದಾಗುವ ಹಾಗೆ ಪ್ರಯತ್ನ ಮಾಡಬೇಕು. ಈಗ ಹೇಗಾದರೂ ಚುನಾವಣೆಯಾಗಿದೆ. ಒಟ್ಟಿನಲ್ಲಿ ಇದರ ಬಗ್ಗೆ ನಮ್ಮ ನಿಮ್ಮ ಉದ್ದೇಶ ಏನು ಎಂದರೆ ಬಡವರಿಗೆ, ರೈತರಿಗೆ ಒಳ್ಳೆಯದಾಗಬೇಕೆನ್ನುವುದು. ಈ ೨೦ ಅಂಶದ ಕಾರ್ಯಕ್ರಮದಲ್ಲಿ ಬಡವರಿಗೆ ಸಹಾಯವನ್ನು ಕೇಂದ್ರ ಸರ್ಕಾರದವರೂ ಮಾಡಿದ್ದಾರೆ, ನೀವೂ ಕೂಡ ಕೆಲವು ಕೆಲಸಗಳನ್ನು ಮಾಡುತ್ತಾ ಇದ್ದೀರಿ. ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಜನಾರ್ಧನ ಪೂಜಾರಿಯವರು ಈ ಸಾಲ ಮೇಳ ಮಾಡುವುದರಲ್ಲಿ ತಪ್ಪು ಏನೂ ಇಲ್ಲ. ನೀವೂ ಸಹ ಬಡವರಿಗೆ ಒಳ್ಳೆಯ ಕೆಲಸಗಳನ್ನು ಮಾಡುತ್ತೀರಿ.

ಬಡವರನ್ನು ಮೇಲಕ್ಕೆ ಎತ್ತುವುದಕ್ಕೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ನಾನು ಹೇಳುತ್ತೇನೆ, ೧೦೦ ಜನ ಅದರಲ್ಲಿ ಸಾಲ ತೆಗೆದುಕೊಂಡಿದ್ದರೆ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ೫೦ ಜನರು ಇರುತ್ತಾರೆ. ಅದನ್ನು ನಾವು ಟೀಕೆ ಮಾಡುವುದು ಸರಿಯಲ್ಲ. ಆದರೆ ಕಾರ್ಯಕ್ರಮಗಳ ಬಗ್ಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿರಬಹುದು. ಆ ವಿಚಾರವಲ್ಲ, ಅವರು ಬಡವರ ಬಗ್ಗೆ ಎಷ್ಟು ಗಮನ ಇಟ್ಟು ಕೆಲಸ ಮಾಡುತ್ತಾರೆ ಅನ್ನುವುದನ್ನು ನಾವು ನೋಡಬೇಕು. ಅವರು ಇದಕ್ಕಾಗಿ ೭೦೦ ಕೋಟಿ ರೂಪಾಯಿ ಏನು ತೆಗೆದು ಇಟ್ಟಿದ್ದಾರೆ ಅದನ್ನು ಸಂಪೂರ್ಣವಾಗಿ ವಿನಿಯೋಗ ಮಾಡಿದ್ದಾರೆಯೇ ಎಂದು ಕೇಳುತ್ತಾರೆ. ಅವರು ಒಂದು ಕಡೆಯಲ್ಲಿ ಹೇಳಿದ ಭಾಷಣ ಏನೆಂದರೆ, ಇದಕ್ಕೆ ಮೊದಲು ೩೦೦ ಕೋಟಿ ರೂಪಾಯಿ ನಿಗದಿಯಾಗಿತ್ತು, ಅದು ನನ್ನ ಸೈನ್‌ಗೆ ಬಂದಾಗ ೨೦೦ ಕೋಟಿ ರೂಪಾಯಿ ಆಗಿತ್ತು. ಇನ್ನು ೧೦೦ ಕೋಟಿ ರೂಪಾಯಿ ಹಾಗೇ ಇತ್ತು ಎಂದು ಹೇಳಿದರು. ಈ ಬಡವರ ಬಗ್ಗೆ ಶ್ರೀ ಜನಾರ್ಧನ ಪೂಜಾರಿಯವರು ಬಹಳ ಅನುಕಂಪ ಇಟ್ಟು ಈ ಸಾಲ ಮೇಳವನ್ನು ಮಾಡಿದ್ದಾರೆ. ಈ ಸಾಲ ಮೇಳ ಇರುವುದು ಸರಿಯಾಗಿದೆ, ನಿಜವಾಗಿಯೂ ಇದು ಬಡವರಿಗೆ ಒಳ್ಳೆಯದಾಗಿದೆ ಎಂದು ಹೇಳುತ್ತೇನೆ, ಕೊನೆಯದಾಗಿ, ಈ ರಾಜ್ಯಪಾಲರ ಭಾಷಣ ಬರೇ ಸಪ್ಪೆಯಾಗಿದೆ ಎಂದು ಹೇಳಿ, ಇದರ ಬಗ್ಗೆ ನಾನು ಬರೆದಂಥಾ ನಾಲ್ಕು ಚರಣಗೀತೆಯನ್ನು ಹಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ಈ ರೀತಿ ಇದೆ :

"ರಾಜ್ಯಪಾಲರ ಭಾಷಣ ಸಪ್ಪೆ ಮಾಮೂಲಿ,
ಉಳ್ಳವರ ಕಡೆಗೆ ಬೀಸಿದೆ ಇದರ ಗಾಳಿ,
ರೈತರಿಗೆ, ಬಡವರಿಗೆ ಏನೂ ಇಲ್ಲ , ಖಾಲಿ,
ಕೋಮು ಸೌಹಾರ್ದಕ್ಕೆ ಸಲಹೆ ಎಲ್ಲಿದೆ ಹೇಳಿ."

ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಸಂಸದೀಯ ಪದಗಳ ಎಕ್ಸ್‌ಪಂಜ್

ಅಧ್ಯಕ್ಷರು.—ಶ್ರೀ ಜಿ. ನಾರಾಯಣ ಕುಮಾರ್‌ರವರು ಭಾಷಣ ಮಾಡಿದಾಗ ಶ್ರೀ ಉಮರಬ್ಬನವರ ಬಗ್ಗೆ ಹೇಳಿದ ಅನ್‌ಪಾರ್ಲಿಮೆಂಟರಿ ಪದಗಳನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

ಎರಡನೆಯದಾಗಿ ನಾಳೆ ದಿವಸ ಪ್ರಶ್ನೋತ್ತರಗಳು ಇಲ್ಲ, ಗಮನ ಸೆಳೆಯುವ ಸೂಚನೆ ಇಲ್ಲ, ಶೂನ್ಯವೇಳೆ ನಿಯಮ ಇಲ್ಲ. ನಾಳೆ ದಿವಸ ಇನ್ನೂ ಮೂರು ಜನರು ಅಂದರೆ ಶ್ರೀಮಾನ್ ವೀರಪ್ಪಮೊಯಿಲಿ, ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀಮಾನ್ ಕೆ.ಹೆಚ್. ಶ್ರೀನಿವಾಸ್‌ರವರು ಮಾತನಾಡಬೇಕಾಗಿದೆ, ಅನಂತರ ೧೧ ಗಂಟೆಗೆ ಉತ್ತರವನ್ನು ಕೊಡುತ್ತಾರೆ.

ಈಗ ಸಭೆಯು ೭–೧೫ ಗಂಟೆಗೆ ಮೇಲಕ್ಕೆದ್ದು ಮತ್ತೆ ನಾಳೆ ಬೆಳಿಗ್ಗೆ ೯ ಗಂಟೆಗೆ ಸೇರುತ್ತದೆ.

(ಸದನವು ೭–೧೫ಕ್ಕೆ ಮುಕ್ತಾಯವಾಗಿ ದಿನಾಂಕ ೧೩–೨–೧೯೮೭ ರಂದು ಶುಕ್ರವಾರ ಬೆಳಗ್ಗೆ ೯ ಗಂಟೆಗೆ ಸೇರಲು ನಿಶ್ಚಯಿಸಿತು)